
ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಜಿ. ಎಂ. ಗುರುಸಿದ್ಧಶಾಸ್ತ್ರಿಗಳು

ಎ. ಕೆ. ರಾಮೇಶ್ವರ

ಕನ್ನಡ ಪುಸ್ತಕ ಪ್ರಾಧಿಕಾರ

ಜಿ.ಎಂ.ಗುರುಸಿದ್ಧಶಾಸ್ತ್ರಿಗಳು

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಜಿ.ಎಂ.ಗುರುಸಿದ್ಧಶಾಸ್ತ್ರಿಗಳು

ಎ. ಕೆ. ರಾಮೇಶ್ವರ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**G.M. GURUSIDDAYA** A Monograph on G.M. Gurusiddaya in Kannada
Written by: A.K. Rameshawar Published By ***B.H Mallikarjun,***
Administrative Officer, Kannada Pustaka Pradhikara, Kannada Bhavana,
J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xx +112
Copies : 1000
Price : ₹ .70.00

ಮೊದಲ ಮುದ್ರಣ : ೨೦೧೨
ಪುಟಗಳು : xx + ೧೧೨
ಪ್ರತಿಗಳು : ೧೦೦೦
ಬೆಲೆ : ₹. ೭೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
ಮೆ॥ ಪ್ರಿಂಟ್ ಪಾರ್ಕ್
೧೪೪೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ಮಾತು

ಜರ್ಮನಿಯ ತತ್ವಜ್ಞಾನಿ, ಭಾಷಾ ಶಾಸ್ತ್ರಜ್ಞ ಮ್ಯಾಕ್ ಮುಲ್ಲರ ಹೇಳುವಂತೆ ನಾವು ವಿಭೂತಿ ಪುರುಷರ, ಐತಿಹಾಸಿಕ ವ್ಯಕ್ತಿಗಳ ಸಮಾಜ ಚಿಂತಕರ ಜೀವನ ಚರಿತ್ರೆಗಳನ್ನು ಓದಿ ಪ್ರಭಾವಿತರಾಗುತ್ತೇವೆ. ಕೂಡಲೇ ನಾವೂ ಅವರಂತೆ ಆಗಿ ಜೀವನ ಪಾವನಗೊಳಿಸಿ ಕೊಳ್ಳುವ ಬಯಕೆಯೂ ಆಗುತ್ತದೆ. ಅಂತೆಯೇ ಮಹಾತ್ಮರ, ಮಹಾಪುರುಷರ ಜೀವನ ಚರಿತ್ರೆಗಳು ಮಾನವ ಜೀವನದ ಬದುಕಿನ ಮೈಲುಗಲ್ಲಗಳಾಗಿವೆ.

ನಮ್ಮ ಮಧ್ಯದಲ್ಲಿಯೇ ಇದ್ದು ಕಾಯಕನಿಷ್ಠೆ ಆಧ್ಯಾತ್ಮ ಸಾಧನೆ ಸಮಾಜ ಚಿಂತನೆಯಲ್ಲಿ ತಮ್ಮ ಜೀವನವನ್ನು ಗಂಧದಂತೆ ತೇಯ್ದು, ಕರ್ಪೂರದಂತೆ ಉರಿಸಿ ಸಮಾಜಕ್ಕೆ ಹೊಸ ಬೆಳಕು ನೀಡಿದ ಜಿ. ಎಂ ಗುರುಸಿದ್ದಶಾಸ್ತ್ರಿಗಳು ನಮ್ಮನ್ನು ಅಗಲಿ ಹೋಗಿದ್ದರೂ ತಮ್ಮ ಸಾತ್ವಿಕ, ತಾತ್ವಿಕ ಬದುಕಿನೊಂದಿಗೆ ನಿತ್ಯ ನಮ್ಮೊಡನೆ ಇದ್ದಾರೆ ಎಂದು ನಮಗೆನಿಸುತ್ತದೆ. ಗುರುಸಿದ್ಧಶಾಸ್ತ್ರಿಗಳು ತ್ರಾಥಸ್ಮರಣೀಯರು. ನಾವು ಅವರನ್ನು ಎಂದೂ ಮರೆಯುವುದಿಲ್ಲ.

"ಕುರಿ ತೋದದೆಯಿಂ ಕಾವ್ಯ ಪ್ರಯೋಗ ಪರಿಣತಿ ಮತಿಗಳ್" ಎಂದು "ಕವಿ ರಾಜ ಮಾರ್ಗ"ದ ಕವಿ ಶ್ರೀವಿಜಯ ಹೇಳಿದಂತೆ ಕಲ್ಯಾಣ ಕರ್ನಾಟಕ ಕನ್ನಡ ನಾಡಿನ ಗಂಡುಮೆಟ್ಟಿನ ಸ್ಥಳ ಈ ಪ್ರದೇಶವನ್ನು ಕುರಿತು ವರಕವಿ ದ. ರಾ. ಬೇಂದ್ರೆ ಅವರು "ಜೈನರ ಕಾವ್ಯದ ಶರಣರ ವಚನದ ದಾಸರ ಹಾಡಿನ ಈ ಬೀಡು " ಎಂದು ಬಾಯ್ತುಂಬ ಬಣ್ಣಿಸಿದ್ದಾರೆ.

ನಿಜವಾಗಿ ಅಚ್ಚ ಕನ್ನಡ ನಾಡು ಬಹುಮನಿ ಸುಲ್ತಾನರ ನಂತರ ಬಂದ ನಿಜಾಮರ ಆಡಳಿತಕ್ಕೆ ಒಳಗಾಗಿ ಈ ಪ್ರದೇಶ ತನ್ನ ಉಸಿರಿನಂತಿದ್ದ ಕನ್ನಡದ ಸೊಲ್ಲನ್ನು ಕಳೆದುಕೊಂಡಿತು. ಆದರೂ ಈ ನೆಲದ ಗುಣ ತನ್ನ ಬಣ್ಣವನ್ನು ಕಳೆದುಕೊಳ್ಳಲಿಲ್ಲ. ಮಣ್ಣಿನ ಮಕ್ಕಳ ಪುಣ್ಯದ ಬಲದಿಂದ ಇಲ್ಲಿ ಆಗಿ ಹೋದ ತತ್ವ ಪದಕಾರರ. ಶರಣರ, ಸಂತರ, ಶಿವಯೋಗಿಗಳ ಆಶುಕವಿಗಳ ಆಡುನುಡಿ ತನ್ನ

ನುಡಿಸಿರಿ–ಸಂಪತ್ತನ್ನು ಕಳೆದು ಕೊಳ್ಳಲಿಲ್ಲ ಸತತ ಆರುನೂರು ವರ್ಷಗಳ ನಂತರ ಐತಿಹಾಸಿಕ ಏರಿಳಿತಕ್ಕೆ ಒಳಗಾಗಿ ನಮ್ಮನ್ನು ಅಗಲಿ ಹೋದ ನಮ್ಮ ತಾಯಿ ಕನ್ನಡ ರಾಜ್ಯ ರಾಜೇಶ್ವರಿ ಮತ್ತೆ ನಮ್ಮನ್ನು ಅಂದರೆ ತನ್ನ ಮಕ್ಕಳನ್ನು ಹುಡುಕಿ ಕೊಂಡು ಬಂದಳು ಪ್ರಯತ್ನದ ಬಲದಿಂದ.

ರೂಮಿ ಟೋಪಿ, ಶೇರವಾನಿ, ಪಾಯಿಜಾಮುಗಳ ಮಧ್ಯದಲ್ಲಿ ಬಿಳಿಯ ಧೋತರ ಉಟ್ಟು ಬಿಳಿಯ ಅಂಗಿಯ ತೊಟ್ಟು ತಲೆಯ ಮೇಲೆ ಬಿಳಿಯ ರುಮಾಲು ಸುತ್ತಿ ಅಚ್ಚ ಕನ್ನಡದಲ್ಲಿ ಮಾತಾಡಿ, ಬರೆದು, ಹಾಡಿ ಕನ್ನಡ ಕರಡು ಪ್ರತಿ ತಿದ್ದಿ ಹೈದರಾಬಾದ ಸಂಸ್ಥಾನದಲ್ಲಿ ಕನ್ನಡ ಕಟ್ಟಿ ಬೆಳೆಸುವವಲ್ಲಿ ಶ್ರೀ ಜಿ. ಎಂ ಗುರುಸಿದ್ಧ ಶಾಸ್ತ್ರಿಗಳು ಅಗ್ರಗಣ್ಯರು. ಅವರ 'ಕಾಯಕವೇ' ಕನ್ನಡ ಕಟ್ಟುವ ಕೆಲಸ.

ಬಾಲ್ಯದಲ್ಲಿ ವಿದ್ಯಾರ್ಜನೆಗಾಗಿ ತುಂಬ ಕಷ್ಟಪಟ್ಟರು. ತಾರುಣ್ಯಕ್ಕೆ ಬರುತ್ತಲೇ ಕನ್ನಡ ಶಾಲೆಯ ಶಿಕ್ಷಕನ ಬಾಳನ್ನು ಅಪ್ಪಿದರು. ಶ್ರೀ ಶಂಕರಾನಂದ ಮುದ್ರಣಾಲಯ ಕೈ ಮಾಡಿ ಕರೆಯಿತು. ಎರಡೂ ಮನೆಗಳ ನಿರ್ವಹಣೆಯ ಭಾರ ಹೆಗಲೇರಿತು. ರಾಮಗಿರಿ ಹಿರೇಮಠ ಒಲಿದು ಬಂದಿತು. ಸಾಮಾಜಿಕ ಕಳಕಳಿ ಬಿಗಿದಪ್ಪಿತು. ಬಂದುದು ಬರಲಿ ಶಿವನ ಕೃಪೆಯೊಂದಿಲಿ ಎಂದು ಹಸನ್ಮುಖದಿಂದ ಸ್ವೀಕರಿಸಿ ತೆರೆದ ಹೃದಯದಿಂದ ಅಚಲ ಮನಸ್ಸಿನಿಂದ ಎಲ್ಲಿಯೂ ಬಿರುಕು ಬೀಳದಂತೆ ಗಟ್ಟಿಯಾಗಿ ನಡೆದುಕೊಂಡು ಕೆಲಸ ಮಾಡತೊಡಗಿದರು. ಈ ಕೆಲಸದಲ್ಲಿ ಅವರಿಗೆ ಮನೆ, ಮುದ್ರಣಾಲಯ, ಮಠ, ಸಮಾಜ ಬೇರೆ ಬೇರೆ ಎಂದು ಭಾವಿಸಲಿಲ್ಲ ಎಲ್ಲವೂ ನನ್ನದು, ಎಲ್ಲರೂ ನನ್ನವರು ಎಂದು ದೂರ ದೃಷ್ಟಿ, ವಿಶಾಲ ಹೃದಯದಿಂದ ಬಾಳಿ ಬದುಕಿ ತಮ್ಮ ತಮ್ಮ ಸತ್ಯ ಶುದ್ಧ ಕಾಯಕದಲ್ಲಿಯೇ ಶಿವನನ ಕಂಡ ಸತ್ಯ ನಿಷ್ಠ ಶರಣ; ಕನ್ನಡದ ಕಟ್ಟಾಳು; ಜಿ. ಎಂ. ಗುರುಸಿದ್ಧಶಾಸ್ತ್ರಿಗಳು.

೧೯೬೨ರಲ್ಲಿ ಜಿ. ಎಂ ಗುರುಸಿದ್ಧಶಾಸ್ತ್ರಿಗಳ ಪರಿಚಯ ನನಗಾಯಿತು. ಅದು ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ನಾನು ನನ್ನ ಪುಸ್ತಕ "ಶರಣುಶರಣಾರ್ಥಿ" ಮುದ್ರಣ ಮಾಡಿಸಲು ಹೋದಾಗ. ಅಂದಿನಿಂದ ನನ್ನ ಅವರ ಸಂಬಂಧ ತಂದೆ–ಮಕ್ಕಳಂತೆ ಇಂತಹ ಕನ್ನಡದ ಕಟ್ಟಾಳು ಕ್ರಿಯಾಶೀಲ ವ್ಯಕ್ತಿಯ ಚರಿತ್ರೆ ಬರೆಯಲು ಅವಕಾಶ ಕಲ್ಪಿಸಿ ಕೊಟ್ಟ ಕನ್ನಡನಾಡಿನ ಖ್ಯಾತ ಕವಿಗಳು, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷರೂ ಆದ ಡಾ. ಸಿದ್ಧಲಿಂಗಯ್ಯ ಅವರಿಗೂ ಅಚ್ಚು ಕಟ್ಟಾಗಿ ಮುದ್ರಣ ಮಾಡಿಸಿದ ಕನ್ನಡ ಪುಸ್ತಕ ಪ್ರಾಧಿಕಾರ ಆಡಳಿತಧಿಕಾರಿಗಳೂ ಆದ ಶ್ರೀ ಬಿ. ಎಚ್ ಮಲ್ಲಿಕಾರ್ಜುನ ಅವರಿಗೂ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಮುಕುಂದನ್

ಅವರಿಗೂ ಪುಸ್ತಕ ಬರೆಯುವಾಗ ನೆರವಾದ ಡಾ: ಮಲ್ಲಿನಾಥ ಜಿ. ಹಿರೇಮಠ ಹಾಗೂ ಶ್ರೀ ಕೆ. ಎಸ್ ಹಿರೇಮಠ ಅವರಿಗೂ ಅನಂತ ವಂದನೆಗಳು: ಅಭಿನಂದನೆಗಳು.

ಎ. ಕೆ. ರಾಮೇಶ್ವರ
ಕಲಬುರ್ಗಿ

# ಪರಿವಿಡಿ


೧. ಮನೆತನದ ಹಿನ್ನೆಲೆ x ix

೨. ಜನನ ಬಾಲ್ಯ ೨

೩. ಬಾಲ್ಯದ ಶಿಕ್ಷಣ ಸಾರಸ್ವತ ಪ್ರಪಂಚ ೫

೪. ಶಹಪುರ ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಪ್ರವೇಶ ೯

೫. ಶಂಕರ ಸಂಸ್ಕ್ರತ ಕಾಲೇಜಿಗೆ ಆಗಮನ ೧೧

೬. ಹೇಳದೆ ಕೇಳದೆ ಸಿಕಂದರಾಬಾದಕ್ಕೆ ಪಯಣ ೧೪

೭. ಸಿಕಂದರಬಾದ ಸಂಸ್ಕೃತ ಕಾಲೇಜಿನಲ್ಲಿ ಮುಂದುವರಿದ ಶಿಕ್ಷಣ ಸಂಕಟಗಳ ಸರಮಾಲೆ ೧೭

೮. ವಾಲಂಟರಿ ಸ್ಕೂಲ ಶಿಕ್ಷಕರು ೨೦

೯. ಜಿ.ಎಂ.ಗುರುಸಿದ್ಧಯ್ಯಶಾಸ್ತ್ರಿಗಳು ೨೨

೧೦. ತಂದೆಯ ಮರಣ ಮನೆಯ ಹೊಣೆಗಾರಿಕೆ ೨೪

೧೧. ಶಿಕ್ಷಕ ವೃತ್ತಿಗೆ ಶರಣು ಹೊಡೆದರು ೨೬

೧೨. ಚುರುಕುಗೊಂಡ ಮುದ್ರಣಾಲಯದ ಕೆಲಸ ೩೦

೧೩. ಬಾಳ ನೊಗಕ್ಕೆ ಹೆಗಲು ಕೊಟ್ಟರು ೩೨

೧೪. ಅಪ್ಪಾ ಬದುಕು ಬಂಗಾರವಾಗಬೇಕು ೩೪

೧೫. ಹೊಣೆ ಗಾರಿಕೆ ಹೆಚ್ಚಿತು; ವ್ಯಕ್ತಿತ್ವ ಅರಳಿತು ೩೭

೧೬. ಮುದ್ರಣ ಕೆಲಸದಲ್ಲಿ ನಾವಿನ್ಯತೆ; ವ್ಯಕ್ತಿತ್ವ ವಿಕಾಸ ೩೯

೧೭. ಮನಸ್ಸು ಇದ್ದಲ್ಲಿ ಮಹಾದೇವನಿರುತ್ತಾನೆ ೪೨

೧೮. ಕೈಮಾಡಿ ಕರೆದ ರಾಮಗಿರಿ ಕಟ್ಟಿಮನಿ ಹಿರೇಮಠ ೪೪

೧೯. ಜಿ.ಎಂ.ಗುರುಸಿದ್ಧಶಾಸ್ತ್ರಿಗಳ ಸುಪರ್ಧಿಯಲ್ಲಿ ರಾಮಗಿರಿ ಕಟ್ಟಿಮನಿ ಹಿರೇಮಠ ೪೬

೨೦. ರಾಮಗಿರಿ ಹಿರೇಮಠದ ಜೀರ್ಣೋದ್ಧಾರ ಮತ್ತು ಅಕ್ಷರ ದಾಸೋಹ ೪೯

೨೧. ನಿಜಾಂ ಪ್ರಾಂತದಲ್ಲಿ ಕನ್ನಡ ಕಟ್ಟಿದವರು ೫೧

೨೨. ಬನದೇಶ್ವರ ಸುಪ್ರಭಾತ ೫೫

೨೩. ಶ್ರೇಷ್ಠ ಸಾಹಿತಿ, ಉತ್ತಮ ವಾಗ್ಮಿ ೫೯

೨೪. "ಹೈದರಾಬಾದ ಕನ್ನಡಿಗ" ವಾರ ಪತ್ರಿಕೆ ೬೨

೨೫. ನನಗಾದ ಅನುಭವ ನಿಮಗೂ ಆದೇತು ೭೦

೨೬. "ವಿಶ್ವ ಕಲ್ಯಾಣ" ವಾರ ಪತ್ರಿಕೆ ಮುದ್ರಣ ೭೨

೨೭. ವಿವಿಧ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸಿದ ಶ್ರೀ ಶಾಸ್ತ್ರಿಗಳು ೭೫

೨೮. ಕಾಯಕದಲ್ಲಿ ನಿಷ್ಠೆ – ಆದಾಯದಲ್ಲಿ ಮಿತಿ ೮೦

೨೯. ವಿವಿಧ ದೇವಾಲಯ, ಮಂದಿರ ಗುಡಿಗಳ ಜೀರ್ಣೋದ್ಧಾರ ೮೫

೩೦. ವೀರಶೈವ ಕಲ್ಯಾಣ ಮಂಟಪ ೮೮

೩೧. ಶಾಸ್ತ್ರಿಗಳ ಷಷ್ಠಬ್ಧಿ ಸಮಾರಂಭ ೯೦

೩೨. ಸಂಸಾರದಲ್ಲಿದ್ದ ಸನ್ಯಾಸಿ ೯೩

೩೩. ಶಾಸ್ತ್ರಿಗಳಿಗೆ ದೊರೆತ ಪ್ರಶಸ್ತಿ, ಸಂದ ಗೌರವ ೯೭

೩೪. ದುಡಿಯ ಬೇಕೆಂಬ ತುಡಿತ ನಿಲ್ಲಲಿಲ್ಲ ೯೯

೩೫. ತಾಲೂಕು ಮಟ್ಟದ ವೀರಶೈವ ಸಮ್ಮೇಳನ ೧೦೨

೩೬. ಕರ್ತವ್ಯದ ಹಾದಿಯಲ್ಲಿ ೧೦೪

೩೭. ಅಂತ್ಯ ಯಾತ್ರೆ ದೊಡ್ಡ ಜಾತ್ರೆ ೧೦೯

೩೮. ಶ್ರದ್ಧಾಂಜಲಿ ಸಭೆ– ಸ್ಮಾರಕ ಭವನ ೧೧೧

# ಮನೆತನದ ಹಿನ್ನೆಲೆ

ಶಹಪುರದಿಂದ ಯಾದಗಿರಿಗೆ ಹೋಗುವ ಮಾರ್ಗದಲ್ಲಿ ಸಿಕ್ಕುವ ನಾಯ್ಕಲ್ಲ ಒಂದು ಸುಸಂಸ್ಕೃತ ಊರು. ಊರಿಗೆ ಹತ್ತಿಕೊಂಡ ವಿಶಾಲವಾದ ಎತ್ತರವಾದ ಗುಡ್ಡ. ನಿಸರ್ಗ ರಮ್ಯವಾದ ಈ ಗುಡ್ಡದಲ್ಲಿ ಪರಮಾನಂದೇಶ್ವರ ಮತ್ತು ಭೀಮಲಿಂಗೇಶ್ವರ ದೇವಾಲಯಗಳು. ಈ ದೇವಾಲಯಗಳು ಪ್ರಕೃತಿಯ ರಮಣೀಯತೆಯನ್ನು ಚೆಲುವಿಕೆಯನ್ನು ಹೆಚ್ಚಿಸಿ ಜನಾಕರ್ಷಣೀಯ ಒಂದು ಪುಣ್ಯ ಸ್ಥಳ, ಪವಿತ್ರ ಕ್ಷೇತ್ರವಾಗಿ ಪರಿಣಮಿಸಿದೆ. ಊರ ಜನರು ಅಷ್ಟೇ ಅಲ್ಲ ಸುತ್ತ ಮುತ್ತಲಿನ ಹತ್ತಾರು ಹಳ್ಳಿಗಳ ಜನರು ಈ ದೇವಾಲಯಗಳಿಗೆ ಬಂದು ತಮ್ಮ ಹರಕೆಯ ಕಾಣಿಕೆಗಳನ್ನು ಅರ್ಪಿಸಿ ಧನ್ಯರಾಗುತ್ತಾರೆ.

ಈ ನಾಯ್ಕಲ್ಲ ಗ್ರಾಮದಲ್ಲಿ ಗುರುಸಿದ್ಧಯ್ಯ ಸ್ಥಾವರಮಠ ಅವರು ತಮ್ಮ ಸತ್ಯ ಶುದ್ಧ ಕಾಯಕದಿಂದಲೂ, ಆಚಾರ–ವಿಚಾರಗಳಿಂದಲೂ ಇಡೀ ನಾಯ್ಕಲ್ಲ ಗ್ರಾಮಕ್ಕೆ ಪೂಜ್ಯ ರೆನಿಸಿದ್ದರು. ಅವರ ಧರ್ಮಪತ್ನಿ ಸಾಧ್ವಿ ಶಿರೋಮಣಿ ಅಷ್ಟಾವರ್ಣ ಸಂಪನ್ನೆ ಗುರುಬಸವಮ್ಮನವರೂ ಕೂಡ ಪತಿಗೆ ತಕ್ಕ ಸತಿಯಾಗಿ ಸ್ವಾಮಿಗಳ ದರ್ಶನಾಶೀರ್ವಾದಕ್ಕೆ ಬರುತಿದ್ದ ಜನರ ಯೋಗಕ್ಷೇಮ ವಿಚಾರಿಸಿ ಅವರ ಹಿತೈಷಿಗಳಾಗಿಬಾಳುತ್ತಿದ್ದರು.

ಗುರುಸಿದ್ದಯ್ಯಸ್ಥಾವರಮಠ ಅವರು ನಾಯ್ಕಲ್ಲ ಗ್ರಾಮದಲ್ಲಿ ಒಂದು ಚಿಕ್ಕ ಕಿರಾಣಿ ಅಂಗಡಿ ಇಟ್ಟುಕೊಂಡು ಉಪ ಜೀವನ ಸಾಗಿಸುತ್ತಿದ್ದರು. ಇವರ ಮೂಲಸ್ಥಳ ಶಹಪುರ ತಾಲೂಕಿನ ಗೋಡಿಹಾಳ. ಗೋಡಿಹಾಳ ಒಂದು ಸಣ್ಣ ಊರು. ಈ ಗ್ರಾಮದಲ್ಲಿ ಒಂದು ಮಠ ಈ ಮಠಕ್ಕೆ ಜಮೀನುಗಳು ಇದ್ದವು ಅವುಗಳನ್ನು ನೋಡಿಕೊಳ್ಳತ್ತ ಆಗಾಗ್ಗೆ ಗೋಡಿಹಾಳ ಗ್ರಾಮಕ್ಕೆ ಬಂದು ಹೋಗುತ್ತಿದ್ದರು.

ಗುರುಸಿದ್ದಯ್ಯ ಮತ್ತು ಗುರುಬಸಮ್ಮ ದಂಪತಿಗಳಿಗೆ ಸಿದ್ದಮ್ಮ ಚೆನ್ನಮ್ಮ ಇಬ್ಬರು ಹೆಣ್ಣುಮಕ್ಕಳು, ಮಲ್ಲಿಕಾರ್ಜುನಯ್ಯ ಬಸವರಾಜಯ್ಯ ಇಬ್ಬರು ಗಂಡು ಮಕ್ಕಳು ಹಿತವಾದ ಚೊಕ್ಕ ಚೆನ್ನದಂತಹ ಸಂಸಾರ. ಹಿರಿಯಮಗ ಮಲ್ಲಿಕಾರ್ಜುನಯ್ಯ

ಗೋಡಿಹಾಳದಲ್ಲಿದ್ದು ಹೊಲಮನೆಗಳನ್ನು ನೋಡಿಕೊಳ್ಳುತ್ತಿದ್ದ. ಚಿಕ್ಕಮಗ ಬಸವರಾಜಯ್ಯ ತಂದೆಯ ಸಂಗಡ ನಾಯ್ಕಲ್ಲ ಗ್ರಾಮದಲ್ಲಿಯೇ ಇರುತ್ತಿದ್ದ.

ಸಾತ್ವಿಕ ಜೀವಿಗಳಾದ ಗುರುಸಿದ್ಧಯ್ಯನವರು ತಮಗಿದ್ದ ಇಬ್ಬರು ಹೆಣ್ಣು ಮಕ್ಕಳನ್ನು ಒಳ್ಳೆಯ ಮನೆತನಗಳಿಗೆ ಧಾರೆಯೆರೆದು ಕೊಟ್ಟಿದ್ದರು. ಹಿರಿಯ ಮಗ ಮಲ್ಲಿಕಾರ್ಜುನಯ್ಯ ಅಕ್ಷರಭ್ಯಾಸಕ್ಕೆ ಮನಸ್ಸು ಮಾಡದೆ ಕೃಷಿ ಜೀವನಕ್ಕೆ ಒತ್ತು ಕೊಟ್ಟು ಮಠ ಮತ್ತು ಜಮೀನುಗಳು ಇದ್ದ ಚಿಕ್ಕ ಹಳ್ಳಿ ಗೋಡಿಹಾಳಕ್ಕೆ ಬಂದು ಬಿಟ್ಟಿದ್ದ. ಬಸವರಾಜಯ್ಯ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿದ,ಅದರಿಂದ ಅವನು ತಂದೆಯ ಹತ್ತಿರ ನಾಯ್ಕಲ್ಲದಲ್ಲಿಯೇ ಉಳಿದುಕೊಂಡು ಊರಲ್ಲಿದ್ದು ತಮ್ಮ ಅಂಗಡಿ ನೋಡಿಕೊಳ್ಳುತ್ತ ಊರ್ದು, ಕನ್ನಡ, ಮರಾಠಿ, ಭಾಷೆಗಳೊಡನೆ ಲೆಕ್ಕ ಪತ್ರ ಬರೆಯುವುದನ್ನು ಕಲಿತುಕೊಂಡರು. ಶಾಸ್ತ್ರ, ಪುರಾಣಗಳನ್ನು ಓದುವದರಕಡೆಗೂ ಗಮನ ಹರಿಸಿ ನಾಯ್ಕಲ್ಲ ಗ್ರಾಮದ ಗಣ್ಯವ್ಯಕ್ತಿಗಳ ಪಂಕ್ತಿಯಲ್ಲಿ ಇವರೂ ಎದ್ದು ಕಾಣ ತೊಡಗಿದರು.

ಬಸವರಾಜಯ್ಯನವರು ಕ್ರಾಂತಿಕಾರಿ ಮನೋಧರ್ಮದವರಾಗಿದ್ದರು. ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಹಂಬಲವುಳ್ಳವರಾಗಿದ್ದರು. ಮಗನ ಈ ಮನೋಧರ್ಮ ಗಮನಿಸಿ ತಂದೆ-ತಾಯಿಗಳು ಹಿರಿ ಹಿರಿ ಹಿಗ್ಗುತ್ತಿದ್ದರು ಬೆಳೆದು ನಿಂತ ಈ ಇಬ್ಬರೂ ಮಕ್ಕಳ ಮದುವೆ ಮಾಡಲು ತಾಯಿ-ತಂದೆಗಳು ನಿರ್ಧರಿಸಿದರು. ಹಿರಿಯ ಮಗ ಮಲ್ಲಿಕಾರ್ಜುನಯ್ಯನವರಿಗೆ ಶಹಪುರ ಪಟ್ಟಣದ ದೇಗಾಂವ ಮಠದ ಮುರುಗಯ್ಯನವರ ಸುಪುತ್ರಿ ನೀಲಮ್ಮನನ್ನು, ಬಸವರಾಜಯ್ಯನವರಿಗೆ ಯಾದಗಿರಿ ಪಟ್ಟಣದ ಬಂಗಿನವರ ಮನೆತನದ ಸುಪುತ್ರಿ ಶರಣಮ್ಮನವರನ್ನು ನಿಶ್ಚಯಿಸಿ ಒಂದೇ ಹಂದರದಲ್ಲಿ ಅತ್ಯಂತ ಸರಳ, ಸುಂದರವಾಗಿ ಮದುವೆಯ ಕಾರ್ಯ ಮುಗಿಸಿದರು. ಮಲ್ಲಿಕಾರ್ಜುನಯ್ಯ ಗೋಡಿಹಾಳದಲ್ಲಿ, ಬಸವರಾಜಯ್ಯ ನಾಯ್ಕಲ್ಲದಲ್ಲಿ, ತಮ್ಮ ತಮ್ಮ ಸಂಸಾರ ಸಾಗಿಸಿದರು. ಮಕ್ಕಳು ಮಾಡುತ್ತಿದ್ದ ಸುಖದ ಸಂಸಾರ ಕಣ್ಣಾರೆ ಕಾಣುತ್ತ ಇಹ ಲೋಕಯಾತ್ರೆ ಮುಗಿಸಿದರು.



# ಜನನ–ಬಾಲ್ಯ

ಗೋಡಿಹಾಳದಲ್ಲಿ ನೆಲೆಸಿದ ಅಣ್ಣ ಮಲ್ಲಿಕಾರ್ಜುನಯ್ಯ, ನಾಯ್ಕಲ್ಲದಲ್ಲಿ ಇರುತ್ತಿದ್ದ ಬಸವರಾಜಯ್ಯ ತುಂಬ ಅನ್ಯೋನ್ಯವಾಗಿದ್ದರು. ಬಸವರಾಜಯ್ಯ ತಂದೆಯ ಮಾರ್ಗದರ್ಶನಲ್ಲಿ ಕನ್ನಡ–ಮರಾಠಿ, ಸಂಸ್ಕೃತ ಭಾಷೆಗಳನ್ನೂ ಚೆನ್ನಾಗಿ ಓದಿ ಪಂಡಿತರೆನಿಸಿಕೊಂಡರು ಹಾಗೆಯೇ ರಾಜ್ಯ ಭಾಷೆ ಉರ್ದುವಿನಲ್ಲಿಯೂ ಬಸವರಾಜಯ್ಯನವರಿಗೆ ಅಸಕ್ತಿ, ಹೀಗೆ ಬಹು ಭಾಷಾ ಪಂಡಿತರಾದ ಬಸವರಾಜಯ್ಯನವರು ತಮ್ಮ ಪೂರ್ವಜರು ನೆಲೆಸಿದ ಹಳ್ಳಿ ಗೋಡಿಹಾಳವನ್ನು ಸ್ಮರಿಸಿಕೊಂಡು ಗೋಡಿಹಾಳ ಮಠೀಯ ಬಸವರಾಜಯ್ಯ ಶಾಸ್ತ್ರಿಗಳೆಂದೆ ಜನಮನ್ನಣೆಗೆ ಪಾತ್ರರಾದರು.

ಕೃಷಿ ಕಾರ್ಯವನ್ನು ನಂಬಿಕೊಂಡು ಹಳ್ಳಿಯಲ್ಲಿ ವಾಸಿಸುತ್ತಿದ್ದ ಅಣ್ಣ ಮಲ್ಲಿಕಾರ್ಜುನಯ್ಯನವರ ಹತ್ತಿರ ಆಗಾಗ್ಗೆ ಬಂದು ಅವರ ಯೋಗ ಕ್ಷೇಮ ನೋಡಿಕೊಂಡು ಹೋಗುತ್ತಿದ್ದರು. ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು.

ಮಲ್ಲಿಕಾರ್ಜುನಯ್ಯನವರು ಸಹ ಆಗಾಗ್ಗೆ ನಾಯ್ಕಲ್ಲ ಗ್ರಾಮಕ್ಕೆ ಬಂದು ತಾಯಿ–ತಂದೆ ಸಹೋದರ ಬಸವರಾಜಯ್ಯ ಶಾಸ್ತ್ರಿ ಮತ್ತು ಅವರ ಧರ್ಮಪತ್ನಿ ಶರಣಮ್ಮನವರನ್ನು ಕಂಡು ಪ್ರೀತಿಯಿಂದ ಮಾತಾಡಿಸಿಕೊಂಡು ಹೋಗುತ್ತಿದ್ದರು. ಹೀಗೆ ಬೇರೆ ಬೇರೆ ಊರುಗಳಲ್ಲಿ ನೆಲೆಸಿದ್ದ ಅಣ್ಣ–ತಮ್ಮ ಇಬ್ಬರು ತುಂಬ ಅನ್ಯೋನ್ಯವಾಗಿದ್ದರು ಇವರಿಬ್ಬರು ಸಾಗಿಸಿದ ಸಂಸಾರವನ್ನು ಕಂಡು ತಾಯಿ–ತಂದೆಗಳಿಬ್ಬರೂ ತುಂಬ ಸಂತೋಷ ಪಡುತ್ತಿದ್ದರು.

ಗೋಡಿಹಾಳದಲ್ಲಿ ನೆಲೆಸಿದ ಮಲ್ಲಿಕಾರ್ಜುನಯ್ಯ ಮತ್ತು ನೀಲಮ್ಮ ದಂಪತಿಗಳಿಗೆ ಕ್ರಮೇಣ ಐದು ಜನ ಮಕ್ಕಳು ಜನಿಸಿದರು ಚೊಚ್ಚಲು ಹೆಣ್ಣು ಮಗಳು ಹುಟ್ಟಿದಳು. ಎರಡನೆಯವರಾಗಿ ಈ ಪುಸ್ತಕದ ಚರಿತ್ರೆ ನಾಯಕ ಜಿ.ಎಂ.ಗುರುಸಿದ್ಧಶಾಸ್ತ್ರಿಗಳು ಜನಿಸಿ ಬಂದರು. ಹುಟ್ಟಿದ ದಿನಾಂಕ ೨ನೇ ನವೆಂಬರ್ ೧೯೧೫ ಶಾಲಿವಾಹನ ಶಕೆ ೧೮೩೭ ರಾಕ್ಷಸ ನಾಮ ಸಂವತ್ಸರ ಮಿತಿ ಕಾರ್ತಿಕ ಶುದ್ಧ ಮುಹೂರ್ತದಲ್ಲಿ.

ಹೆಣ್ಣು ಮಗಳ ಬೆನ್ನು ಮೇಲೆ ಜನಿಸಿ ಬಂದ ಗಂಡುಮಗು ದೆಶವಾನ್

ಆಗುತ್ತಾನೆಂದು ಜನಪದರ ನಂಬಿಕೆ ಅದೇನೆ ಇರಲಿ ಮಲ್ಲಿಕಾರ್ಜುನಯ್ಯನವರು ತಮ್ಮ ಉದರದಲ್ಲಿ ಜನಿಸಿ ಬಂದ ಗಂಡು ಮಗುವಿಗೆ ತಮ್ಮ ತಂದೆಯ ಹೆಸರು ಗುರುಸಿದ್ಧಯ್ಯ ಎಂದು ನಾಮಕರಣ ಮಾಡಿದರು ಮೂರನೇ ಮಗನೇ ಚನ್ನಬಸವಯ್ಯ ನಾಲ್ಕನೇ ಐದನೇ ಮಕ್ಕಳು ಒಂದು ಗಂಡು ಒಂದು ಹೆಣ್ಣು ಮಗು ಜನಿಸಿದರೂ ಬಾಲ್ಯದಲ್ಲಿಯೇ ಮರಣವನ್ನಪ್ಪಿದರು. ಆರನೇ ಮಗು ಶಂಭುಲಿಂಗಯ್ಯ, ಏಳನೇ ಮಗು ಗುರುಬಸಯ್ಯ ಹೀಗೆ ಮಲ್ಲಿಕಾರ್ಜುನಯ್ಯ-ನೀಲಮ್ಮ ದಂಪತಿಗಳಿಗೆ ದೊರೆತ ಮಕ್ಕಳ ಸಂಪತ್ತು ಮಠದ ನೆಮ್ಮದಿಯನ್ನು ಹೆಚ್ಚಿಸಿತು. ಎಲ್ಲ ಮಕ್ಕಳಲ್ಲಿ ಹಿರಿಯ ಮಗ ಗುರುಸಿದ್ಧಯ್ಯನ ಮೇಲೆ ತಾಯಿ-ತಂದೆಗಳ ಪ್ರೀತಿ ಅಪಾರವಾಗಿತ್ತು. ಜಿ.ಎಂ ಬಸವರಾಜಯ್ಯಶಾಸ್ತ್ರಗಳಂತು ಬಾಲಕ ಗುರುಸಿದ್ಧಯ್ಯನನ್ನು ಕಂಡು ಹಿರಿ ಹಿರಿ ಹಿಗ್ಗುತ್ತಿದ್ದರು. ಮನೆಯಬಳಗಕ್ಕೆಲ್ಲ ಮುದ್ದಿನ ಮಗುವಾಗಿ ಬೆಳೆಯ ತೊಡಗಿದ ಗುರುಸಿದ್ಧಯ್ಯ.

ಗುರುಸಿದ್ಧಯ್ಯ ತುಂಬ ಚೆಲುವುಳ್ಳ, ಲಿಂಗ ಕಳೆಯುಳ್ಳ ಬಾಲಕ, ವಿಶಾಲವಾದ ಹಣೆ, ನೀಟಾದ ಮೂಗು, ಅಗಲವಾದ ಕಣ್ಣುಗಳು ತುಂಬಿದ ಗಲ್ಲ. ತೀಡಿದ ಗದ್ದ, ತೆಳ್ಳಗೆ, ಬೆಳ್ಳಗೆ, ಎದ್ದು ಕಾಣುವ ಗುರುಸಿದ್ಧಯ್ಯನ ಮುಖದಲ್ಲಿ ಲಿಂಗ ಕಳೆ ಕಂಗೊಳಿಸುತ್ತಿತ್ತು.

ಮಲ್ಲಿಕಾಜುನಯ್ಯ ಮತ್ತು ನೀಲಮ್ಮ ದಂಪತಿಗಳಿಗೆ ಉಳಿದ ಮೂರು ಮಕ್ಕಳಿಗಿಂತಲೂ ಗುರುಸಿದ್ಧಯ್ಯನ ಮೇಲೆ ಎಲಿಲ್ಲದ ಪ್ರೀತಿ, ಅಕ್ಕರೆ ಮಮತೆ, ಕಕ್ಕ ಜಿ.ಎಂ.ಬಸವರಾಜಯ್ಯ= ಶಾಸ್ತ್ರಿಗಳಿಗಂತೂ ಬಾಲಕ ಗುರುಸಿದ್ಧಯ್ಯನನ್ನು ಎತ್ತಿ ಮುದ್ದಾಡಿದ್ದೇ ಮುದ್ದಾಡಿದ್ದು.

ಬಾಲಕ ಗುರುಸಿದ್ಧಯ್ಯ ಮಾತನಾಡಿದರೆ ಮುತ್ತು ಉದುರಿದಂತೆ, ಬೆಳಕು ಹರಿದಂತೆ, ಬಾಸವಾಗುತ್ತಿತ್ತು. ಮಾತಿನಲ್ಲಿ ಅಡಗಿದ್ದ ಜಾಣ್ಮೆ, ಕೌಶಲ್ಯ, ಎಂತಹರ ಮನವನ್ನು ಸೂರೆಗೊಳ್ಳುವಂತಿತ್ತು. ಪೂಜೆ-ಪಾಠಗಳಿಂದ ಕೂಡಿದ ಮಠದ ವಾತಾವರಣ ಬಾಲಕ ಗುರುಸಿದ್ಧಯ್ಯನ ಮೇಲೇ ತುಂಬ ಪ್ರಭಾವ ಬೀರಿದ್ದು ಅವನ ನಿತ್ಯದಿನಚರಿಯಲ್ಲಿ ಕಂಡು ಬರುತ್ತದೆ. ಹೀಗೆ ಬಾಲಕ ಗುರುಸಿದ್ಧಯ್ಯ ತನ್ನ ಬಾಲ್ಯದ ಜೀವನದಲ್ಲಿಯೇ ಮುಂಜೀವನದ ಮಹೋನ್ನತಿಯನ್ನು ತೋರಿಸಿಕೊಟ್ಟು ಬೆಳೆಯ ತೊಡಗಿದ.

ಅಣ್ಣನ ಮಗ ವಂಶಜ್ಯೋತಿ, ಬಾಳಕುಡಿ, ಬಾಲಕ ಗುರುಸಿದ್ಧಯ್ಯನನ್ನು ಕಂಡು ಜಿ.ಎಂ.ಬಸವರಾಜಯ್ಯನವರು ತಮ್ಮ ಹತ್ತಿರವೇ ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಿಸುವ ಸಂಕಲ್ಪ ಮಾಡಿಕೊಂಡರು.

ಜಿ.ಎಂ.ಬಸವರಾಜಯ್ಯ ಮತ್ತು ಶರಣಮ್ಮ ದಂಪತಿಗಳಿಗೆ ಮಕ್ಕಳಾಗಲೇ ಇಲ್ಲ. ಈ ದಂಪತಿಗಳಿಬ್ಬರೂ ಬಾಲಕ ಗುರುಸಿದ್ಧಯ್ಯನನ್ನು ತಮ್ಮ ಹತ್ತಿರವೇ ಇಟ್ಟುಕೊಂಡು ಅಭ್ಯಾಸ ಮಾಡಿಸವ ಬಯಕೆಯನ್ನು ಅಣ್ಣ ಮಲ್ಲಿಕಾರ್ಜುನಯ್ಯನವರ ಮುಂದೆ ವ್ಯಕ್ತ ಪಡಿಸಿದರು. ತಾಯಿ–ತಂದೆಗಳಿಬ್ಬರಿಗೂ ಮಗನನ್ನು ದೊಡ್ಡ ಊರು ನಾಯ್ಕಲ್ಲ ಗ್ರಾಮಕ್ಕೆ ಕಳಿಸಿದರೆ ಒಂದು ದೃಷ್ಟಿಯಿಂದ ಒಳ್ಳೆಯ ವಾತಾವರಣ ಸಿಕ್ಕು ಮಗು ವಿದ್ಯಾವಂತನಾಗುತ್ತಾನೆ, ಎಂಬ ಸಂತೋಷ ಒಂದು ಕಡೆಯಾದರೆ ಹಿರಿಯ ಮಗನನ್ನು ಅಗಲಿ ಇರುವುದಾದರೂ ಹೇಗೆ ಎಂಬ ವ್ಯಥೆ ಇನ್ನೊಂದು ಕಡೆ ಬಾಧಿಸ ತೊಡಗಿತು. ಇಲ್ಲಕ್ಕೂ ಮಿಗಿಲಾಗಿ ಜಿ.ಎಂ.ಬಸವರಾಜ ಶಾಸ್ತ್ರಿಗಳ ಆಗ್ರಹದ ಮೇರೆಗೆ ನಾಯ್ಕಲ್ಲ ಗ್ರಾಮಕ್ಕೆ ಬಾಲಕ ಗುರುಸಿದ್ಧಯ್ಯನನ್ನು ಕಳಿಸಿ ಕೊಟ್ಟರು. ಬಾಲಕ ಗುರುಸಿದ್ಧಯ್ಯನವರು ಚಿಕ್ಕಪ್ಪ ಜಿ.ಎಂ.ಬಸವರಾಜ ಶಾಸ್ತ್ರಿ ಮತ್ತು ಚಿಕ್ಕಮ್ಮ ಶರಣಮ್ಮನವರ ಅಕ್ಕರೆಯ ಮಡಿಲಲ್ಲಿದ್ದು ಊರಲ್ಲಿ ಇರುವ ಸರಕಾರಿ ಶಾಲೆಗೆ ಹೆಸರು ದಾಖಲಿಸಿದರು. ಬಾಲಕ ಗುರುಸಿದ್ಧಯ್ಯ ಓಣಿಯ ಮಕ್ಕಳೊಡನೆ ಶಾಲೆ ಕಲಿಯ ತೊಡಗಿದ.

■

# ಬಾಲ್ಯದ ಶಿಕ್ಷಣ ಸಾರಸ್ವತ ಪ್ರಪಂಚ

ನಾಯ್ಕಲ್ಲ ಗ್ರಾಮದಲ್ಲಿ ಜಿ.ಎಂ, ಬಸವರಾಜಶಾಸ್ತ್ರಿಗಳು ಅಪ್ಪ ಹಾಕಿದ ಗಿರಣಿ ಅಂಗಡಿಯಲ್ಲಿ ಮಸಾಲೆ ಪುಡಿಗಳನ್ನು ಕಟ್ಟುತ್ತಾಕೂಡ್ರದೆ ಅಂದಿನ ಕಾಲದ ಗಣ್ಯವ್ಯಕ್ತಿಗಳ ಪರಿಚಯ ಮಾಡಿಕೊಂಡು ಶಿಕ್ಷಣ, ಸಾಹಿತ್ಯ, ಸಮಾಜ, ಧಾರ್ಮಿಕ ಚಿಂತನೆಗಳತ್ತ ಮನಸ್ಸು ಮಾಡಿದರು. ಅದರ ಫಲವಾಗಿ ಆಗಿನ ಹೈದರಾಬಾದ ಸಂಸ್ಥಾನ ವೀರಶೈವ ಸಮಾಜದ ಗಣ್ಯವ್ಯಕ್ತಿಗಳೆನಿಸಿಕೊಂಡ ರಂಗಂಪೇಟೆಯ ಗುರಯ್ಯಸ್ವಾಮಿ ಸುಗೂರುಮಠ ಮಾಸ್ತರರು, ಮಸ್ಕಿ ಗ್ರಾಮದ ಬಸವರಾಜ ಶಾಸ್ತ್ರಿಗಳೊಡನೆ ಸಂಬಂಧ ಬೆಳೆಸಿಕೊಂಡು ಅತ್ಯಂತ ಪ್ರೀತಿ–ವಿಶ್ವಾಸದಿಂದ ಆಗಾಗ್ಗೆ ಬೆರೆಯ ತೊಡಗಿದರು. ನಾಯ್ಕಲ್ಲ ಬಸವರಾಜ ಶಾಸ್ತ್ರಿ ಮಸ್ಕಿಯ ಬಸವರಾಜ ಶಾಸ್ತ್ರಿ "ಏಕ ನಾಮ ಸದಾ ಪ್ರೇಮ" ಎಂಬಂತೆ ಇವರಿಬ್ಬರು ಏನೇ ಕೆಲಸ ಮಾಡಲಿ ಇಬ್ಬರೂ ಸೇರಿ ಸಮಾಲೋಚಿಸಿ ಕೆಲಸ ಮಾಡುತ್ತಿದ್ದರು. ಅದರಂತೆ ರಂಗಂ ಪೇಟೆಯ ಗುರಯ್ಯ ಸ್ವಾಮಿ ಸೂಗೂರು ಮಠದ ಮಾಸ್ತರರು ತುಂಬ ಚಾಣಾಕ್ಷರು, ಕುಶಲಮತಿಗಳು ಆಗಿದ್ದರು. ಅವರೊಡನೆಯೂ ನಾಯ್ಕಲ್ಲ ಜಿ.ಎಂ.ಬಸವರಾಜಯ್ಯ ಶಾಸ್ತ್ರಿ ನಿಕಟ ವರ್ತಿಗಳಾಗಿ ನಡೆದುಕೊಳ್ಳುತ್ತಿದ್ದರು. ಈ ಮೂವರೂ ಯಾವತ್ತು ಕೂಡಿಯೇ ಇರುತ್ತಿದ್ದರು.

ರಂಗಂಪೇಟೆಯ ಸೂಗೂರುಮಠಮಾಸ್ತರರು ನಾಯ್ಕಲ್ಲ ಬಸವರಾಜಯ್ಯ ಶಾಸ್ತ್ರಿಗಳಿಗೆ ಹಿರಿಯ ಮಾರ್ಗದರ್ಶಕರಾಗಿದ್ದರು. ಸೂಗೂರು ಮಠ ಮಾಸ್ತರರು ಮರಾಠಿ ಭಾಷೆಯಲ್ಲಿ ಹೊರ ತರುತಿದ್ದ "ನ್ಯಾಯ ಪ್ರಭ" ಅದರಂತೆ ಕನ್ನಡದಲ್ಲಿ ಪ್ರಕಟಿಟುಸುತ್ತಲಿದ್ದ "ನೈಜಾಂ ನ್ಯಾಯ ತೀರ್ಪು" ಮಾಸ ಪತ್ರಿಕೆಗಳು ಅಂದಿನ ಕಾಲದಲ್ಲಿ ತುಂಬ ಜನಪ್ರಿಯ ಪತ್ರಿಕೆಗಳಾಗಿದ್ದವು. ಈ ಪತ್ರಿಕೆಗಳು ಜನರ ಕೈಯಲ್ಲಿ ಸೇರಲಿ, ಕನ್ನಡ ಭಾಷೆಯಲ್ಲಿ ಜನರಿಗೆ ಅಭಿರುಚಿ ಹುಟ್ಟಲಿ, ಎಂದು ಬಯಸಿ ಪತ್ರಿಕೆಗಳ ಪ್ರಚಾರ, ಪ್ರಸಾರದಲ್ಲಿ ಸಹಕರಿಸತೊಡಗಿದರು ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು. ಇದರಿಂದ ಶಾಸ್ತ್ರಿಗಳ ಹೆಸರು ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಹರಡಿತು. ಆಗ ಇವರಿಗೆ ಮಹಾರಾಷ್ಟ್ರದ ದಾನಶೂರ ವಾರದ ಮಲ್ಲಪ್ಪನವರ ಪರಿಚಯವಾಯಿತು, ಪತ್ರವ್ಯವಹಾರವೂ

ನಡೆಯಿತು. ಅದು ಸುಮಾರು ೧೯೨೪ನೆ ಇಸವಿ ನಾಯ್ಕಲ್ಲ ಗ್ರಾಮದ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ತುಂಬ ಪಂಡಿತರು ಸಾಮಾಜಿಕ ಕಾಳಜಿಯುಳ್ಳ ವ್ಯಕ್ತಿಗಳು ಎಂಬ ಕೀರ್ತಿ ಹರಡಿತು.

ಮನೆಗೆ ಬರುತ್ತಿದ್ದ "ನ್ಯಾಯ ಪ್ರಭಾ" , "ನೈಜಾಂ ನ್ಯಾಯ ತೀರ್ಪು" ಪತ್ರಿಕೆಗಳು ಅಂದಿನ ನಿಜಾಂ ಸರಕಾರದಿಂದ ಪ್ರಕಟವಾಗುತ್ತಿದ್ದ "ದಿ ಡೆಕ್ಕನ್ ಲಾ ರಿಪೋರ್ಟ್"ಗಳ ಮಾಸ ಪತ್ರಿಕೆಗಳನ್ನು ಬಾಲಕ ಗುರುಸಿದ್ಧಯ್ಯ ನೋಡಿ, ಓದಿ ಅವುಗಳನ್ನು ಒಂದು ಕಡೆ ಓರಣವಾಗಿ ತೆಗೆದು ಇಡುತ್ತಿದ್ದ ಆಗಾಗ್ಗೆ ಮನೆಗೆ ಬರುತ್ತಿದ್ದ ವಿದ್ವಾಂಸರನ್ನು ಪರಿಚಯ ಮಾಡಿಕೊಂಡು ಅವರ ಸೇವೆಯಲ್ಲಿ ತೊಡಗುತ್ತಿದ್ದ. ಅದರಿಂದ ರಂಗಂಪೇಟೆಯ ಸೂಗೂರು ಮಠ ಮಾಸ್ತರರು ಮಸ್ಕಿಯ ಬಸವರಾಜ ಶಾಸ್ತ್ರಿಗಳು ಬಾಲಕ ಗುರುಸಿದ್ಧಯ್ಯನಲ್ಲಿ ಶಿಸ್ತು , ಸೇವಾ ಮನೋಭಾವನೆಯನ್ನು ಕಂಡು ಇವನೊಬ್ಬ ದೊಡ್ಡ ವ್ಯಕ್ತಿಯಾಗುತ್ತಾನೆಂದು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದರು.

ಮನೆಯ ಉತ್ತಮ ವಾತಾವರಣ, ಮನೆಗೆ ಆಗೆಗ್ಗೆ ಆಗಮಿಸುತ್ತಿದ್ದ ವಿದ್ವಾಂಸರ ಸಹವಾಸ, ಅತಿಥಿ ಅಭ್ಯಾಗತರ ಸತ್ಕಾರ, ಶಾಲೆಯಲ್ಲಿ ಗುರುಗಳ ಪ್ರೀತಿ, ಗೆಳೆಯರ ಸಹವಾಸದಿಂದ ಆಹ್ಲಾದಗೊಂಡ ಬಾಲಕ ಗುರುಸಿದ್ಧಯ್ಯ ನಾಯ್ಕಲ್ಲ ಗ್ರಾಮದ ಸರಕಾರಿ ಶಾಲೆಯಲ್ಲಿ ನಾಲ್ಕನೆಯ ಇಯತ್ತೆ ಓದು ಮುಂದುವರಿಸಿದ್ದ. "ಶಾಲಾಶಿಕ್ಷಣ"ಗುರುಶಿದ್ಧಯ್ಯನಿಗೆ ಆಭರಣದಂತೆ ಕಂಗೊಳಿಸುತ್ತಿತ್ತು.

ಇದೇ ಹೊತ್ತಿಗೆ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳ ಧರ್ಮ ಪತ್ನಿ ಶರಣಮ್ಮನವರು ಬಹಳ ದಿನಗಳ ಮೇಲೆ ಗಂಡುಮಗುವಿಗೆ ಜನ್ಮ ನೀಡಿ ತಾವು ಇಹ ಲೋಕಯಾತ್ರೆ ಮುಗಿಸಿದರು. ಇದು ಶಾಸ್ತ್ರಿಗಳ ಕುಟುಂಬಕ್ಕೆ ಬರಸಿಡಿಲು ಬಡಿದಂತಾಯಿತು. ಮಗು ಬದುಕಿ ತಾಯಿ ಸತ್ತ ಸುದ್ದಿ ಊರಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಊರ ಜನರು ಕಣ್ಣೀರು ಸುರಿಸದರು. "ದೇವರು ಅನ್ಯಾಯ ಮಾಡಿದ" ಎಂದು ಹಳಹಳಿಸ ಪಡತೊಡಗಿದರು, ಶಾಸ್ತ್ರಿಗಳು ದಿಗ್ಮೂಢರಾದರು, ದೇವರು ತಂದ ಆಪತ್ತಿಗೆ ಯಾರೇನು ಮಾಡುವದು ಎಂದು ಶಾಸ್ತ್ರಿಗಳಿಗೆ ಎಲ್ಲರೂ ಧೈರ್ಯ ಹೇಳ ತೊಡಗಿದರು.

ಕೆಲವು ದಿವಸದ ಮೇಲೆ ಯಾದಗಿರಿ ಬಿಂಗಿಯವರು ತಮ್ಮ ಮೊಮ್ಮಗನನ್ನು ಜೋಪಾನ ಮಾಡಲು ಕರೆದುಕೊಂಡು ಹೋದರು. ಮಡದಿ ಸತ್ತ ಮೇಲೆ ಮನೆಯೇ ಮುರಿಯಿತು. ಜಿ.ಎಂ. ಬಸವರಾಜಯ್ಯ ಶಾಸ್ತ್ರಿಗಳು ಕಕ್ಕಾಬಿಕ್ಕಿಯಾದರು. ಶಾಲೆ ಕಲಿಯಲು ಬಂದಿದ್ದ ಗುರುಸಿದ್ಧಯ್ಯ ನಾಲ್ಕನೇ ಇಯತ್ತೆ ಮುಗಿಸಿ ತಂದೆಯ ಹತ್ತಿರ ಗೋಡಿಹಾಳಕ್ಕೆ ಬಂದು ಬಿಟ್ಟ. ಶರಣಮ್ಮನವರು ಇಹಲೋಕಯಾತ್ರೆ

ಮುಗಿಸಿದ ನಂತರ ನಾಯ್ಕಲ್ಲ-ಗೋಡಿಹಾಳ ಎರಡು ಮನೆತನಕ್ಕೆ ಬರಸಿಡಿಲು ಬಡಿದಂತಾಯಿತು.

ತುಂಬ ಚಾಣಾಕ್ಷ, ವಿದ್ಯಾವಂತ, ಶಿಕ್ಷಣ ಪ್ರೇಮಿ ಸಮಾಜ ಚಿಂತಕ ತಮ್ಮನ ಸಂಸಾರ ಒಡೆದು ಹೋಯಿತೆಂದು ಗೋಡಿಹಾಳದ ಮಠದ ಮಲ್ಲಿಕಾರ್ಜುನಯ್ಯನವರು ತಮ್ಮ ಸಹೋದರ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳನ್ನು ಕೆಲವು ದಿವಸ ತಮ್ಮಲ್ಲಿಯೇ ಇರಲು ಹೇಳಿ ಕರೆಸಿಕೊಂಡರು. ಇಬ್ಬರೂ ಅಣ್ಣ-ತಮ್ಮಂದಿರರಿಗೆ ಒಂದೇ ಚಿಂತೆ ಮುಂದೆ ಬಾಲಕ ಗುರುಸಿದ್ಧಯ್ಯನ ಶಿಕ್ಷಣ ಹೇಗೆ ಎಂಬುದು. ಇಬ್ಬರು ಕೂಡಿ ವಿಚಾರಿಸಿದರು ಸಹೋದರ ಬಸವರಾಜಯ್ಯ ಶಾಸ್ತ್ರಿಗಳ ಅಭಿಪ್ರಾಯದ ಮೇರೆಗೆ ಮಲ್ಲಿಕಾರ್ಜುನಯ್ಯನವರು ಗುರುಸಿದ್ಧಯ್ಯನನ್ನು ಐದನೆಯ ತರಗತಿಯ ಅಭ್ಯಾಸ ಅದೇ ಶಹಪುರ ತಾಲೂಕಿನ ಹಯ್ಯಾಳ ಗ್ರಾಮದಲ್ಲಿರುವ ತಮ್ಮ ಪತ್ನಿ ನೀಲಮ್ಮನ ಅಕ್ಕನ ಮನೆಗೆ ಕಳಿಸಬೇಕೆಂದು ನಿರ್ಧರಿಸಿದರು. ಹಯ್ಯಾಳ ಗ್ರಾಮಕ್ಕೆ ಬಂದು ತಮ್ಮ ನೆಂಟರ ಮನೆಯಲ್ಲಿ ಗುರುಸಿದ್ಧಯ್ಯನನ್ನು ಬಿಟ್ಟು ಸರಕಾರಿ ಶಾಲೆಗೆ ಸೇರಿಸಿದರು.

ಗುರುಸಿದ್ಧಯ್ಯ ಹಯ್ಯಾಳ ಗ್ರಾಮದ ಸರಕಾರಿ ಶಾಲೆ ಸೇರಿದರು. ಅಲ್ಲಿ ಗುರುಸಿದ್ಧಯ್ಯ ರುಮಾಲೆ ಶಿಕ್ಷಕರು ತುಂಬ ಹೆಸರಾದವರು. ಅವರ ಪ್ರೀತಿಗೆ ಪಾತ್ರರಾಗಿ ಗುರುಸಿದ್ಧಯ್ಯ ಐದನೆಯ ತರಗತಿಯಲ್ಲಿ ಅಭ್ಯಾಸ ಮಾಡತೊಡಗಿದರು. ನಾಯ್ಕಲ್ಲಿನ ಉತ್ತಮ ವಾತಾವರಣದಲ್ಲಿ ಬೆಳೆದು ಓದಿದ ಗುರುಸಿದ್ಧಯ್ಯನವರಿಗೆ ಹಯ್ಯಾಳ ಗ್ರಾಮ ಹಿಡಿಸಲಿಲ್ಲ. ಆದರೂ ತುಂಬ ಗಟ್ಟಿ ಜೀವ ಮಾಡಿಕೊಂಡು ರುಮಾಲೆ ಗುರುಗಳ ಹತ್ತಿರ ಅಭ್ಯಾಸ ಮಾಡತೊಡಗಿದರು. ಆಗಾಗ್ಗೆ ಮಗನ ಕಡೆ ಬಂದು ಚೆನ್ನಾಗಿ ಓದಬೇಕು, ಜಾಣನಾಗಬೇಕೆಂದು ತಂದೆ ಮಲ್ಲಿಕಾರ್ಜುನಯ್ಯನವರು ಹೇಳಿ ಹೋಗುತ್ತಿದ್ದರು.

"ಅಪ್ಪಾಜಿ ನನಗೆ ಒತ್ತಾಯದ ಓದು ಬೇಡ ನಾನು ನಿನ್ನ ಹತ್ತಿರ ಗೋಡಿಹಾಳಕ್ಕೆ ಬಂದು ಒಕ್ಕಲುತನ ಕೆಲಸ ಮಾಡುತ್ತೇನೆ 'ಉತ್ತಮ ಖೇತಿ' ಎಂದು ಎಲ್ಲರೂ ಹೇಳುತ್ತಾರೆ ಕೃಷಿ ಕಾಯಕಮಾಡಿ 'ಅನ್ನದಾತ' ನ ಸ್ಥಾನ ಪಡೆಯುತ್ತೇನೆ ಎಂದು ಒಮ್ಮೊಮ್ಮೆ ತಂದೆಯ ಸಂಗಡ ಗೋಡಿಹಾಳಕ್ಕೆ ಬಂದು ಬಿಡುತ್ತಿದ್ದ. ಒಂದೆರಡು ದಿನ ಕಳೆಯುತ್ತಲೆ ಮತ್ತೆ ತಾಯಿ ನೀಲಮ್ಮ ತಂದೆ ಮಲ್ಲಿಕಾರ್ಜುನಯ್ಯನವರ ಒತ್ತಾಯದ ಮೇರೆಗೆ ಹಯ್ಯಾಳ ಗ್ರಾಮಕ್ಕೆಬರುತ್ತಿದ್ದ. ಹಾಗೂ ಹೀಗೂ ಮಾಡಿ ಒಂದು ವರ್ಷ ಕಳೆಯುತ್ತಲೇ ಗುರುಸಿದ್ಧಯ್ಯ ಐದನೆ ತರಗತಿ ಪಾಸು ಮಾಡಿದ ಗೋಡಿಹಾಳಕ್ಕೆ ಬಂದು ಇನ್ನು ಮೇಲೆ ನಾನು ಹಯ್ಯಾಳ ಶಾಲೆಗೆ ಹೋಗುವುದಿಲ್ಲವೆಂದು ಹಟಹಿಡಿದ. ಮಲ್ಲಿಕಾರ್ಜುನಯ್ಯನವರಿಗೆ ನಿರಾಶೆ

ಎನಿಸಲಿಲ್ಲ ಮಗನನ್ನು ಶಹಾಪುರ ದೇವಣಗಾವ ಮಠ ಚೆನ್ನಮಲ್ಲಯ್ಯ ಸ್ವಾಮಿಗಳ ಹತ್ತಿರ ಬಿಟ್ಟು ಶಿಕ್ಷಣ ಮುಂದುವರಿಸಲು ನಿರ್ಧರಿಸಿದರು.

■

# ಶಹಪುರ ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಪ್ರವೇಶ

ಅದು ೧೯೨೫ ೨೬ನೇ ಇಸವಿ ಗುರುಸಿದ್ಧಯ್ಯ ಹನ್ನೊಂದು ಹನ್ನೆರಡು ವಯಸ್ಸಿನ ಬಾಲಕ ಆರನೆಯ ತರಗತಿಗೆ ಶಹಾಪುರಕ್ಕೆ ಬಂದು ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಪ್ರವೇಶ ಪಡೆದ. ಶಹಾಪುರ ಗುರುಸಿದ್ಧಯ್ಯನಿಗೆ ಆಯಿ-ಮುತ್ತ್ಯಾನ ಊರು ದೇವಣಗಾವ ಮಠದ ಸೋದರ ಮಾವ ಚೆನ್ನಮಲ್ಲಯ್ಯ ಸ್ವಾಮಿಗಳು ಗುರುಸಿದ್ಧಯ್ಯನನ್ನು ಅಕ್ಕನ ಮಗನೆಂಬ ಭಾವನೆಯಿಂದ ತುಂಬ ಪ್ರೀತಿಸುತ್ತಿದ್ದರು. ಅಳಿಯನ ಶಿಕ್ಷಣ ತಮ್ಮ ಮನೆಯಲ್ಲಿಯೇ ಆಗ ಬೇಕೆಂಬ ಇಚ್ಛೆಯೂ ಅವರಲ್ಲಿತ್ತು. ಚೆನ್ನಮಲ್ಲಯ್ಯ ಅಷ್ಟೇನು ಸ್ಥಿತಿವಂತರಿರಲಿಲ್ಲ ಉಂಡುಟ್ಟು ಜೀವನ ಸಾಗಿಸುವ ಉದಾರ ಹೃದಯಿಗಳಾಗಿದ್ದರು. ಮೇಲಾಗಿ ಮಲ್ಲಿಕಾರ್ಜುನಯ್ಯನವರು ಜಿ.ಎಂ.ಬಸವರಾಜಯ್ಯಶಾಸ್ತ್ರಿಗಳು ಇವರೊಡನೆ ಪ್ರೀತಿಯಿಂದಿರಲು ಸಹಕರಿಸುತ್ತಿದ್ದರು. ಅದರಿಂದ ಗುರುಸಿದ್ಧಯ್ಯ ಮಾವನವರ ಮನೆತನಕ್ಕೆ ಹೊಂದಿಕೊಂಡು ತನ್ನ ಮುಂದಿನ ಶಿಕ್ಷಣ ಸಾಗಿಸಿದ.

ಶಹಾಪುರ ತಾಲೂಕಿನ ಒಂದು ಮುಖ್ಯ ಸ್ಥಳ ಮುಂಬಯಿ ಕರ್ನಾಟಕಕ್ಕೆ ಹೊಂದಿಕೊಂಡು ಉತ್ತಮ ಸಂಪರ್ಕ ಪಡೆದು ಕೊಂಡಿತ್ತು. ಇನ್ನೊಂದು ಕಡೆ ಸುರಪುರ ತಾಲೂಕು ಬೇಡನಾಯಕರು ಕಟ್ಟಿ ಆಳಿದ ಸಂಸ್ಥಾನ. ಹೀಗಾಗಿ ಈ ಪ್ರದೇಶದಲ್ಲಿ ಗಾಂಧೀಜಿಯವರು ಹೂಡಿದ ಸ್ವಾತಂತ್ರ್ಯ ಚಳುವಳಿ ಕರ್ಪೂರದ ಉರಿಯಂತೆ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿತ್ತು. ಬೆಳಗಾವಿಯಲ್ಲಿ ನಡೆದ ಅಧಿವೇಶನಕ್ಕೆ ಮಹಾತ್ಮಗಾಂಧಿಜಿಯವರು ಆಗಮಿಸುತ್ತಾರೆಂಬ ವದಂತಿ ಕೇಳಿ ಮಸ್ಕಿ ಬಸವರಾಜ ಶಾಸ್ತ್ರಿ, ನಾಯ್ಕಲ್ಲ ಬಸವರಾಜಯ್ಯಶಾಸ್ತ್ರಿ ತಮ್ಮ ತಮ್ಮ ಸಂಗಡಿಗರೊಡನೆ ಬೆಳಗಾವಿ ಅಧಿವೇಶನಕ್ಕೆ ಹೋಗಿ ಹೊಸ ಸ್ಫೂರ್ತಿ, ಹುರುಪು-ಹುಮ್ಮಸ್ಸು ಪಡೆದು ಬಂದರೂ ನಿಜಾಂ ಪ್ರಾಂತದಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲದಂತಹ ವಾತಾವರಣವಿತ್ತು.

ಆಗ ಹೈದರಾಬಾದ್ ಸಂಸ್ಥಾನದ ನಿಜಾಂ ಮೀರ ಉಸ್ಮಾನ ಅಲಿಖಾನ ಬಹದ್ದೂರರು ಗಾಂಧೀಜಿಯವರು ಹೂಡಿದ ಸ್ವಾತಂತ್ರ್ಯ ಚಳುವಳಿಯ ಗಾಳಿ ತನ್ನ ಸಂಸ್ಥಾನದಲ್ಲಿ ಸುಳಿಯದಂತೆ ಕಟ್ಟೆಚರ ವಹಿಸಿಕೊಂಡಿದ್ದ. ರಾಜ್ಯ ಭಾಷೆ

ಉರ್ದುವಿಗೆ ಹೆಚ್ಚಿನ ಆದ್ಯತೆ ನೀಡಿ ಮುಸಲ್ಮಾನರಿಗೆ ಸರಕಾರಿ ನೌಕರಿಯಲ್ಲಿ ಸೇರಿಸಿಕೊಂಡು ಮುಸಲ್ಮಾನರನ್ನು ಬಲಪಡಿಸುವ ಕಾರ್ಯದಲ್ಲಿ ತೊಡಗಿದ್ದ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಶಹಾಪುರ ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಗುರುಸಿದ್ಧಯ್ಯ ಉರ್ದು ಭಾಷೆಯೊಡನೆ ಕನ್ನಡಕ್ಕೆ ಹೆಚ್ಚಿನ ಒತ್ತು ಕೊಟ್ಟು ಅಭ್ಯಾಸ ಮಾಡುತ್ತಿದ್ದ.

ಗುರುಸಿದ್ಧಯ್ಯ ತೆಳ್ಳಗೆ, ಬೆಳ್ಳಗೆ, ಎತ್ತರದ ನಿಲುವಿನ ವಿದ್ಯಾರ್ಥಿ ಓದು-ಬರಹದಲ್ಲಿ ನಿಷ್ಣಾತ ಲೆಕ್ಕದಲ್ಲಿ ಎತ್ತಿದ ಕೈ ಆಟ-ಓಟಗಳಲ್ಲಿಯೂ ಅಭಿರುಚಿ ಕಬ್ಬಡ್ಡಿ, ಖೋ ಖೋ ಆಟಗಳಲ್ಲಿ ಎತ್ತರದ ಜಿಗಿತ, ಉದ್ದ ಓಟದಲ್ಲಿ ಗೆದ್ದು ಬರುವ ಗುರುಸಿದ್ಧಯ್ಯನವರನ್ನು ಸರಿಗಟ್ಟುವ ವಿದ್ಯಾರ್ಥಿಗಳೇ ಇರಲಿಲ್ಲ. ಇದರಿಂದ ಶಹಾಪುರ ಮಾಧ್ಯಮಿಕ ಶಾಲೆಯಲ್ಲಿ ಗುರುಸಿದ್ಧಯ್ಯ ಎದ್ದು ಕಾಣತೊಡಗಿದ, ಗುರುಗಳ ಪ್ರೀತಿಗೆ ಪಾತ್ರನಾದ, ಗೆಳೆಯರ ಬಳಗಕ್ಕೆ ಬೇಕಾದವನಾದ. ಹೀಗೆ ಎರಡು ವರ್ಷಗಳಲ್ಲಿ ಆರನೆಯ ಏಳನೆಯ ಇಯತ್ತೆಗಳಲ್ಲಿ ಉತ್ತಮ ಅಂಕಪಡೆದು ಉತ್ತೀರ್ಣನಾದ. ಮುಂದಿನ ಶಿಕ್ಷಣದ ಅಂಜಿಕೆ ಮತ್ತೆ ಕಾಣತೊಡಗಿತು. ಮಲ್ಲಿಕಾರ್ಜುನಯ್ಯನರಿಗೆ ದಿಕ್ಕು ತೋಚದಂತಾಯಿತು. ಗುರುಸಿದ್ಧಯ್ಯ ತಂದೆಯೊಡನೆ ಗೋಡಿಹಾಳದಲ್ಲಿದ್ದು ಮುಂದಿನ ಶಿಕ್ಷಣದ ದಾರಿ ಹುಡುಕ ತೊಡಗಿದ.

■

# ಶಂಕರ ಸಂಸ್ಕೃತ ಕಾಲೇಜಿಗೆ ಆಗಮನ

ಬಾಲಕ ಗುರುಸಿದ್ಧಯ್ಯನ ಮುಂದಿನ ಶಿಕ್ಷಣದ ಬಗ್ಗೆ ತಂದೆ ಮಲ್ಲಿಕಾರ್ಜುನಯ್ಯನವರು ಹಗಲಿರುಳು ಯೋಚಿಸತೊಡಗಿದರು ಅಷ್ಟರಲ್ಲಿಯೇ ಯಾದಗಿರಿಯಿಂದ ಸಹೋದರ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಗೋಡಿಹಾಳಕ್ಕೆ ಬಂದು ಗುರುಸಿದ್ಧಯ್ಯನ ಮುಂದಿನ ಶಿಕ್ಷಣದ ಬಗ್ಗೆ ಅಣ್ಣ-ತಮ್ಮ ಇಬ್ಬರೂ ಸಮಾಲೋಚಿಸಿ ಯಾದಗಿರಿಯಲ್ಲಿ ಶಂಕರ ಸಂಸ್ಕೃತ ಕಾಲೇಜಿಗೆ ಸೇರಿಸೋಣ ನನ್ನ ಹಾಗೂ ಮಸ್ಕಿ ಬಸವರಾಜ ಶಾಸ್ತ್ರಿಗಳ ಮಾಲಿಕತ್ವದಲ್ಲಿ ಹುಟ್ಟು ಹಾಕಿದ ಶ್ರೀ ಶಂಕರಾನಂದ ಮುದ್ರಣಾಲಯ ನೋಡಿಕೊಳ್ಳುವವರು ಯಾರೂ ಇಲ್ಲ. 'ನಾವು ಈಗ ಧರ್ಮ ಸಂಜೀವಿನಿ' ಎಂಬ ಹೊಸ ಮಾಸ ಪತ್ರಿಕೆ ಪ್ರಾರಂಭಿಸಿದ್ದೇವೆ. ಪತ್ರಿಕೆಯ ಕೆಲಸಕ್ಕೆ ನಾನು ಓಡಾಡ ಬೇಕಾಗುತ್ತದೆ. ಅದಕ್ಕಾಗಿ ಗುರುಸಿದ್ಧಯ್ಯನನ್ನು ಸಂಸ್ಕೃತ ಕಾಲೇಜಿಗೆ ಸೇರಿಸೋಣ. ಅವನು ಕಾಲೇಜಿನಲ್ಲಿ ಅಭ್ಯಾಸ ಮಾಡಿಕೊಂಡು ಮನೆ-ಮುದ್ರಣಾಲಯದ ಕೆಲಸ ನೋಡಿಕೊಂಡು ಹೋಗಲಿ. ಅಣ್ಣನವರಿಗೆ ಒಪ್ಪಿಸಿ ಗುರುಸಿದ್ಧಯ್ಯನಿಗೂ ಈ ವಿಷಯ ತಿಳಿಸಿ ಗುರುಸಿದ್ಧಯ್ಯನನ್ನು ಯಾದಗಿರಿಗೆ ಕರೆದುಕೊಂಡು ಬಂದರು. ತಮ್ಮ ಸುಪರ್ಧಿಯಲ್ಲಿದ್ದ ಶಂಕರ ಸಂಸ್ಕೃತ ಕಾಲೇಜಿನಲ್ಲಿ ಪ್ರವೇಶ ಕೊಡಿಸಿದರು. ಅದು ೧೯೭೯ನೇ ಇಸವಿ. ಆಗ ಗುರುಸಿದ್ಧಯ್ಯನವರಿಗೆ ೧೪ ವರ್ಷ.

ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿತುಕೊಂಡಿದ್ದ ಗುರುಸಿದ್ಧಯ್ಯ ಸಂಸ್ಕೃತ ಭಾಷೆಯಲ್ಲಿ ಅಭ್ಯಾಸ ಮಾಡುವ ಅವಕಾಶ ಸಿಕ್ಕುದುದಕ್ಕೆ ಹಿರಿಹಿರಿ ಹಿಗ್ಗಿದ. ಆಗ ಶಂಕರ ಸಂಸ್ಕೃತ ಕಾಲೇಜಿನಲ್ಲಿ ಉಚಿತ ಪ್ರಸಾದ ನಿಲಯವಿತ್ತು. ಗುರುಸಿದ್ಧಯ್ಯನನ್ನು ಈ ಉಚಿತ ಪ್ರಸಾದ ನಿಲಯಕ್ಕೆ ಸೇರಿಸಿದರು. ಗುರುಸಿದ್ಧಯ್ಯನವರು ಉಚಿತ ಪ್ರಸಾದ ನಿಲಯದಲ್ಲಿ ಊಟಮಾಡಿ ಅಲ್ಲಿಯೇ ವಾಸಿಸುತ್ತಿದ್ದರೂ ದಿನಾಲು ಚಿಕ್ಕಪ್ಪನವರ ಮನೆಯ ಕಡೆ ಬಂದು ಮನೆಯ ಸಣ್ಣ ಪುಟ್ಟ ಕೆಲಸ ಮಾಡಿ ಸಂಜೆ ಮುದ್ರಣಾಲಯಕ್ಕೂ ಹೋಗಿ ಅಲ್ಲಿಯ ಕಾರ್ಯ ಕಲಾಪಗಳ ಕಡೆಗೂ ಗಮನಹರಿಸಿ ಕಾಲೇಜಿಗೆ ಹೋಗಲು ತಡವಾಗುತ್ತಿತ್ತು. ಕಾಲೇಜಿನಲ್ಲಿದ್ದ ಪ್ರಸಾದ ನಿಲಯದಲ್ಲಿ ಊಟದ ಹೊತ್ತಿಗೆ ಹೋದರೆ ಊಟಸಿಗುತ್ತಿತ್ತು. ತಡಮಾಡಿ ಹೋದರೆ ಊಟ

ಸಿಗುತ್ತಿರಲಿಲ್ಲ ಗುರುಸಿದ್ಧಯ್ಯ ಈ ಎಲ್ಲ ಕೆಲಸ ಮುಗಿಸಿ ಸಂಜೆ ಕಾಲೇಜಿಗೆ ಹೋಗಲು ಒಮ್ಮೊಮ್ಮೆ ತಡವಾಗುತ್ತಿತ್ತು. ಹಾಗೆ ತಡಮಾಡಿ ಹೋದ ದಿವಸ ಊಟಸಿಗದೆ ಹಾಗೆಯೇ ನೀರು ಕುಡಿದು ಮಲಗಿ ಕೊಳ್ಳುತ್ತಿದ್ದರು.

ಇಂದು ನಮಗೆ ಊಟ ಸಿಗಲಿಲ್ಲವೆಂದು ಗೊಣಗುತ್ತಿರಲಿಲ್ಲ. ಕಾಲೇಜಿನಲ್ಲಿ ಒಮ್ಮೊಮ್ಮೆ ಹೀಗಾಗುತ್ತದೆಯೆಂದು ಮನೆಯಲ್ಲಿ ತಾಯಿ ಚೆನ್ನಮ್ಮನವರ ಮುಂದೆಯೂ ಹೇಳುತ್ತಿರಲಿಲ್ಲ. ಸದಾ ಹಸನ್ಮುಖಿಯಾಗಿದ್ದು ತಮ್ಮ ಅಭ್ಯಾಸದಲ್ಲಿ ತೊಡಗಿರುತ್ತಿದ್ದರು. ಅತ್ಯಂತ ಪ್ರಾಮಾಣಿಕ ಸಭ್ಯ, ಸತ್ಯ, ವಿಷ್ಠೆಯವ ಹದಿ ಹರೆಯದ ಬಾಲಕ ಗುರುಸಿದ್ಧಯ್ಯ ಗುರುಗಳ ಸನ್ನಿಧಿಯಲ್ಲಿ ಸಂಸ್ಕೃತ ಭಾಷೆಯನ್ನು ತುಂಬ ಶ್ರದ್ಧೆಯಿಂದ ಸಂಸ್ಕೃತ ಕೆಲವು ಮಂತ್ರಗಳನ್ನು ಬಾಯಿಪಾಠ ಮಾಡಿ ಹೇಳತೊಡಗಿದ ಸ್ಪಷ್ಟ ಉಚ್ಚರಣೆಯೊಂದಿಗೆ ಹೊರಹೊಮ್ಮಿ ಬರುವ ಸಂಸ್ಕೃತ ಶ್ಲೋಕಗಳನ್ನು ಕೇಳಿ ಕಾಲೇಜಿನಲ್ಲಿದ್ದ ಪಂಡಿತರ ಬಳಗ, ಪ್ರಾಧ್ಯಾಪಕ ವೃಂದ, ಗುರುಸಿದ್ಧಯ್ಯನನ್ನು ಪ್ರೀತಿಯಿಂದ ಕಾಣತೊಡಗಿದರು.ಅದರಲ್ಲಯೂ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳ ಅಣ್ಣನ ಮಗ ಎಂದು ಗೊತ್ತಾದ ಕೂಡಲೇ ಕಾಲೇಜಿನಲ್ಲಿ ಗುರುಸಿದ್ಧಯ್ಯನನ್ನು ಬಹಳ ಗೌರವದಿಂದ ಕಾಣತೊಡಗಿದರು. ನಡೆ-ನುಡಿ ಒಂದಾದ ಶಿಸ್ತಿನ ಸಾಕಾರ ಮೂರ್ತಿ ಗುರುಸಿದ್ಧಯ್ಯನನ್ನು ಪಂಡಿತರ ಬಳಗಕ್ಕೆ ಸೇರಿಸಿ "ಪಂಡಿತಜಿ, ಶಾಸ್ತ್ರಿಜಿ" ಎಂದು ಕರೆಯತೊಡಗಿದರು.

ಶಂಕರ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ಸರ್ವದರ್ಶನಾಚಾರ್ಯ, ಅಷ್ಟ ಭಾಷಾ ವಿಶಾರದ ಸಿಕಂದರಾಬಾದ ನಗರದ ಚಿದ್ರೆಮಠದ ಪಂಡಿತ ವೀರಭದ್ರ ಶಾಸ್ತ್ರಿಗಳನ್ನು ಬರಮಾಡಿಕೊಳ್ಳಲಾಗಿತ್ತು.ಅದರಂತೆ ಪಗಡದಿನ್ನಿ ಬಸವರಾಜಶಾಸ್ತ್ರಿಗಳು, ಮದ್ರಾಸ ಪ್ರಾಂತ ಬಳ್ಳಾರಿ ಜಿಲ್ಲೆಯ ಹೊಳಲು ಗ್ರಾಮದ ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಗಳು, ರಾಯಚೂರಿನ ಶ್ರೀ ಬಿ.ಎಂ. ವೀರೇಶ ಶಾಸ್ತ್ರಿಗಳು, ಮುಂತಾದ ಘಟಾನುಘಟಿ ಸಂಸ್ಕೃತ ಪಂಡಿತರು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದರು. ಇಂತಹ ದಿಗ್ಗಜರ ಪ್ರೀತಿಗೆ ಪಾತ್ರರಾಗಿ ಅಭ್ಯಾಸ ಮಾಡತೊಡಗಿದರು, ಗೋಡಿಹಾಳ ಗ್ರಾಮದ ಗುರುಸಿದ್ಧಯ್ಯನವರು.

ಹದಿನೈದು ಹದಿನಾರು ವರ್ಷದ ಗುರುಸಿದ್ಧಯ್ಯ ವಿದ್ಯೆ- ವಿನಯಗಳಿಂದ ಶೋಭಿಸುತ್ತಿದ್ದರು. ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿ ಆಗಮಿಸಿದ ಮಹಾರಾಷ್ಟ್ರ, ಮದ್ರಾಸ ಪ್ರಾಂತ, ಕರ್ನಾಟಕ, ಆಂಧ್ರ ಪ್ರದೇಶದ ಗೆಳೆಯರನ್ನು ಪರಿಚಯ ಮಾಡಿಕೊಂಡು ಅವರವರು ಆಡುತ್ತಿದ್ದ ಮರಾಠಿ, ಉರ್ದು, ತೆಲಗು, ಆಂಗ್ಲ ಭಾಷೆಗಳು ಗುರುಸಿದ್ಧಯ್ಯನಿಗೆ ನಿತ್ಯ ಜೀವನದ ವ್ಯವಹಾರಿಕ ಭಾಷೆಗಳಾಗಿ ನೀರು ಕುಡಿದಷ್ಟು ಸುಲಭವೆನಿಸದವು.

ಕಾಲೇಜಿನಲ್ಲಿ ನಡೆಯುತ್ತಿರುವ ಪ್ರತಿಯೊಂದು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಕತೃತ್ವ ಶಕ್ತಿಯನ್ನು ತೋರಿಸಿಕೊಡುತ್ತಿದ್ದರು. ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಮೊದಲ ಸ್ಥಾನ ಗಿಟ್ಟಿಸುತ್ತಿದ್ದರು.ವರ್ಷದ ಅಂತ್ಯದಲ್ಲಿ ಗುರುಸಿದ್ಧಯ್ಯನವರಿಗೆ ದೊರೆತ ಪ್ರಶಸ್ತಿ, ಗಳಿಸಿದ ಬಹುಮಾನಗಳಿಗೆ ಲೆಕ್ಕವೇ ಇರುತ್ತಿರಲಿಲ್ಲ. ಗುರುಸಿದ್ಧಯ್ಯನವರು ಸಂಸ್ಕೃತದಲ್ಲಿ 'ಕಾವ್ಯ' 'ಮಧ್ಯಮ' ಪಾಸಾದರು ಹಿಂದಿ ಭಾಷೆಯಲ್ಲಿ "Mathod readers"ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಕಾಲೇಜಿನಲ್ಲಿ ತೋರಿಸಿದ ಕೈ ಚಳಕದಂತೆ ಶ್ರೀ ಶಂಕರಾನಂದ ಮುದ್ರಣಾಲಯದಲ್ಲಯೂ ತಮ್ಮ ಕೈ ಚಳಕ ತೋರಿಸದೆ ಬಿಡಲಿಲ್ಲ. ಮುದ್ರಣಕ್ಕಾಗಿ ಆಗಮಿಸಿದ ಗ್ರಾಹಕರನ್ನು ಪ್ರೀತಿಯಿಂದ ಬರಮಾಡಿಕೊಂಡು ಅವರ ಕೆಲಸ ಮಾಡಿಕೊಡುತ್ತಿದ್ದರು. "ಧರ್ಮ ಸಂಜೀವಿನಿ" ಮಾಸ ಪತ್ರಿಕೆ ಅತ್ಯಂತ ಸುಂದರವಾಗಿ ಹೊರ ಬರುವಂತೆ ನೋಡಿಕೊಳ್ಳುತ್ತಿದ್ದರು. ಪತ್ರಿಕೆಯ ವಿನ್ಯಾಸ, ಒಳ ಹೊರಗಿನ ಸೌಂದರ್ಯ ಮುದ್ರಾರಾಕ್ಷಸನ ಹಾವಳಿ ಎಲ್ಲಿಯೂ ಸುಳಿಯದಂತೆ ಎಲ್ಲ ಕಡೆ ಇವರ ದೃಷ್ಟಿ ಇರುತ್ತಿತ್ತು.

ಒಮ್ಮೊಮ್ಮೆ ಮುದ್ರಣಾಲಯಕ್ಕೆ ಬರುವಲ್ಲಿ ಕೆಲಸಗಾರರು ಕೈ ಕೊಟ್ಟರೆ ತಾವೇ ಅಕ್ಷರ ಜೋಡಣೆಗೆ ಅಣಿಯಾಗುತ್ತಿದ್ದರು. ಮುದ್ರಣ, ಅಕ್ಷರ ಜೋಡಣೆ ಒಂದು ಉತ್ತಮ ಕಲೆ ಇದನ್ನು ಕರಗತ ಮಾಡಿಕೊಳ್ಳಲು ಹವಣಿಸುತ್ತಿದ್ದರು. ಆಗ ಕಾಲಿನಿಂದಲೇ ತುಳಿದು ಯಂತ್ರಗಳನ್ನೂ ಓಡಿಸಿ ಮುದ್ರಿಸಿಕೊಡುವ ಪದ್ಧತಿ ಇತ್ತು . ಹಾಗೇ ತುಳಿದು ಓಡಿಸುವಲ್ಲಿಯೂ ಹಿಂದೇ ಬೀಳುತ್ತಿರಲಿಲ್ಲ. ಶ್ರೀ ಶಂಕರಾನಂದಮುದ್ರಣಾಲಯದ ಎಲ್ಲಾ ಆಗು ಹೋಗುಗಳು ಗುರುಸಿದ್ಧಯ್ಯನ ಮೇಲೆ ಇರುತ್ತಿದ್ದವು. ಮನೆಯ ಕೆಲಸ ಕಾರ್ಯಗಳಂತು ಸಹಜ. ಹೀಗೆ ದಿನವಿಡಿ ಕೆಲಸದಲ್ಲಿ ತೊಡಗಿದ್ದ ಗುರುಸಿದ್ಧಯ್ಯನವರು ಶೃತಿ ಇಟ್ಟ ವೀಣೆಯಂತೆ ಒಂದೇ ಸಮನೆ ನಿನಾದಿಸುತ್ತಿದ್ದರು. ಬಹುತೇಕ ಇಂತಹ ಮಕ್ಕಳು ಹುಟ್ಟುವುದು ಅಪರೂಪ ಎಂದು ಜಿ.ಎಂ.ಬಸವರಾಜಯ್ಯ ಶಾಸ್ತ್ರಿ ಮೇಲಿಂದ ಮೇಲೆ ಮಾತಾಡುತ್ತಿದ್ದರು.

■

## ಹೇಳದೆ ಕೇಳದೆ ಸಿಕಂದರಾಬಾದಕ್ಕೆ ಪಯಣ

ಮಸ್ಕಿ ಬಸವರಾಜ ಶಾಸ್ತ್ರಿ, ನಾಯ್ಕಲ್ಲ ಜಿ.ಎಂ. ಬಸವರಾಜಯ್ಯ ಶಾಸ್ತ್ರಿಗಳ ಪ್ರಯತ್ನದ ಫಲದಿಂದ ಮೂಡಿ ಬಂದ ಯಾದಗಿರಿ ಶಂಕರ ಸಂಸ್ಕೃತ ಕಾಲೇಜಿನ ಪ್ರಥಮ ಪ್ರಾಂಶುಪಾಲ ಪಂಡಿತ ವೀರಭದ್ರ ಶಾಸ್ತ್ರಿಗಳು ಆಡಳಿತ ಮಂಡಳಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾಲೇಜಿನ ಪ್ರಾಧ್ಯಾಪಕ ಬಳಗಕ್ಕೂ ವಿದ್ಯಾರ್ಥಿ ವೃಂದಕ್ಕೂ ಉತ್ತೇಜನ ನೀಡುತ್ತ ಹೊಸದಾಗಿ ಅಸ್ತಿತ್ವಕ್ಕೆ ಬಂದ ಶಂಕರ ಸಂಸ್ಕೃತ ಕಾಲೇಜಿಗೆ ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕವಾಗಿ ಒಳ್ಳೆಯ ಹೆಸರು ತಂದುಕೊಟ್ಟು ಭದ್ರಗೊಳಿಸಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸತೊಡಗಿದ್ದರು. ತಮ್ಮ ದಕ್ಷ ಹಾಗೂ ಪ್ರಾಮಾಣಿಕತೆಯಿಂದ ಆಡಳಿತವರ್ಗಕ್ಕೂ, ಪ್ರಾಧ್ಯಾಪಕ ಬಳಗಕ್ಕೂ, ವಿದ್ಯಾರ್ಥಿ ವೃಂದಕ್ಕೂ ತುಂಬ ಬೇಕಾದವರಾಗಿದ್ದರು. ಇವರ ಆಡಳಿತ ಕುಶಲತೆಯನ್ನು ಕಂಡು ಕೆಲವರು ಒಳಗೊಳಗೆ ಕರಬುತ್ತಿದ್ದರು. ಮತ್ಸರ ಮುಚ್ಚಿಟ್ಟುಕೊಳ್ಳುವುದು ಸಾಧ್ಯವಾಗದ ಉಪನ್ಯಾಸಕರು ಉಪದ್ವ್ಯಾಪ ಮಾಡುತ್ತಿದ್ದರು. ಅಂತಹರಲ್ಲಿ ಪಗಡದಿನ್ನಿ ಬಸವರಾಜ ಶಾಸ್ತ್ರಿಗಳು ಪ್ರಾಂಶುಪಾಲರೊಡನೆ ನೇರವಾಗಿ ಕದನಕ್ಕೆ ಕೈ ಹಾಕಿದರು.

ನಿಜಾಂ ಪ್ರಾಂತದಲ್ಲಿ ಹಿಂದುಳಿದ ಮಕ್ಕಳಿಗೆ ಕಾಮಧೇನುವಿನಂತೆ ಇದ್ದ ಶಂಕರ ಸಂಸ್ಕೃತ ಕಾಲೇಜಿನ ಪ್ರಥಮ ಪ್ರಾಂಶುಪಾಲರಾಗಿದ್ದ ಶ್ರೀ ವೀರಭದ್ರ ಶಾಸ್ತ್ರಿಗಳು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿ ಇಡೀ ದಕ್ಷಿಣ ಭಾರತದಲ್ಲಿ ಕಾಲೇಜಿನ ಕೀರ್ತಿ ಹರಡುವಂತೆ ಮಾಡಿದರು. ಅದರಿಂದ ಪ್ರಾಂಶಪಾಲರ ಕೀರ್ತಿ-ಪ್ರತಿಷ್ಠೆಗಳು ಹರಡಿದ್ದವು. ಅವರ ಏಳಿಗೆಯನ್ನು ಸಹಿಸದ ಪಗಡದಿನ್ನಿ ಬಸವರಾಜ ಶಾಸ್ತ್ರಿಗಳು ಅವರನ್ನು ಕಂಡರೆ ಸೇರುತ್ತಿರಲಿಲ್ಲ. ಇವರಿಬ್ಬರಲ್ಲಿದ್ದ ಇರಿಸುಮುರಿಸು ಕ್ರಮೇಣ ಬಯಲಿಗೆ ಬರತೊಡಗಿತು ಪ್ರಾಂಶುಪಾಲ ವೀರಭದ್ರಶಾಸ್ತ್ರಿಗಳು ಮನನೊಂದು ಕಾಲೇಜಿನ ಪ್ರಾಂಶುಪಾಲ ಹುದ್ದೆಗೆ ರಾಜಿನಾಮೆ ಸಲ್ಲಿಸಲು ಸಿದ್ಧರಾದರು. ಈ ಸುದ್ದಿ ಸುಳು ಸುಳು ಹರಿದು ಬಂದು ಕಾಲೇಜಿನ ಆಡಳಿತ ಮಂಡಳಿ, ಪ್ರಾಧ್ಯಾಪಕವರ್ಗಕ್ಕೂ, ವಿದ್ಯಾರ್ಥಿ ವೃಂದಕ್ಕೂ ತಲುಪಿತು. ಇವರೆಲ್ಲರು ಪ್ರಾಂಶುಪಾಲರ ಹತ್ತಿರ ಬಂದು ನಿಮ್ಮಿಂದಲೇ ಶಂಕರ ಕಾಲೇಜಿನ ಕೀರ್ತಿ-ಪ್ರತಿಷ್ಠೆ ಎಲ್ಲಕಡೆ ಹರಡಿದೆ. ತಾವು ಈ ಕಾಲೇಜನ್ನು ಬಿಟ್ಟು ಹೋಗಬಾರದೆಂದು ಒಕ್ಕೊರಲಿನಿಂದ ವಿನಂತಿಸಿಕೊಂಡರು.

ಆಗ ಪ್ರಾಂಶು ಪಾಲ ವೀರಭದ್ರಶಾಸ್ತ್ರಿಗಳು "ನಾನು ನನ್ನ ನಿರ್ಧಾರವನ್ನು ಬದಲಿಸಲಾರೆ ನಾನು ಗಂಟು ಮೂಟೆ ಕಟ್ಟಿ ಇಟ್ಟು ಇಲ್ಲಿಗೆ ಬಂದಿದ್ದೇನೆ. ಅವುಗಳನ್ನು ಯಾವ ಕಾರಣಕ್ಕೂ ಬಿಚ್ಚುವುದಿಲ್ಲ. ನಾನು ಇನ್ನು ಇಲ್ಲಿ ಇರುವುದಿಲ್ಲ. ಈಗ ಬಾಕಿ ಉಳಿದಿರುವುದು ಸಿಕಂದರಾಬಾದ ರೈಲು ಹತ್ತುವುದೊಂದೇ" ಅಷ್ಟೇ ಪ್ರೀತಿ ವಿಶ್ವಾಸದಿಂದ ಹೇಳಿದರು.

"ತಾವು ತಮ್ಮ ನಿರ್ಧಾರವನ್ನು ಬಲಿಸಬೇಕು' ಎಂದು ಕೇಳಿಕೊಂಡ ಆಡಳಿತ ಮಂಡಳಿಗೆ "ಇಬ್ಬರ ಪ್ರತಿಷ್ಠೆ ಜಗಳದಲ್ಲಿ ಈ ಭಾಗದ ಓಯಶಸ್ಸಿನಂತೆ ಇದ್ದ ಶಂಕರ ಸಂಸ್ಕೃತ ಕಾಲೇಜಿಗೆ ಖಂಡಿತ ಧಕ್ಕೆ ಬರುತ್ತದೆ. ಪುಣ್ಯಾತ್ಮರು ಕಟ್ಟಿ ಬೆಳೆಸಿದ ಈ ಕಾಲೇಜಿನ ಕೀರ್ತಿ ಪ್ರತಿಷ್ಠೆ ಕೊನೆಯವರೆಗೂ ಇರಲಿ" ಎಂದು ಈ ಪದ ತ್ಯಾಗ ಮಾಡುತ್ತಲ್ಲಿದ್ದೇನೆ. ತಾವು ಎಲ್ಲರೂ ನನಗೆ ಸಂತೋಷದಿಂದ ಬೀಳ್ಕೊಡಬೇಕೆಂದು ಪ್ರಾರ್ಥಿಸಿದರು. ಉಪಾಯ ಗಾಣದೆ ಆಡಳಿತ ಮಂಡಳಿ ಒಪ್ಪಿಗೆನೀಡಿ ಎದ್ದು ಹೋದರು.

ಎಲ್ಲರೂ ಎದ್ದು ಹೋದ ಮೇಲೆ ಗುರುಸಿದ್ಧಯ್ಯ ಒಬ್ಬನೇ ಪ್ರಾಂಶುಪಾಲರ ಹತ್ತಿರ ಬಂದು "ಪೂಜ್ಯರೇ, ತಾವು ಈ ಕಾಲೇಜಿನಲ್ಲಿ ಪ್ರಿನ್ಸಿಪಾಲರಂತೆ ಇರದೆ ವಿದ್ಯಾರ್ಥಿಗಳಿಗೆ ತಂದೆಯಂತೆ ಇದ್ದು ನೋಡಿಕೊಂಡಿರಿ, ತಮ್ಮ ಮಾರ್ಗದರ್ಶನದಲ್ಲಿ ನನ್ನ ವಿದ್ಯಾಭ್ಯಾಸ ಮುಂದುವರಿಸುವ ಛಲ ಇತ್ತು. ಅದು ತಪ್ಪಿತಲ್ಲ ! ಎಂದು ಕಳವಳವಾಗ ತೊಡಗಿದೆ" ಎಂದು ತನ್ನ ಅಂತರಂಗದ ಆವಿಷ್ಕಾರ ತೋಡಿಕೊಂಡ.

ಆಗ ಪ್ರಾಂಶುಪಾಲರು "ಗುರುಸಿದ್ಧಯ್ಯ ನೀನು ತುಂಬಾ ಜಾಣ ವಿದ್ಯಾರ್ಥಿ, ನಿನ್ನಲ್ಲಿ ಕಲಿಯಬೇಕೆಂಬ ಲವಲವಿಕೆ ಇದೆ ನೀನು ನಿನ್ನ ಅಭ್ಯಾಸವನ್ನು ಆಸಕ್ತಿಯಿಂದ ಮುಂದುವರಿಸು ದೇವರು ಒಳ್ಳೆಯದು ಮಾಡುತ್ತಾನೆ" ಎಂದು ಹೇಳಿದರು.

ನನಗೆ ತಮ್ಮನ್ನು ಬಿಟ್ಟು ಇರುವುದು ಆಗುತ್ತದೆಯೋ ಇಲ್ಲವೋ ಹಾಗೆಯೇ ಶ್ರೀ ಶಂಕರಾನಂದ ಮುದ್ರಾಣಾಲಯದಲ್ಲಿ ಕೆಲಸದ ಒತ್ತಡವೂ ಇದೇ.ಚಿಕ್ಕಪನ ಮನೆಯಲ್ಲಿ ಕೆಲಸವೂಬಹಳ ಎಲ್ಲಿ ನನ್ನ ಶಿಕ್ಷಣ ಅರ್ಧಕ್ಕೆ ನಿಲ್ಲುತದೆಯೋ ಏನೋ ಎಂಬ ಅಂಜಿಕೆಯೂ ಆವರಿಸಿದೆ.

ಹಾಗದರೆ ನೀನು ನನ್ನೊಡನೆ ಸಿಕಂದರಾಬಾದಕ್ಕೆ ಬಂದರೆ ಅಲ್ಲಿಯ ಸಂಸ್ಕೃತ ಕಾಲೇಜಿಗೆ ಸೇರಿಸುತ್ತೇನೆ. ನಿನ್ನ ಖರ್ಚು–ವೆಚ್ಚ ನಾನು ನೋಡಿಕೊಳ್ಳತ್ತೇನೆ ನನ್ನೊಡನೆ ಬರುತ್ತೀಯಾ" ಎಂದು ಕೇಳಿದರು

ಪೂಜ್ಯರೇ, ಮನೆಯಲ್ಲಿ ಚಿಕ್ಕಪ್ಪನವರಿಗೆ ಹೇಳದೆ ನಾನು ನಿಮ್ಮೊಡನೆ ಬರುವಂತಿಲ್ಲ ಅವರನ್ನು ಕೇಳಿದರೆ ನಿಮ್ಮೊಡನೆ ಹೋಗಲು ನನಗೆ ಅಪ್ಪಣೆ ಸಿಗುವುದಿಲ್ಲ.

ಮುದ್ರಣಾಲಯ ಕೆಲಸ ನೋಡಿಕೊಂಡು ಶಿಕ್ಷಣ ಪಡೆಯುವುದು ಚಿಕ್ಕಪ್ಪನವರ ಮನಸ್ಸು. ನಾನು ತಮ್ಮೊಡನೆ ಬಂದರೆ ಪ್ರೆಸ್ಸಿನ ಕೆಲಸ ನೋಡಿಕೊಳ್ಳುವವರು ಯಾರೂ ಇಲ್ಲ. ಹೇಗೆ ಮಾಡಲಿ ಎಂದು ತನ್ನೊಳಗೆ ತಾನೇ ಒದ್ದಾಡ ತೊಡಗಿದ ಗುರುಸಿದ್ಧಯ್ಯ.

ಪ್ರೆಸ್ಸಿನ ಕೆಲಸ ಮಾಡುವವರು ಬೇಕಾದಷ್ಟು ಜನ ಇದ್ದಾರೆ "ನೀನು ನಿನ್ನ ಭವಿಷ್ಯದ ಬಗ್ಗೆ ನೀನೆ ತುಸು ವಿಚಾರಿಸು ನಿನ್ನ ನಿರ್ಧಾರವೇ ನನ್ನ ನಿರ್ಧಾರ " ಎಂದು ಹೇಳಿದರು. ಒಂದು ಕಡೆ ಕರ್ತವ್ಯದಕರೆ, ಇನ್ನೊಂದು ಕಡೆ ಭವಿಷ್ಯದ ಬಗ್ಗೆ ಕಾಳಜಿ ಎರಡರ ಮಧ್ಯದಲ್ಲಿ ಒದ್ದಾಡುತ್ತ ಗುರುಸಿದ್ಧಯ್ಯ ತನ್ನ ಉಜ್ವಲ ಭವಿಷ್ಯಕ್ಕೆ ಪ್ರಾಂಶುಪಾಲರರೊಡನೆ ಸಿಕಂದರಾಬಾದಕ್ಕೆ ಹೊರಡುವುದನ್ನು ನಿಶ್ಚಯಿಸಿ ಗುರುಗಳೊಡನೆ ರೈಲು ಹತ್ತಿ ಹೊರಟೇ ಬಿಟ್ಟ.

# ಸಿಕಂದರಬಾದ ಸಂಸ್ಕೃತ ಕಾಲೇಜಿನಲ್ಲಿ ಮುಂದುವರಿದ ಶಿಕ್ಷಣ ಸಂಕಟಗಳ ಸರಮಾಲೆ

ಸರ್ವ ದರ್ಶನಾಚಾರ್ಯ ಶ್ರೀ ಚಿದ್ರೆಮಠದ ವೀರಭದ್ರ ಶಾಸ್ತ್ರಿಗಳು ಸಿಕಂದರಾಬಾದ ನಗರದಲ್ಲಿ ಸಜ್ಜನಲಾಲ ಸ್ಟ್ರೀಟಿನಲ್ಲಿ "ಸಂಸ್ಕೃತ ಗುರು ಕುಲ"ವನ್ನು ನಡೆಸುತ್ತಿದ್ದರು. ಮಠಕ್ಕೆ ನಾಗಯ್ಯ ಎಂಬ ಸುಸಂಸ್ಕೃತ ಶ್ರೀಮಂತ ದಾನಿಗಳು ಚಿದ್ರೆಮಠದ ವೀರಭದ್ರ ಶಾಸ್ತ್ರಿಗಳ ಪ್ರತಿಭೆ, ಪಾಂಡಿತ್ಯಕ್ಕೆ ಮಾರು ಹೋಗಿ ಈ ಭಾಗದ ವಿದ್ಯಾರ್ಜನೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ವಿಶಾಲವೂ, ಭವ್ಯವೂ ಆದ ಒಂದು "ಛತ್ರ" ವನ್ನು ಅವರು ಕಟ್ಟಿಸಿ ಕೊಟ್ಟಿದ್ದರು ಅಷ್ಟೇ ಅಲ್ಲ ಸಂಸ್ಕೃತ ಪಾಠ ಶಾಲೆಗೆ ಆಗಮಿಸುತ್ತಲಿದ್ದ ಎಲ್ಲ ಮಕ್ಕಳಿಗೆ ಊಟ, ವಸತಿ, ಆರೋಗ್ಯದ ವ್ಯವಸ್ಥೆಯನ್ನು ಕಲ್ಪಿಸಿ ಕೊಟ್ಟು ವೀರ ಭದ್ರ ಶಾಸ್ತ್ರಿಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದರು.

ಯಾದಗಿರಿಯಿಂದ ಸಿಕಂದರಬಾದಕ್ಕೆ ಶಾಸ್ತ್ರಿಗಳೊಡನೆ ಆಗಮಿಸಿದ್ದ ಗೋಡಿಹಾಳ ಮಠೀಯ ಗುರುಸಿದ್ಧಯ್ಯನವರನ್ನು ಕಂಡು ಮಟಿಕೆ ನಾಗಯ್ಯನವರು ತುಂಬ ಸಂತೋಷಪಟ್ಟರು. ಹದಿನಾರು ಹದಿನೇಳು ವರ್ಷದ ಹದಿ ಹರೆಯದ ಹುಡುಗ ಗುರುಸಿದ್ಧಯ್ಯ ತೆಳ್ಳಗೆ, ಬೆಳ್ಳಗೆ, ಎತ್ತರದ ನಿಲುವು, ದುಂಡುಮುಖ, ಮುಖದ ಮೇಲೆ ಲಿಂಗ ಕಳೆ, ಲಾಸ್ಯವಾಡುತಿತ್ತು. ದಾಳಿಂಬರಿ ಬೀಜದಂತಹ ದಂತ ಪಂಕ್ತಿಗಳ ಮಧ್ಯದಲ್ಲಿ ಮುಗುಳು ನಗೆಯಿಂದೊಡಗೂಡಿ ಬರುವ ಮೆಲುಮಾತುಗಳು ಮುದವನ್ನು ತಂದು ಕೊಡುತ್ತಿದ್ದವು. ಅತ್ಯಂತ ಸುಸಂಸ್ಕೃತ ಹೃದಯದ ಗುರುಸಿದ್ಧಯ್ಯ ಸಮಾಜದ ಬಹು ದೊಡ್ಡ ಆಸ್ತಿ ಆಗುತ್ತಾನೆಂದು ಅವರ ವ್ಯಕ್ತಿತ್ವ ಎತ್ತಿ ಹೇಳುತ್ತಲಿದೆ. ಇಂತಹ ಮಕ್ಕಳ ಹೃದಯದಲ್ಲಿಯೇ ನಾಳಿನ ನಾಡಿನ ಏಳಿಗೆ ಅಡಗಿದೆಯೆಂದು ಭಾವಿಸಿ ಮಟಕೆ ನಾಗಯ್ಯನವರು ಗುರುಸಿದ್ದಯ್ಯನನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದರು.

'ಸಂಸ್ಕೃತ ಗುರು ಕುಲ' ದ ಉಚಿತ ಪ್ರಸಾದ ನಿಲಯದ ವ್ಯವಸ್ಥೆಯನ್ನು ಮಟಿಕೆ ನಾಗಯ್ಯನವರು ಅವರ ಧರ್ಮ ಪತ್ನಿ ಪಾರ್ವತಮ್ಮನವರು ನೋಡಿಕೊಳ್ಳುತ್ತಿದ್ದರು. ಈ ಇಬ್ಬರು ದಂಪತಿಗಳಿಗೆ ಮಕ್ಕಳಾಗಿರಲಿಲ್ಲ, ದೇವರು

ಅವರಿಗೆ ಸಕಲ ಸಂಪತ್ತನ್ನು ಕೊಟ್ಟಿದ್ದರೂ ಮಕ್ಕಳ ಭಾಗ್ಯವನ್ನ ಕರುಣಿಸಿರಲಿಲ್ಲ. ಆದ್ದರಿಂದ ಸಂಸ್ಕೃತ ಗುರು ಕುಲಕ್ಕೆ ಆಗಮಿಸುತ್ತಿದ್ದ ಮಕ್ಕಳನ್ನು ತಮ್ಮ ಮಕ್ಕಳಂತೆ ಎಂದು ತಿಳಿದುಕೊಂಡು ಅವರ ಊಟ, ಉಪಆಹಾರ ಅವರ ಆರೋಗ್ಯ ತಪಾಸಣೆಯ ವ್ಯವಸ್ಥೆ ಮಾಡಿ ತುಂಬ ಅಚ್ಚುಕಟ್ಟಾಗಿ ನೋಡಿಕೊಳ್ಳತ್ತಿದ್ದರು.

ಶಿಸ್ತಿನ ಸಾಕಾರ ಮೂರ್ತಿಯಂತಿದ್ದ ಗುರುಸಿದ್ಧಯ್ಯನನ್ನು ಕಂಡು ಈ ಇಬ್ಬರೂ ದಂಪತಿಗಳು ಹಿರಿ ಹಿರಿ ಹಿಗ್ಗುತ್ತಿದ್ದರು. ಗುರುಕುಲದಲ್ಲಿದ್ದ ಎಲ್ಲ ವಿದ್ಯಾರ್ಥಿಗಳು ಗುರುಸಿದ್ಧಯ್ಯನಂತೆ ಇರಲು ಪ್ರಯತ್ನಿಸುತ್ತಿದ್ದರು.

ಗುರುಕುಲದಲ್ಲಿ ಪಂಡಿತ ಚಿದ್ರೆ ಮಠದ ವೀರಭದ್ರ ಶಾಸ್ತ್ರಿಗಳು ಮಕ್ಕಳಿಗೆ ಕಾವ್ಯ, ನಾಟಕ, ವ್ಯಾಕರಣ ವೈದ್ಯಕೀಯ, ಜ್ಯೋತಿಷ್ಯ ಯೋಗಾಭ್ಯಾಸಗಳನ್ನು ಕುರಿತು ಚೆನ್ನಾಗಿ ಪಾಠ ಮಾಡುತ್ತಿದ್ದರು ಪೂಜೆ ಪಾಠಗಳಲ್ಲಿಯೂ ಗುರುಸಿದ್ಧಯ್ಯನವರದು ಎತ್ತಿದ ಕೈ.

ಹೀಗೆ ಅನ್ನ, ವಸ್ತ್ರ, ಆರೋಗ್ಯದ ಬಗ್ಗೆಯೂ ಗುರುಕುಲದಲ್ಲಿ ದೊರಕುತ್ತಿದ್ದ ಜ್ಞಾನಾಮೃತವನ್ನು ಸವಿದು ಹಕ್ಕಿಯಂತೆ ಉಲಿದು-ನಲಿದು ಸಂತೋಷ ಪಡುತ್ತಿದ್ದ ಸಮಯದಲ್ಲಿ ಸಂಸ್ಕೃತ ಪಾಠ ಶಾಲೆಯ ತೂವಾರಿಗಳಾದ ಚಿದ್ರೆಮಠದ ವೀರಭದ್ರ ಶಾಸ್ತ್ರಿಗಳನ್ನು ಪಂಚಾಚಾರದ ಪಂಚಪೀಠಗಳಲ್ಲೊಂದಾದ ಕಾಶೀ ಪೀಠದ ೧೦೦೮ನೇ ಜಗದ್ಗುರುಗಳ ಸ್ಥಾನಕ್ಕೆ ಆಯ್ಕೆ ಮಾಡಿ ಅವರನ್ನೂ ಆಮಂತ್ರಿಸಿ ಸಕಲ ವಾದ್ಯವೃಂದಗಳೊಂದಿಗೆ ಕಾಶಿಗೆ ಕರೆದುಕೊಂಡು ಹೋದರು.

ಚಿದ್ರೆಮಠದ ವೀರಭದ್ರಶಾಸ್ತ್ರಿಗಳು ತಾವು ಸಿಕಂದರಾಬಾದ "ಸಂಸ್ಕೃತ ಗುರುಕುಲ" ಬಿಡುವಾಗ ಅಲ್ಲಿಯ ವಿದ್ಯಾರ್ಥಿಗಳಿಗೆ ಶಿಕ್ಷಣದ ಕೊರತೆ ಯಾಗಬಾರದೆಂದು ಎಲ್ಲ ವ್ಯವಸ್ಥೆ ಮಾಡಿದ್ದರು. ಗುರುಸಿದ್ದಯ್ಯನಿಗೆ ಪೂನಾ ಪಟ್ಟಣಕ್ಕೆ ಹೋಗಿ ಪರೀಕ್ಷೆ ಮುಗಿಸಿಕೊಂಡು ಬರಲು ತಗಲುವ ಖರ್ಚು ವೆಚ್ಚ ಕೊಡಲು ಮಟಿಕೆ ನಾಗಯ್ಯನವರಿಗೆ ತಿಳಿಸಿದ್ದರು ಆದರೂ ಗುರುಸಿದ್ಧಯ್ಯನವರು ಅವರ ಮೇಲೆ ಇಟ್ಟ ಶ್ರದ್ಧೆ, ಭಕ್ತಿ ವಿಶ್ವಾಸಗಳಿಂದ ಜೀವನದಲ್ಲಿ ಏನೋ ಕಳೆದು ಕೊಂಡಂತೆ ಕಕ್ಕಾ ಬಿಕ್ಕಿಯಾದರು ಪ್ರಸಾದ ನಿಲಯದ ಧರ್ಮದರ್ಶಿ ಮಟಕೆ ನಾಗಯ್ಯನವರು ವಿದ್ಯಾರ್ಥಿಗಳಿಗೆ ಸಮಾಧಾನ ಹೇಳಿ ಸ್ವ ಅಧ್ಯಾಯದಲ್ಲಿ ನಿರತರಾಗಲು ತಿಳುವಳಿಕೆ ಕೊಟ್ಟರು.

ಮಟಕೆ ನಾಗಯ್ಯನವರು ಗುರುಕುಲದಲ್ಲಿ ಚಿದ್ರೆಮಠದ ವೀರಭದ್ರಯ್ಯ ಶಾಸ್ತ್ರಿಗಳು ಬಿಟ್ಟು ಹೋದ ಮೇಲೆ ಅಲ್ಲಿದ್ದ ಕೊರತೆಯನ್ನು ತುಂಬಲು ಪದೆ ಪದೆ ವಿದ್ಯಾರ್ಥಿಗಳಿಗೆ ಹೇಳುತ್ತ 'ಸಂಸ್ಕೃತ ಗುರುಕುಲದ' ಔಚಿತ್ಯವನ್ನು ಕಾಪಾಡಿಕೊಂಡು ಬಂದರು. ವಿದ್ಯಾರ್ಥಿಗಳಿಗೆ ಪರೀಕ್ಷೆಯ ದಿನಗಳು ಸಮೀಪಕ್ಕೆ ಬಂದವು ವಿದ್ಯಾರ್ಥಿಗಳು ಭಯ ಭೀತರಾಗ ತೊಡಗಿದರು ಹಾಗೆ ಯಾರು ಭಯ-ಭೀತರಾಗುವ ಅವಶ್ಯವಿಲ್ಲ.

ಮಟಕೆ ನಾಗಯ್ಯನವರು ವಿದ್ಯಾರ್ಥಿಗಳಿಗೆ ಹುರಿದುಂಬಿಸ ತೊಡಗಿದರು. ವಿದ್ಯಾರ್ಥಿಗಳು ಹಗಲಿರುಳೆನ್ನದೆ ಅಭ್ಯಾಸ ಮಾಡತೊಡಗಿದರು ಗುರುಸಿದ್ಧಯ್ಯನವರು ತಾವು ಸಿದ್ಧತೆಗೊಳಿಸಿಕೊಳ್ಳುತ್ತಲಿದ್ದ "ಕಾವ್ಯ ತೀರ್ಥ" ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ಉತ್ತೀರ್ಣನಾಗಲು ಹಂಬಲಿಸ ತೊಡಗಿದರು.

ಚಿದ್ರೆಮಠದ ವೀರಭದ್ರ ಶಾಸ್ತ್ರಿಗಳು "ಸಂಸ್ಕತ ಗುರುಕುಲ" ಬಿಟ್ಟು ಹೋದನಂತರ ಈ ಗುರು ಕುಲದ ಭವಿಷ್ಯವನ್ನು ಚಿಂತಿಸುತ್ತ ಮಟಕೆ ನಾಗಯ್ಯನವರು ಒಳಗೊಳಗೆ ಅಧೀರರಾದರು. ಒಮ್ಮೊಮ್ಮೆ ಅಸ್ತವ್ಯಸ್ತ ಆಗತೊಡಗಿದರು ಗುರುಸಿದ್ಧಯ್ಯ ಇವರ ಯೋಗ–ಕ್ಷೇಮ ನೋಡಿಕೊಳ್ಳುತ್ತ ಹತ್ತಿರವೇ ಇರುತ್ತಿದ್ದ "ಸಂಸ್ಕೃತ ಗುರು ಕುಲದ" ದುರ್ದೈವವೇನೋ ಅನ್ನುವಂತೆ ಮಟಕೆ ನಾಗಯ್ಯನವರು ಇದ್ದಕ್ಕಿದ್ದಂತೆ ವಿಧಿವಶರಾದರು. ಆಗ ಗುರುಸಿದ್ಧಯ್ಯನಿಗೆ ಮುಗಿಲು ಹರಿದು ಮೈ ಮೇಲೆ ಬಿದ್ದಂತಾಯಿತು ತನಗಿನ್ನಾರು ಗತಿಯೆಂದು ಕಣ್ಣೀರು ತಂದರು 'ಸಂಸ್ಕೃತ ಗುರು ಕುಲದ' ಅನ್ನಪೂರ್ಣೆಯಂತಿದ್ದ ಮಟಕ್ಕೆ ನಾಗಯ್ಯನವರ ಧರ್ಮ ಪತ್ನಿ ಪಾರ್ವತಮ್ಮ ಧೈರ್ಯ ಕಳೆದುಕೊಳ್ಳದೆ ವಿದ್ಯಾರ್ಥಿಗಳಿಗೆ ಧೈರ್ಯ ಹೇಳಿ ಅಭ್ಯಾಸದಲ್ಲಿ ನಿರತರಾಗಲು ಹೇಳಿದಳು.

ಗುರುಸಿದ್ಧಯ್ಯನವರಿಗೆ "ಕಾವ್ಯ ತೀರ್ಥ" ಪರೀಕ್ಷೆಯ ಪೀಸು ಕಟ್ಟಿ ಪುಣೆಗೆ ಹೋಗಿ ಪರೀಕ್ಷೆ ಕಟ್ಟು ಬರಲು ಎಲ್ಲ ಸಿದ್ಧತೆ ಮಾಡಿದಳು. ಗುರುಸಿದ್ಧಯ್ಯನವರು ತನ್ನ ಮೇಲೆ ತೋರಿದ ಕರುಣೆಯನ್ನು ಕಂಡು ಪರಮಾತ್ಮನ ಲೀಲೆ ಎಷ್ಟು ಅಗಾಧವಾಗಿದೆಯೆಂದು ಭವುಕರಾಗಿ ಮಟಕೆ ತಾಯಿ ಪಾರ್ವತಮ್ಮನವರ ಪಾದಾರವಿಂದಗಳಿಗೆ ಪದೆ ಪದೆ ನಮಸ್ಕರಿಸಿ ತಮ್ಮ ಅಂತರಂಗದ ಪ್ರೀತಿ–ವಿಶ್ವಾಸಗನ್ನು ಎತ್ತಿ ತೋರಿಸಿದರು.

ಧರ್ಮದರ್ಶಿ ಮಟಕೆ ನಾಗಯ್ಯನವರ ಸಹಕಾರ, ಚಿದ್ರೆಮಠದ ವೀರಭದ್ರ ಶಾಸ್ತ್ರಿಗಳ ಕೃಪಾಕಟಾಕ್ಷದಿಂದ ಅಪಾರವಾದ ಪಾಂಡಿತ್ಯ ಗಳಿಸಬೇಕೆಂಬ ಗುರುಸಿದ್ಧಯ್ಯನವರ ಕನಸು ಕರಗಿ ನೀರಾಗಿ ಹೊಯಿತು. ಧರ್ಮದರ್ಶಿ ಮಟಕೆ ನಾಗಯ್ಯನವರು ವಿಧಿವಶರಾದರು ಚಿದ್ರೆಮಠದ ಪಂಡಿತ ವೀರಭದ್ರಶಾಸ್ತ್ರಿಗಳು ಕಾಶೀ ಪೀಠದ ಅಧಿಪತಿಗಳಾದರು. ಒಬ್ಬರು ಬರಲಾರದ ದಾರಿಗೆ ಹೋಗಿಬಿಟ್ಟರು ಇನ್ನೊಬ್ಬರು ಸಾಮಾನ್ಯರ ಕೈಗೆ ನಿಲುಕಲಾರದ ಎತ್ತರಕ್ಕೆ ಏರಿದರು ಇನ್ನು ನನಗಾರು ಗತಿಯೆಂದು ಗುರುಸಿದ್ಧಯ್ಯನವರು ಪೂನಾ ಪಟ್ಟಣಕ್ಕೆ ಹೋಗಿ "ಕಾವ್ಯ ತೀರ್ಥ" ಪರೀಕ್ಷೆ ಕೊಟ್ಟು ಯಾದಗಿರಿಗೆ ತಮ್ಮ ಚಿಕ್ಕಪ್ಪ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳ ಹತ್ತಿರ ಬಂದರು.

■

## ವ್ಹಾಲಂಟರಿ ಸ್ಕೂಲ ಶಿಕ್ಷಕರು

"ಕಾವ್ಯ ತೀರ್ಥ" ಪದವಿ ಪಡೆದು ಮನೆಗೆ ಬಂದ ಗುರುಸಿದ್ಧಯ್ಯನನ್ನು ಚಿಕ್ಕಪ್ಪ ಚಿಕ್ಕಮ್ಮನವರು ಅಕ್ಕರೆಯಿಂದ ಕಂಡು ನಮ್ಮ ಮನೆತನದಲ್ಲಿ ನೀನೊಬ್ಬ ವಿದ್ಯಾವಂತನಾದುದು ಹೆಮ್ಮೆಯ ಸಂಗತಿ. ಎಂದು ಸಂತಸ ಪಟ್ಟರು. ಯಾದಗಿರಿಗೆ ಗುರುಸಿದ್ಧಯ್ಯ ಬಂದ ಸಂಗತಿ ಗೋಡಿಹಾಳಕ್ಕೆ ತಿಳಿಯುತ್ತಲೇ ತಂದೆ ಮಲ್ಲಿಕಾರ್ಜುನಯ್ಯ ಮಗನನ್ನು ಕಾಣಲು ಧಾವಿಸಿ ಬಂದರು. ಎಲ್ಲರೂ ವಿದ್ಯಾವಂತ, ಬುದ್ಧಿವಂತ, ತರುಣ ಗುರುಸಿದ್ಧಯ್ಯನನ್ನು ಕಂಡು ಹಿರಿ ಹಿರಿ ಹಿಗ್ಗ ತೊಡಗಿದರು.

ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ನಡೆಸುತ್ತಿದ್ದ ಶ್ರೀ ಶಂಕರಾನಂದ ಮುದ್ರಣಾಲಯ ಟುಕು ಟುಕು ಎಂದು ನಡೆದಿತ್ತು. ಪ್ರೆಸ್ಸಿನಲ್ಲಿ ಗುರುಸಿದ್ಧಯ್ಯನ ತಮ್ಮ ಚನ್ನ ಬಸವಯ್ಯನೇ ಕೆಲಸ ಮಾಡುತ್ತಿದ್ದ ಗುರುಸಿದ್ಧಯ್ಯ ಆ ಕಡೆ ತಲೆಯನ್ನೇ ಹಾಕಲಿಲ್ಲ. ತಾನು ಕಷ್ಟ ಪಟ್ಟ ವಿದ್ಯೆ ಸಾರ್ಥಕವಾಗಬೇಕು ಬಹುಜನರಿಗೆ ಅದು ಮುಟ್ಟ ಬೇಕು ಎಂದು ಅವರ ಅಭಿಪ್ರಾಯವಾಗಿತ್ತು.

ನಿಜಾಂ ಪ್ರಾಂತದಲ್ಲಿ ಅದರಲ್ಲಿಯೂ ವಿಶೇಷವಾಗಿ ಕಲ್ಯಾಣ ಕರ್ನಾಟಕವೆಂದು ಹೆಸರಾದ ಕಲಬುರ್ಗಿ, ಬೀದರ್, ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕನ್ನಡಿಗರೇ ವಾಸಿಸುತ್ತಿದ್ದರು. ಇವರೆಲ್ಲರ ಮಾತೃಭಾಷೆ ಕನ್ನಡ ಈ ಪ್ರದೇಶದ ಮಕ್ಕಳಿಗೆ ಕಲಿಯಲು ಶಾಲೆಗಳೇ ಇರಲಿಲ್ಲ. ವಿದ್ಯೆ ಬೇಕೆಂದು ಹಂಬಲಿಸುವವರು ಎಲ್ಲಿಗೋ ಹೋಗಿ ಏನೇನೋ ಮಾಡಿ ಕಲಿತುಕೊಂಡು ಬರುತ್ತಿದ್ದರು. ಉರ್ದು ರಾಜ್ಯ ಭಾಷೆಯಾಗಿದ್ದ ಆ ಕಾಲದಲ್ಲಿ ಕನ್ನಡ, ಮರಾಠಿ, ಸಂಸ್ಕೃತ ಇನ್ನಿತರ ಯಾವುದೇ ಭಾಷೆಗಳಿಗೆ ಆದ್ಯತೆಯೇ ಇರಲಿಲ್ಲ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಗುರುಸಿದ್ಧಯ್ಯನವರು ಅಲ್ಲಿ, ಇಲ್ಲಿ ಅಡ್ಡಾಡಿ ಪಡಬಾರದ ಕಷ್ಟ ಪಟ್ಟು ಉರ್ದು, ಕನ್ನಡ, ಮರಾಠಿ ನೋಡಿ ಸಂಸ್ಕೃತ ಭಾಷೆಗಳನ್ನು ಚೆನ್ನಾಗಿ ಓದಿ ಅಭ್ಯಾಸ ಮಾಡಿ "ಕಾವ್ಯ ತೀರ್ಥ" ಪದವಿ ಪಡೆದು ಗಮನಾರ್ಹ ವ್ಯಕ್ತಿ ಎನಿಸಿಕೊಂಡಿದ್ದರು. ತಮ್ಮಲ್ಲಿದ್ದ ವಿದ್ಯೆ, ವಿನಯದಿಂದ ಅಂದಿನ ಕಾಲದ ಮಕ್ಕಳಿಗೆ ಶಿಕ್ಷಣ ನೀಡಲು ಶಿಕ್ಷಕರಾಗಲು ಬಯಸಿದರು.ತಮ್ಮಅಭಿಪ್ರಾಯ ತಮ್ಮ ತಂದೆ ಮಲ್ಲಿಕಾರ್ಜುನಯ್ಯನವರ ಮುಂದೆ ಮಂಡಿಸಿದರು. ಶಿಕ್ಷಕರಾಗಲು ಬಯಸಿ ಶಿಕ್ಷಣ ಇಲಾಖೆಗೆ ಅರ್ಜಿ ಸಲ್ಲಿಸಿದರು.

ನಿಜಾಂ ಪ್ರಾಂತದಲ್ಲಿ ಶಾಲೆ-ಶಿಕ್ಷಣಕ್ಕೆ ಆದ್ಯತೆಯೇ ಇರಲಿಲ್ಲ. ಶಿಕ್ಷಕರಾಗಲು ತಾವಾಗಿಯೇ ಬಯಸಿ ಬಂದರೆ ಅಂತಹವರನ್ನು ವ್ಹಾಲಂಟರಿ ಸ್ಕೂಲ ಶಿಕ್ಷಕರೆಂದು ಪರಿಗಣಿಸಿ ತಿಂಗಳಿಗೆ ೧೦ರೂ ಸಂಬಳ ಕೊಟ್ಟು ಶಾಲೆ ಪ್ರಾರಂಬಿಸಲು ಅನುಮತಿ ಕೊಡುತ್ತಿದ್ದರು. ಅಂತಹ ಅನುಮತಿ ಗುರುಸಿದ್ಧಯ್ಯನವರಗೂ ದೊರಕಿತು ೧೦ರೂ ಸಂಬಳದ ಮೇಲೆ ಯಾದಗಿರಿಯಲ್ಲಿ ವ್ಹಾಲಂಟರಿ ಸ್ಕೂಲ ಶಿಕ್ಷಕರಾಗಿ ಸೇವೆ ಸಲ್ಲಿಸ ತೊಡಗಿದರು.

ಶಿಕ್ಷಕ ಗುರುಸಿದ್ಧಯ್ಯನವರು ಹತ್ತೊಂಬತ್ತು, ಇಪ್ಪತ್ತು ವರ್ಷದ ಏರು ಜವ್ವನದ ತರುಣ ತೆಳ್ಳಗೆ, ಬೆಳ್ಳಗೆ, ಎತ್ತರದ ನಿಲುವು, ವಿಶಾಲವಾದ ಹಣೆ, ಹಣೆಯ ಮೇಲೆ ಶುಭ್ರವಾದ ಮೂರು ಬೆರಳು ವಿಭೂತಿ ಶಿವಕಳೆಯನ್ನು ಹೊರ ಹೊಮ್ಮಸುತ್ತಿತ್ತು. ತಲೆಯ ಮೇಲೆ ಹತ್ತಿಯ ಕಾಯಿಯಂತೆ ಒತ್ತಿ ಸುತ್ತಿದ ರುಮಾಲು ಹೆಗಲ ಮೇಲೆ ಬಿಳಿಯ ಶಲ್ಲೆ ಬಿಳಿಯ ಧೋತರ ಉಟ್ಟು ಮುಗುಳು ನಗೆ ಬೀರುತ್ತ ಚಕ ಚಕನೆ ಹೆಜ್ಜೆ ಹಾಕಿ ನಡೆದು ಬರುತ್ತಿರುವ ಗುರುಸಿದ್ಧಯ್ಯ ಶಿಕ್ಷಕರನ್ನು ಕಂಡು ಜನರು ಶಾಸ್ತ್ರಿ ಮಾಸ್ತರು ಬಂದರು ಎಂದು ಅಕ್ಕರೆಯಿಂದ ಕಾಣುತ್ತಿದ್ದರು ಕೆಲವರು ಶಾಸ್ತ್ರಿ ಮಾಸ್ತರು, ಇನ್ನೂ ಕೆಲವರು 'ಸ್ವಾಮಿ' ಮಾಸ್ತರು ಎಂದು ಪ್ರೀತಿಯಿಂದ, ಭಕ್ತಿಯಿಂದ ಕರೆದು ಪಾದಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಿದ್ದರು.

■

# ಜಿ.ಎಂ. ಗುರುಸಿದ್ಧಯ್ಯ ಶಾಸ್ತ್ರಿಗಳು

ಜಿ.ಎಂ. ಬಸವರಾಜಯ್ಯ ಶಾಸ್ತ್ರಿಗಳು ಯಾದಗಿರಿಯಲ್ಲಿ ಶಿಕ್ಷಣ, ಸಾಹಿತ್ಯ, ಸಮಾಜ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ತುಂಬ ಹೆಸರು ಮಾಡಿದ ವ್ಯಕ್ತಿ. ಅವರ ಅಣ್ಣನ ಮಗನೇ ಗುರುಸಿದ್ಧಯ್ಯ ಮಾಸ್ತರರು. ಗುರುಸಿದ್ದಯ್ಯನನ್ನು ನೋಡಿದ ಜನರಿಗೆ ಇವರನ್ನೂ ಕೇವಲ ಗುರುಸಿದ್ಧಯ್ಯ ಎಂದು ಕರೆಯಲು ಅಷ್ಟು ಸಮಾಧಾನವೆನಿಸಲಿಲ್ಲ. ಕೆಲವರು ವೇದ ಮೂರ್ತಿ ಗುರುಸಿದ್ಧಯ್ಯನವರು ಎಂದು ಬಾಯ್ತುಂಬ ಕರೆಯುತ್ತಿದ್ದರು. ಇನ್ನೂ ಕೆಲವರು ಸ್ವಾಮಿ ಮಾಸ್ತರರು ಎಂದೂ ಮತ್ತೆ ಕೆಲವರು "ಶಾಸ್ತ್ರಿ" ಮಾಸ್ತರ "ಗುರೂಜಿ" ಎಂದು ಕರೆದು ಅವರ ಬಗ್ಗೆ ಇದ್ದ ತಮ್ಮ ಗೌರವವನ್ನು ವ್ಯಕ್ತ ಪಡಿಸುತ್ತಿದ್ದರು ಒಟ್ಟಿನಲ್ಲಿ ಗುರುಸಿದ್ಧಯ್ಯನವರನ್ನು ಜನರು ತುಂಬು ಗೌರವದಿಂದ ಕಾಣುತ್ತಿದ್ದರು.

ನಿಜಾವಾಗಿಯೂ ಗುರುಸಿದ್ಧಯ್ಯನವರು ಶಿಸ್ತಿನ ಸಾಕಾರ ಮೂರ್ತಿ ತಮ್ಮ ಹಿತವಾದ ಮಿತವಾದ ನಡೆ-ನುಡಿಗಳಿಂದ ಮಾತು-ಕಥೆಗಳಿಂದ ಮಕ್ಕಳಿಗೆ ಅಕ್ಕರೆಯ ಗುರುಗಳಾಗಿ ಪರಿಣಮಿಸಿದರು. ಗುರುಸಿದ್ಧಯ್ಯನವರು ಎಲ್ಲ ಮಕ್ಕಳಿಗೂ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಯ ಬೇಕೆಂದು ಹೇಳುತ್ತಿದ್ದರು. ಸರ್ವಸಾಧಾರಣ ಎಲ್ಲ ಮಕ್ಕಳಿಗೆ ಶಾಲೆಯಲ್ಲಿ ಕನ್ನಡವನ್ನೇ ಕಲಿಸುತ್ತಿದ್ದರು. ನಂತರ ಬಾಳಬೋಧೆ ಮುಸಲ್ಮಾನ ಮಕ್ಕಳಿಗೆ ಉರ್ದು ಸಹ ಹೇಳಿ ಕೊಡುತ್ತಿದ್ದರು ಮಾರುವಾಡಿ, ಕೊಮಟರ ಮಕ್ಕಳಿಗೆ ಮೋಡಿ ಮರಾಠಿಯನ್ನು, ಪೇಶ್ವೆಗಳ ಭಾಷೆ ಮೊಡಿ ಹೇಳಿಕೊಡುತ್ತಿದ್ದರು. ಕನ್ನಡ ಮಕ್ಕಳಿಗೆ ಕನ್ನಡ ಭಾಷೆ ಕಲ್ಲು ಸಕ್ಕರೆಯಷ್ಟು ರುಚಿಯಾಗಿ ಪರಿಣಮಿಸಿತು. ಇದರಿಂದ ಗುರುಸಿದ್ಧಯ್ಯನವರ ಹೆಸರು ಕನ್ನಡ ಶಿಕ್ಷಕರೆಂದು ಬಹು ಬೇಗನೆ ಜನಪ್ರಿಯವಾಯಿತು.

ಶಾಲೆ ಬಿಟ್ಟ ನಂತರ ಚಿಕ್ಕಪ್ಪನವರ ಕಡೆ ಬಂದು ಶ್ರೀ ಶಂಕರಾನಂದ ಮುದ್ರಣದ ಕಾರ್ಯಕಲಾಪಗಳಲ್ಲಿ ತುಂಬ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಆಗ ಬಿ.ಎಂ. ವೀರೇಶ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರ ಬರುತ್ತಿದ್ದ 'ಅಮರವಾಣಿ' ಸಮಾಜೋಧಾರ್ಮಿಕ ಮಾಸ ಪತ್ರಿಕೆ ಅಲ್ಲಿಯೇ ಅಚ್ಚುಮಾಡಲಾಗುತ್ತಿತ್ತು. ಗುರುಸಿದ್ಧಯ್ಯನವರು. ಅಮರವಾಣಿ ಪತ್ರಿಕೆಯ ಸಹ ಸಂಪಾದಕರಾಗಿದ್ದರು

'ಅವರವಾಣಿ' ಕನ್ನಡ ಧಾರ್ಮಿಕ ಮಾಸ ಪತ್ರಿಕೆಯನ್ನು ಸರ್ವಾಂಗ ಸುಂದರವಾಗಿ ಹೊರತರಲು ಗುರುಸಿದ್ಧಯ್ಯನವರು ಪ್ರಯತ್ನಿಸಿ ಕನ್ನಡಿಗರ ಕೈಗೆ ಕೊಡತೊಡಗಿದರು. ಕನ್ನಡ ಭಾಷೆಯ ಮೇಲೆ ಇದ್ದ ಹಿಡಿತ ಆ ದುಡಿತ ನೋಡಿ ಸ್ವತಃ ಬಿ.ಎಂ. ವೀರೇಶ ಶಾಸ್ತ್ರಿಗಳೇ ಸಂಪಾದಕ ಮಂಡಳಿಯಲ್ಲಿದ್ದ ಗುರುಸಿದ್ಧಯ್ಯನವರ ಹೆಸರನ್ನು "ಜಿ.ಎಂ.ಗುರುಸಿದ್ಧಶಾಸ್ತ್ರಿಗಳು" ಎಂದು ಅಚ್ಚು ಹಾಕಿಸಿದರು. ಅದು ೧೯೩೯-೪೦ನೆಯ ಇಸವಿ. ಆಗ ಜಿ.ಎಂ.ಗುರುಸಿದ್ಧಶಾಸ್ತ್ರಿಗಳಿಗೆ ೨೫ ವರ್ಷ. ಕುಡಿ ಮೀಸೆಯ ಏರು ಜವ್ವನದ ತರುಣ ಕನ್ನಡ ಶಿಕ್ಷಕ. ಆಗ ಜಿ.ಎಂ.ಗುರುಸಿದ್ಧಶಾಸ್ತ್ರಿಗಳಿಗೆ ಸರಕಾರದಿಂದ ಹತ್ತು ರೂಪಾಯಿ ಸಂಬಳ ಬರುತಿತ್ತು. ಈ ಹತ್ತು ರೂಪಾಯಿ ಸಂಬಳದಲ್ಲಿ ಶಾಸ್ತ್ರಿಗಳು ತಮ್ಮ ತಾಯಿ-ತಂದೆ, ತಮ್ಮ ಅಕ್ಕ ತಂಗಿಯರನ್ನೊಳಗೊಂಡು ಸಂತೋಷದಿಂದ ಇರುತ್ತಿದ್ದರು. "ಕಾವ್ಯ ತೀರ್ಥ" ಪದವೀಧರ ಜಿ.ಎಂ.ಗುರುಸಿದ್ಧಶಾಸ್ತ್ರಿಗಳು ತಮ್ಮ ವಿದ್ಯ ವಿನಯದಿಂದ ಇಡೀ ಸಮಾಜದ ಗಮನ ಸೆಳೆದು ಗಮನಾರ್ಹ ವ್ಯಕ್ತಿ ಎನಿಸಿಕೊಂಡಿದ್ದರು.

ಚಿಕ್ಕಂದಿನಿಂಕಲೂ ತಮ್ಮನ್ನು ಅಗಲಿ ವಿದ್ಯಾಭ್ಯಾಸಕ್ಕಾಗಿ ಪರದಾಡಿ ಒಂದು ಹಂತಕ್ಕೆ ಬಂದು "ಕಾವ್ಯ ತೀರ್ಥ" ಪದವಿ ಪಡೆದು ಜಿ.ಎಂ.ಗುರುಸಿದ್ಧಶಾಸ್ತ್ರಿಗಳು ಎಂದು ಕರೆಯುತ್ತಿರುವುದನ್ನು ಕೇಳಿ ತಾಯಿ-ತಂದೆ ಹೆಮ್ಮೆ ಪಟ್ಟುಕೊಳ್ಳ ತೊಡಗಿದರು. ಮಗನ ನಡೆ-ನುಡಿ ನೋಡಿ ನಮ್ಮ ಜನ್ಮ ಸಾರ್ಥಕವಾಯಿತೆಂದು ಸಂತಸಪಟ್ಟರು. ತಮ್ಮ ಮಗನಿಂದ ಶಿಕ್ಷಣ, ಸಾಹಿತ್ಯ, ಸಮಾಜ ಮತ್ತು ಧಾರ್ಮಿಕ ಕ್ಷೇತ್ರ ಪುನೀತವಾಗುತ್ತಿರುವುದು ನಮ್ಮ ಮನೆತನಕ್ಕೆ ಬಂದ ಗೌರವವಲ್ಲದೆ ಇನ್ನೇನು? ಚಿಕ್ಕಪ್ಪ ಚಿಕ್ಕಮ್ಮನೂ ಸಹ ನಮ್ಮ ಮನೆ-ನಮ್ಮ ಸಮಾಜ ಅಷ್ಟೇ ಅಲ್ಲ ಜಿ.ಎಂ.ಗುರುಸಿದ್ಧಶಾಸ್ತ್ರಿಗಳು ಇಡೀ ಸಮಾಜದ ದೊಡ್ಡ ಆಸ್ತಿಯಾಗಿ ಪರಿಣಮಿಸುತ್ತಾರೆ. ಎಂದು ಮನದಲ್ಲಿ ಮಂಡಿಗೆ ತಿಂದರು. ಹೀಗೆ ಗುರುಸಿದ್ಧಯ್ಯ "ಜಿ.ಎಂ.ಗುರುಸಿದ್ಧಶಾಸ್ತ್ರಿಗಳು" ಎಂದು ಕನ್ನಡಿಗರ ಮನೆ ಮಾತಾಗಿದ್ದಾರೆ. ■

## ತಂದೆಯ ಮರಣ–ಮನೆಯ ಹೊಣೆಗಾರಿಕೆ

ಮಗ ಜಿ.ಎಂ.ಗುರುಸಿದ್ಧಯ್ಯಶಾಸ್ತ್ರಿಗಳು ಇನ್ನೇನು ಕೈಗೆ ಬಂದರು ಎಂಬ ನೆಮ್ಮದಿಯ ಉಸಿರು ಬಿಡುತ್ತಿರುವಾಗ ತಂದೆ ಮಲ್ಲಿಕಾರ್ಜುನಯ್ಯನವರು ಆಗಾಗ್ಗೆ ಜ್ವರ, ನೆಗಡಿಗಳಿಂದ ಅಸ್ವಸ್ತರಾಗುತ್ತಿದ್ದರು ಗೋಡಿಹಾಳದಲ್ಲಿ ವೈದ್ಯಕೀಯ ಸೌಲಭ್ಯ ಇಲ್ಲದ್ದಕ್ಕೆ ತಮ್ಮ ಸಹೋದರ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳ ಕಡೆಗೆ ಬರುತ್ತಿದ್ದರು. ಚಿಕ್ಕ ಮಗ ಚೆನ್ನಬಸವಯ್ಯನು ಅಲ್ಲಿಯೇ ಇರುತ್ತಿರುವುದರಿಂದ ಇಬ್ಬರೂ ಮಕ್ಕಳು ಸಹೋದರ ಎಲ್ಲರೂ ಕೂಡಿ ವೈದ್ಯರಿಗೆ ತೋರಿಸಿದರು. ಔಷಧೋಪಚಾರವೂ ನಡೆಯಿತು ಒಂದು ದಿನ ಗುಣವಾದರೆ ಇನ್ನೊಂದು ದಿನ ಮತ್ತೆ ಅಸ್ವಸ್ಥರಾಗುತ್ತಿದ್ದರು ಹೀಗೆ ಸಹಜವಾಗಿಯೇ ಇದ್ದ ಮಲ್ಲಿಕಾರ್ಜುನಯ್ಯನವರು ಸದ್ದು ಗದ್ದಲವಿಲ್ಲದೆ ಲಿಂಗೈಕ್ಯರಾದರು. ಈ ಸುದ್ದಿ ತಿಳಿಯುತ್ತಲೇ ರಾಮಗಿರಿ ಕಟ್ಟಿಮನಿ ಹಿರೇಮಠದ ಸ್ವಾಮಿಗಳು ಶ್ರೀಷ.ಬ್ರ ಶಿವಶಂಕರ ಸ್ವಾಮಿಗಳ ಕೈ ಕಾಲುಗಳೇ ತಣ್ಣಗಾದವು. ಕೂಡಲೇ ತೀರಿಕೊಂಡ ಸ್ಥಳಕ್ಕೆ ಧಾವಿಸಿ ಬಂದರು. ಹಾಗೆಯೇ ಊರಿನ ಪ್ರಮುಖರು ಶಿಷ್ಯರ ಬಳಗ, ಭಕ್ತ ವೃಂದ, ಕಣ್ಣೀರು ಹಾಕಿತು ನಿಜವಾಗಿಯೂ ಮಲ್ಲಿಕಾರ್ಜುನಯ್ಯನವರು ತುಂಬ ಪ್ರಾಮಾಣಿಕರು. ಕಳಕಳಿಯ ವ್ಯಕ್ತಿ, ಸಾಧು ಪ್ರಾಣಿ, ಹಿರಿಯರು ಗಳಿಸಿದ್ದ ಗೋಡಿಹಾಳ ಮಠಕ್ಕೆ ಬಂದು ಶಿಷ್ಯರ ಮಧ್ಯದಲ್ಲಿ ಇದ್ದು ಹೊಲ, ಮಠಗಳನ್ನು ನೋಡಿಕೊಂಡು ಅತ್ಯಂತ ಸಜ್ಜನರಾಗಿ ತಮ್ಮ ಮಡದಿ ನೀಲಮ್ಮನವರೊಂದಿಗೆ ಬಾಳಿ ಸಮಾಜಕ್ಕೆ ಬೇಕಾಗಿದ್ದರು, ಬೆಳಕಾಗಿದ್ದರು.

ತಂದೆಯ ಮರಣದಿಂದ ಭಾವ ಜೀವಿ ಗುರುಸಿದ್ಧಯ್ಯ ಶಾಸ್ತ್ರಿಗಳಿಗೆ ದಿಕ್ಕೇ ತಪ್ಪಿದಂತಾಯಿತು ಇದ್ದಕ್ಕಿದ್ದಂತೆ ತಂದೆ ಹೇಳದೇ ಕೇಳದೇ ಹೋಗಿಬಿಟ್ಟರಲ್ಲ ಎಂದು ಕಣ್ಣಿಗೆ ಕತ್ತಲು ಕವಿದಂತಾಯಿತು ತಂದೆಯ ಮರಣದಿಂದ ಕೆಲವು ದಿವಸ ನಿದ್ದೆ ನೀರಡಿಕೆಗಳಿಲ್ಲದೆ ಬಳಲಿದರು ಹಿರಿಯಮಗನಾದ ನಾನೇ ಧೈರ್ಯಗೆಟ್ಟರೆ ಹೇಗೆ ಎಂದು ತಮ್ಮಷ್ಟಕ್ಕೆ ತಾವೇ ಧೈರ್ಯ ತಂದುಕೊಂಡರು. ನಾಲ್ಕು ಜನ ಗಂಡುಮಕ್ಕಳು ಒಬ್ಬಹೆಣ್ಣು ಮಗಳು ಧರ್ಮ ಪತ್ನಿ ನೀಲಮ್ಮನವರನ್ನು ಬಿಟ್ಟು ಇದ್ದಕ್ಕಿದ್ದಂತೆ ಬಿಟ್ಟು ಹೋದ ಅಣ್ಣ ಮಲ್ಲಿಕಾರ್ಜುನಯ್ಯನ ಅಕಾಲ ಮರಣದಿಂದ ಜಿ.ಎಂ.ಬಸವರಾಜಯ್ಯಶಾಸ್ತ್ರಿಗಳಿಗೆ ಗರಬಡಿದಂತಾಯಿತು. ಬಡತನವೇ ಇರಲಿ,

ಸಿರಿತನವೇ ಇರಲಿ ತಮ್ಮ ಗೂಡಿನಲ್ಲಿ ತಾವು ಇದ್ದರು. ಈಗ ಗೂಡು ಬಿಟ್ಟು ಹಕ್ಕಿ ಹಾರಿಹೋಯಿತು. ಮನುಷ್ಯನ ಕೈಯಲ್ಲಿ ಏನಿದೆ ಎಲ್ಲವೂ ಅವನ ಇಚ್ಛೆ ಅವನು ಮಾಡಿದಂತೆ ಆಗಲಿ ನಮ್ಮೆಲ್ಲರಿಗೂ ದಾರಿ ತೋರಿಸುವವನು ಅವನೇ ಎಂದು ಹಿರಿಯ ಮಗ ಜಿ.ಎಂ.ಗುರುಸಿದ್ಧಶಾಸ್ತ್ರಿಗಳಿಗೆ ಚಿಕ್ಕಪ್ಪ ಧೈರ್ಯ ಹೇಳಿದರು. ಅತ್ತಿಗೆ ನೀಲಮ್ಮನವರಿಗೂ, ಮಕ್ಕಳಿಗೂ, ಸಾಂತ್ವನ ಹೇಳಿದರು ಷ. ಬ್ರ ಶ್ರೀ ಶಿವಶಂಕರ ಸ್ವಾಮಿಗಳು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಹತ್ತಿರ ಕರೆದು ಮನೆಯ ಹೊಣೆಗಾರಿಕೆ ಇಂದಿನಿಂದ ನಿನ್ನದು ಈ ಮನೆತನವನ್ನು ಮೇಲಕ್ಕೇ ಎತ್ತಿ ಸಮಾಜದ 'ಕಣ್ಣು' ನೀನಾಗಬೇಕು ಎಂದು ಹರಸಿ ಹಾರೈಸಿ ರಾಮಗಿರಿ ಕಟ್ಟಿಮನಿ ಹಿರೇಮಠಕ್ಕೆ ತೆರಳಿದರು.

ಜಿ.ಎಂ.ಗುರುಸಿದ್ಧಯ್ಯಶಾಸ್ತ್ರಿಗಳು ಎಲ್ಲವನ್ನು, ಎಲ್ಲರನ್ನೂ ಸಮಾಧಾನದಿಂದ ನೋಡಿಕೊಳ್ಳುತ್ತ ತಮ್ಮ ಶಿಕ್ಷಕ ವೃತ್ತಿಯಲ್ಲಿ ನೆಲೆ ಕಾಣಲು ಹಂಬಲಿಸ ತೊಡಗಿದರು ತಮ್ಮ ವೈಯಕ್ತಿಕ ದುಃಖವನ್ನು ನುಂಗಿ ಶಾಲಾಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ ಮುನ್ನಡೆಸಿದರು

■

# ಶಿಕ್ಷಕ ವೃತ್ತಿಗೆ ಶರಣು ಹೊಡೆದರು

ಸರಳ ಸಜ್ಜನಿಕೆ ಹಿತವಾದ ಮಿತವಾದ ಮಾತು ನುಡಿದಂತೆ ನಡೆ 'ಕಾಯಕ ಕೈಲಾಸ' ಎಂದು ನಂಬಿದ ಕನ್ನಡ ಶಿಕ್ಷಕರು ಜಿ.ಎಂ.ಗುರುಸಿದ್ಧಯ್ಯಶಾಸ್ತ್ರಿಗಳು ಶಾಲೆಗೆ ಬರುವ ಮಕ್ಕಳನ್ನು ಅಕ್ಕರೆಯಿಂದ ಬರಮಾಡಿಕೊಂಡು ಕನ್ನಡ ಭಾಷೆಯನ್ನು ಕಲಿಸುತ್ತಿದ್ದರು ಕೆಲವೇ ದಿನಗಳಲ್ಲಿ ಕನ್ನಡ ಅಕ್ಷರ ಮಾಲೆಗಳು ಪಾಠಿಯಲ್ಲಿ ಕಂಗೊಳಿಸತೊಡಗಿದವು "ಕನ್ನಡ ಅಂಕಲಿಪಿ" "ಬಾಳ ಬೋಧ" ಪುಸ್ತಕಗಳು ಮಕ್ಕಳ ಕೈಯ್ಯಲ್ಲಿ ನಲಿಯ ತೊಡಗಿದವು ಕನ್ನಡ ಭಾಷೆಯನ್ನೂ ಕೂಡ ಮಕ್ಕಳಿಗೆ ಕಲಿಸುವುದೆಂದರೆ 'ನಿತ್ಯ ಲಿಂಗಾರ್ಚನೆ' ಮಾಡಿಕೊಂಡಷ್ಟೇ ಹರ್ಷ, ಆನಂದ ಜಿ.ಎಂ. ಗುರುಸಿದ್ಧಯ್ಯಶಾಸ್ತ್ರಿಗಳಿಗೆ.

ಬಾಲ್ಯದಿಂದಲೇ ಜಿ.ಎಂ.ಗುರುಸಿದ್ಧಶಾಸ್ತ್ರಿಗಳಿಗೆ ಯಾದಗಿರಿ ಪರಿಚಯದ ಊರೇ. ಜನರನ್ನು ಬಲ್ಲವರು. ಜನರೂ ಜಿ.ಎಂ.ಗುರುಸಿದ್ಧಶಾಸ್ತ್ರಿಗಳನ್ನು ಗುರುತಿಸಿದರು. ಹೀಗಾಗಿ ಶಾಸ್ತ್ರಿಗಳಿಗೆ ಕೆಲಸಮಾಡಲು ಇನ್ನಷ್ಟು ಹುರುಪು–ಹುಮ್ಮಸ್ಸು ಬರುತಿತ್ತು. ಮಕ್ಕಳೂ ಸಹ ಶಾಸ್ತ್ರಿಗಳನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದರು. ತಮ್ಮ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಶಾಸ್ತ್ರಿಗಳನ್ನು ಜನರೂ ಅಷ್ಟೇ ಗೌರವಗಳಿಂದ ಕಾಣುತ್ತಿದ್ದರು. ಇದರಿಂದ ಮೆಲ್ಲನೆ ಶಾಸ್ತ್ರಿಗಳ ಹೆಸರು ಮನೆಮಾತಾಗತೊಡಗಿತು.

ಶಾಲೆಯಿಂದ ಬಂದ ಮೇಲೆ ವ್ಯರ್ಥ ವೇಳೆ ಕಳೆಯದೆ ಶ್ರೀ ಶಂಕರಾನಂದ ಮುದ್ರಣಾಲಯಕ್ಕೆ ಬಂದು ಬಿಡುತ್ತಿದ್ದರು.ತಾವು ಕೆಲಸ ಮಾಡುವ ಮುದ್ರಣಾಲಯದ ಹೆಸರು ಸುಂದರವಾಗಿ ನಾಮ ಫಲಕದ ಮೇಲೆ ದಪ್ಪ ಅಕ್ಷರದಲ್ಲಿ "ಶ್ರೀ ಶಂಕರಾನಂದ ಮುದ್ರಣಾಲಯ, ಯಾದಗಿರಿ" ಎಂದು ಕನ್ನಡದಲ್ಲಿ ಬರೆಸಿ ಮುದ್ರಣಾಲಯ ಕಟ್ಟಡದ ಮೇಲೆ ಎದ್ದು ಕಾಣುವಂತೆ ಕಟ್ಟಿದರು. ಮುದ್ರಣಾಲಯದ ಮೇಲೆ ಕಂಗೊಳಿಸುವ ಕನ್ನಡ ನಾಮಫಲಕ ನೋಡಿ ಎಲ್ಲರು ಸಂತಸ ಪಡತೊಡಗಿದರು ಆ ಊರುಗಳಲ್ಲಿ ಇದ್ದ ಅಂಗಡಿ, ಅಡತಿ ಕಛೇರಿಗಳ ಮೇಲೆ ಜನರು ಕನ್ನಡದಲ್ಲಿ ಬರೆಸಿ ನಾಮ ಫಲಕಗಳನ್ನು ತೂಗು ಬಿಟ್ಟರು. ಹೀಗೆ ಸದ್ದು ಗದ್ದಲವಿಲ್ಲದೆ ಅತ್ಯಂತ ಪ್ರೀತಿಯಿಂದ ಜನರು ಕನ್ನಡದಲ್ಲಿ ಎರಡು ಮೂರು ಬಣ್ಣಗಳಲ್ಲಿ ನಾಮ ಫಲಕ ಬರೆಸಿ ತೂಗು ಹಾಕಿ ಅಭಿಮಾನ ಪಡತೊಡಗಿದರು. ಪ್ರಚಾರದ ಅಬ್ಬರವಿಲ್ಲದೆ

ಚರ್ಚೆ ಇಲ್ಲದೆ, ಚಳವಳಿಗಳು ಇಲ್ಲದೆ ಮೆಲ್ಲನೆ ಕನ್ನಡ ಭಾಷೆಯ ಮೇಲೆ ಜನರ ಅಭಿಮಾನ ಮೂಡತೊಡಗಿತು. ಮನದ ಮೊಗ್ಗೆಯೊಡೆಯದೆ ಮೌನದಿಂದ ಮಾಡಿದ ಈ ಕೆಲಸವನ್ನು ಗುರುಸಿದ್ಧಶಾಸ್ತ್ರಿಗಳು ಮಾಡಿದರು. ಇಂದಿಗೂ ಜನ ಈ ಕೈಂಕರ್ಯವನ್ನು ಕೊಂಡಾಡುತ್ತಾರೆ.

ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದ "ಅಮರವಾಣಿ" ಒಂದು ಧಾರ್ಮಿಕ ಕನ್ನಡ ಮಾಸ ಪತ್ರಿಕೆಯಾಗಿತ್ತು. ಪತ್ರಿಕೆಯಲ್ಲಿ ಎಲ್ಲಿಯೂ ಮುದ್ರಣ ದೋಷ ಉಳಿಯದಂತೆ ನೋಡಿಕೊಂಡು ಸರ್ವಾಂಗ ಸುಂದರವಾಗಿ ಹೊರಬರುವಂತೆ ಕಾಳಜಿ ವಹಿಸಿ ತಿಂಗಳ ಪತ್ರಿಕೆ ತಿಂಗಳು ಮುಗಿಯುವುದರೊಳಗಾಗಿ ಕನ್ನಡಿಗರ ಕೈ ಸೇರುವಂತೆ–ಮಾಡುತ್ತಿದ್ದರು. ಶ್ರೀಮಂತರ ಮನೆಗಳಿಗೂ,ಎಲ್ಲ ಮಠ ಮಾನ್ಯಗಳಿಗೂ ಆಸಕ್ತ ಕನ್ನಡ ಓದುಗರ ಮನೆಗಳಿಗೂ ಈ ಪತ್ರಿಕೆ ಕಳಿಸಿ ಕೊಡಲಾಗುತ್ತಿತ್ತು. ಮಠಗಳು ಮಾದ್ಯಗಳು ಈ ಪತ್ರಿಕೆಗೆ ವಾರ್ಷಿಕ ಚಂದಾ ಹಣ ನೀಡಿ ಪ್ರೋತ್ಸಾಹಿಸುತ್ತಿದ್ದವು. ಪತ್ರಿಕೆಯ ಮೇಲೆ ಅಚ್ಚಾದ ಜಿ.ಎಂ.ಗುರುಸಿದ್ಧಶಾಸ್ತ್ರಿಗಳ ಹೆಸರು ಓದಿ ಜನ ತುಂಬ ಅಭಿಮಾನ ಪಡಿತ್ತಿದ್ದರು. ಹೀಗೆ ಅಂದು ಸದ್ದು ಗದ್ದಲವಿಲ್ಲದೆ ಪ್ರಚಾರದ ಪ್ರಚೋದನೆ ಇಲ್ಲದೆ ಕನ್ನಡ ಕಟ್ಟುವ ಕೆಲಸ ಜಿ.ಎಂ.ಗುರುಸಿದ್ಧಶಾಸ್ತ್ರಿಗಳು ಮಾಡಿದರು.

ಹೀಗೆ ಇವರು ಶಿಕ್ಷಕ ವೃತ್ತಿ, ಪತ್ರಿಕಾ ಸೇವೆಯನ್ನು ಗಮನಿಸಿದ ಚಿಕ್ಕಪ್ಪ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಶಂಕರ ಸಂಸ್ಕೃತ ಕಾಲೇಜಿನ ಉಪನ್ಯಾಸಕರು, ಅಮರವಾಣಿಯ ಸಂಸ್ಥಾಪಕ, ಸಂಪಾದಕರೂ ಆಗಿದ್ದ ಬಿ.ಎಂ. ವೀರೇಶ ಶಾಸ್ತ್ರಿಗಳು ಮಸ್ಕಿಯ ಬಸವರಾಜ ಶಾಸ್ತ್ರಿಗಳು, ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಆಸಕ್ತಿ, ಅಭಿರುಚಿ, ಕುಶಲಮತಿ, ಚಾಣಾಕ್ಷತನಕ್ಕೆ, ಕಾರ್ಯವೈಖರಿಗೆ ಬೆರಗಾಗಿ ಬೆರಳು ಕಚ್ಚಿಕೊಳ್ಳ ತೊಡಗಿದರು.

ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ತಮ್ಮ ಹಿರಿಯ ಮಗಳು ಲಿಂಗಮ್ಮ ಮದುವೆ ವಯಸ್ಸಿಗೆ ಬಂದಿದ್ದಳು ಅವಳಿಗೊಂದು ಯೋಗ್ಯ ಮನೆತನದ ವರನನ್ನು ಹುಡುಕಿ ಮದುವೆ ಮಾಡಲು ಓಡಾಡ ತೊಡಗಿದರು ಹಾಗೆಯೇ ಅಣ್ಣನ ಮಗ ಜಿ.ಎಂ.ಗುರುಸಿದ್ಧಶಾಸ್ತ್ರಿಗಳು ತುಂಬು ಪ್ರಾಯದ ಹುಡುಗ ಇವನಿಗೂ ಕನ್ಯಾ ನೋಡಿ ಇಬ್ಬರ ಮದುವೆ ಒಂದೇ ಹಂದರದಲ್ಲಿ ಮಾಡಿ ಮುಗಿಸಲು ಗಂಡ–ಹೆಂಡತಿ ಪ್ರಯತ್ನಿಸಿದರು. ಒಳ್ಳೆಯ ಸಭ್ಯ ಸುಸಂಸ್ಕೃತ ಮನೆತನ ಶಿಕ್ಷಣ, ಸಾಹಿತ್ಯದಲ್ಲಿ ಹೆಸರು ಮಾಡಿದವರು ಸಮಾಜ ಸೇವೆ ಧಾರ್ಮಿಕ ಚಟುವಟಿಕೆಗಳಲ್ಲಿ ನಿರತರಾದ ಗೋಡಿಹಾಳ ಮಠಕ್ಕೆ, ನಾಯ್ಕಲ್ಲ ಸ್ಥಾವರ ಮಠಕ್ಕೆ ಹೆಣ್ಣು ಕೊಡಲು, ಹೆಣ್ಣು ತೆಗೆದುಕೊಳ್ಳಲು ಅಪೇಕ್ಷಿಸುವ ಆ ಕಾಲದಲ್ಲಿ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು

ತಮ್ಮ ಮಗಳು ಲಿಂಗಮ್ಮನನ್ನು ಚಿತ್ತಾಪುರ ತಾಲೂಕಿನ ಮರ್ತೂರ ಗ್ರಾಮದ ಗುರುಶಾಂತ ಶರ್ಮಾ ಎಂಬ ವರ ಶ್ರೇಷ್ಠನಿಗೆ, ಯಾದಗಿರಿ ತಾಲೂಕಿನ ಗಾಜರ ಕೋಟ್ರ ಗ್ರಾಮದ ಸಿದ್ಧರಾಮಯ್ಯ ಮುತ್ತಗಿ ಮತ ಅವರ ಎರಡನೆ ಮಗಳು ಸೌ: ಸೋಮಲಿಂಗಮ್ಮ ಎಂಬ ಕನ್ಯಾರತ್ನವನ್ನು ಜಿ.ಎಂ.ಗುರುಸಿದ್ಧಶಾಸ್ತ್ರಿಗಳಿಗೂ ಶೋಧಿಸಿ, ನಿಶ್ಚಯಿಸಿ ನಾಯ್ಕಲ್ಲ ಸ್ಥಾವರಮಠದಲ್ಲಿ ಹಾದಿಗೆ ಹಂದರ ಹಾಕಿ, ಬೀದಿಗೆ ಚಳಿ ಹೊಡೆದು ಮದುವೆ ಮಾಡಲು ನಿರ್ಧರಿಸಿದರು.

ಶಿಕ್ಷಕ ವೃತ್ತಿ ಮನೆಯ ಕೆಲಸ ಮುದ್ರಣ ಕಾರ್ಯದಲ್ಲಿ ತುಂಬ ಆಸಕ್ತಿ ವಹಿಸಿ ಬಿಡಿವಿಲ್ಲದ ಕೆಲಸದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಗುರುಸಿದ್ಧಶಾಸ್ತ್ರಿಗಳಿಗೆ ಶಿಕ್ಷಕ ವೃತ್ತಿಗೆ ರಾಜಿನಾಮೆ ಕೊಡಿಸಿ ಮುದ್ರಣಾಲಯದ ಕೆಲಸದಲ್ಲಿ ತೊಡಗಿಸಬೇಕೆಂದು ಜಿ.ಎಂ.ಬಸವರಾಜಯ್ಯ ಶಾಸ್ತ್ರಿ ಬಿ.ಎಂ.ವೀರೇಶ ಶಾಸ್ತ್ರಿ ಹಾಗೆ ಮಸ್ಕಿ ಬಸವರಾಜ ಶಾಸ್ತ್ರಿ ಒತ್ತಾಯ ಮಾಡತೊಡಗಿದರು ಆಗ ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಮುದ್ರಾರಾಕ್ಷಸನ ಹಾವಳಿ ತಡೆಗಟ್ಟುವ ಗಟ್ಟಿ ಮನುಷ್ಯನೆಂದರೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳೊಬ್ಬರೇ ಇಂತಹ ಸಮರ್ಥ ಮನುಷ್ಯನನ್ನು ಮುದ್ರಣಾಲಯಕ್ಕೆ ಬರಮಾಡಿಕೊಂಡು ಸಂಪೂರ್ಣ ಕೆಲಸ ನಿರ್ವಹಿಸಿಕೊಂಡು ಹೋಗಲು ಜಿ.ಎಂ.ಬಸವರಾಜಯ್ಯ ಶಾಸ್ತ್ರಿ ಪ್ರಯತ್ನಿಸ ತೊಡಗಿದರು. ಉತ್ತಮ ಕೆಲಸಗಾರರು ಇಲ್ಲದ್ದಕ್ಕೆ ಶ್ರೀಶಂಕರಾನಂದ ಮುದ್ರಣಾಲಯ ಸಾಲದ ಶೂಲದಲ್ಲಿ ಒಂದೇ ಸಮನೇ ನರಳಾಡುತ್ತಿತ್ತು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಸ್ವತಂತ್ರನಾಗಿ ಸೇವೆ ಸಲ್ಲಿಸುತ್ತ ಹಾಯಾಗಿ ಕಾಲ ಕಳೆಯುತ್ತಿದ್ದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಪವಿತ್ರವಾದ ಶಕ್ಷಕ ವೃತ್ತಿ ಬಿಡಲು ಮನಸ್ಸು ಮಾಡಲಿಲ್ಲ. ನಾಯ್ಕಲ್ಲ ಸ್ಥಾವರ ಮಠದ ಹೊಣೆ ಗೋಡಿಹಾಳ ಮಠದ ಜವಾಬ್ದಾರಿ, ಹೊತ್ತ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ನೌಕರಿ ಬಿಟ್ಟರೆ ಎಲ್ಲರೂ ಕಷ್ಟದಲ್ಲಿ ಸಿಕ್ಕಿಕೊಳ್ಳತ್ತೇವೆ. ಶಿಕ್ಷಕ ವೃತ್ತಿಯಲ್ಲಿದ್ದೇ ಎಲ್ಲ ಕಡೆಗೂ ನೋಡಿಕೊಂಡು ಹೋಗುವ ಮನಸ್ಸು ಮಾಡಿದರು. ಯಾರು ಹೇಳಿದರೂ ತಮ್ಮ ಕೈಯ್ಯಲ್ಲಿದ್ದ ಪವಿತ್ರವಾದಶಿಕ್ಷಣ ವೃತ್ತಿಯನ್ನು ಬಿಟ್ಟು ಮುದ್ರಣಾಲಯದ ಕೆಲಸಕ್ಕೆ ಅಣಿಯಾಗದ ಜಿ.ಎಂ. ಗುರುಸಿದ್ಧ ಶಾಸ್ತ್ರಿಗಳನ್ನು ಯಾದಗಿರಿ ರಾಮಗಿರಿ ಕಟ್ಟಿಮನಿ ಹಿರೇಮಠದ ಶ್ರೀಗಳಾದ ಷ ಬ್ರ ಶ್ರೀ ಶಿವಶಂಕರ ಸ್ವಾಮಿಗಳು ಮಧ್ಯಸ್ತಿಕೆ ವಹಿಸಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಬರ ಮಾಡಿಕೊಂಡು "ಇಂದು ಶಿಕ್ಷಕರಾಗಿ ಸೇವೆ ಸಲ್ಲಿಸುವ ನೀನು ನಾಳೆ ತಾಲೂಕ ಶಿಕ್ಷಣಾಧಿಕಾರಿಗಳಾಗಿ ಸೇವೆಸಲ್ಲಿಸಬಹುದು. ಆಂಧ್ರಪ್ರದೇಶದ ಗಡಿಭಾಗದ ಕನ್ನಡ ಭಾಷೆ ಗಟ್ಟಿಗೊಳ್ಳಬಹುದು. ಅದಕ್ಕೂ ಹೆಚ್ಚಿನ ಕೆಲಸ ನಿನ್ನಿಂದ ಆಗಬೇಕಾಗಿದೆ. ನೀನು ಈ ಶಿಕ್ಷಕ ವೃತ್ತಿಯನ್ನು ಬಿಟ್ಟು ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಕೆಲಸ ಮಾಡಬೇಕೆಂದು ಗಟ್ಟಿಯಾಗಿ ರಾಮಗಿರಿ ಹಿರೇಮಠ ಶ್ರೀಗಳು ಹೇಳಿದರು. ಮಿಂಚಿನ ವೇಗದಲ್ಲಿ ಹೊರಬಂದ

ಶ್ರೀಗಳ ಮಾತು ಮೀರಬಾರದೆಂದು ಪವಿತ್ರವಾದ ಶಿಕ್ಷಕ ವೃತ್ತಿಗೆ ಶರಣು ಹೊಡೆದು ಶ್ರೀ ಶಂಕರಾನಂದ ಮುದ್ರಣಾಲಯದ ಹೊಣೆ ಹೊತ್ತು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಕಾರ್ಯ ನಿರ್ವಹಿಸ ತೊಡಗಿದರು.

ಒಂದು ದಿವಸ ಜಿ.ಎಂ ಬಸವರಾಜಯ್ಯ ಶಾಸ್ತ್ರಿಗಳು ಗುರುಸಿದ್ಧ ಶಾಸ್ತ್ರಿಗಳನ್ನು ಕರೆದು ಅತ್ಯಂತ ಪ್ರೀತಿಯಿಂದ ತಮ್ಮ ಪಕ್ಕಕ್ಕೆ ಕೂಡ್ರಿಸಿಕೊಂಡು "ಮಗು, ನನಗೂ ವಯಸ್ಸಾಗುತ್ತಾ ಬಂದಿತು. ಯಾವಾಗ ಶಿವನ ಕರೆ ಬರುತ್ತದೆಯೊ ಗೊತ್ತಿಲ್ಲ. "ಜಾತಸ್ಯ ಮರಣಂ ಧ್ರುವಂ" ಎಂಬ ಉಕ್ತಿಯಂತೆ ಹುಟ್ಟಿದವರು ಸಾಯಲೇ ಬೇಕು. ನಾನು ಹೋದನಂತರ ನೀನು ನಿನ್ನ ಚಿಕ್ಕಮ್ಮನನ್ನು ತಂಗಿಯರನ್ನು, ತಮ್ಮಂದಿರನ್ನು ಚೆನ್ನಾಗಿ ನೋಡಿಕೋ ನೀನು ನಮ್ಮ ವಂಶ ಜ್ಯೋತಿ ಬಾಳಕುಡಿ ನಿನಗೆ ದೇವರು ಒಳ್ಳೆಯದು ಮಾಡಲಿ" ಎಂದು ಹೃದಯ ತುಂಬಿ ಹಾರೈಸಿ ಗುರುಸಿದ್ಧಶಾಸ್ತ್ರಿಗಳನ್ನು ಅಪ್ಪಿಕೊಂಡು ಕಣ್ಣೀರು ತಂದರು.

ಆಗ ಗುರುಸಿದ್ಧಶಾಸ್ತ್ರಿಗಳು "ದೇವರ ಕೃಪೆ, ನಿಮ್ಮ ಆಶೀರ್ವಾ ಯಾವಾಗಲೂ ನನ್ನ ಮೇಲೆ ಇರಲಿ ನಾನು ನಿಮ್ಮ ಇಚ್ಛೆಯಂತೆ ನಡೆದುಕೊಳ್ಳುತ್ತೇನೆ." ಎಂದು ಭಕ್ತಿ ಪೂರ್ವಕ ನಮಿಸಿ ತಮ್ಮ ಮೈಮೇಲೆ ಇದ್ದ ವಸ್ತ್ರದಿಂದ ಚಿಕ್ಕಪ್ಪನ ಕಣ್ಣಿರು ಒರೆಸಿ ತಾವು ಧೈರ್ಯ ಕಳೆದುಕೊಳ್ಳಬಾರದು ಎಂದು ಹೇಳಿ ಸಮಾಧಾನ ಪಡಿಸಿದರು.

■

## ಚುರುಕುಗೊಂಡ ಮುದ್ರಣಾಲಯದ ಕೆಲಸ

ವಿದ್ಯೆ, ವಿನಯ, ಕೌಶಲ್ಯ, ಪಾಂಡಿತ್ಯ, ಅನುಭವ, ಅಭಿರುಚಿ, ಆಸಕ್ತಿ, ಸಂಯಮ ಜೀವಿಯಾಗಿದ್ದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಶ್ರೀ ಶಂಕರಾನಂದ ಮುದ್ರಣಾಲಯ ಹೊಣೆ ಹೊತ್ತು ಕಾರ್ಯ ನಿರತರಾಗಲು ಮುದ್ರಣಾಲಯದಲ್ಲಿ ಸರಸ್ವತಿ, ಲಕ್ಷ್ಮಿ, ಪಾರ್ವತಿ ಮೂವರು ಮುಕ್ತ ಮನಸ್ಸಿನಿಂದ ಆಗಮಿಸಿದಂತೆ ಭಾಸವಾಯಿತು. ವಿದ್ಯೆಗೆ ಸರಸ್ವತಿ, ಸಂಪತ್ತಿಗೆ, ಲಕ್ಷ್ಮಿ ವೈಭವಕ್ಕೆ ಪಾರ್ವತಿ, ಮೂವರು ಬಂದರು. ಆಗ ಶ್ರೀ ಶಂಕರಾನಂದ ಪ್ರೆಸ್ಸಿನ ರೂಪು-ರೇಷೆಗಳೇ ಬೇರೆಯಾದವು.

ಆ ಕಾಲದಲ್ಲಿ ಯಾದಗಿರಿಯಲ್ಲಿದ್ದ ಶ್ರೀ ಶಂಕರಾನಂದ ಪ್ರೆಸ್ಸಿಗೆ ಸೇಡಂ, ಚಿಂತೋಳಿ, ಚಿತ್ತಾಪುರ, ಶಹಾಪುರ, ಸುರಪುರ, ತಾಲೂಕುಗಳಿಂದ ಜನರು ಮುದ್ರಣದ ಕೆಲಸಕ್ಕೆ ಯಾದಗಿರಿಗೆ ಬರಬೇಕಾಗುತ್ತಿತು. ಜಿ.ಎಂ. ಗುರುಸಿದ್ಧ ಶಾಸ್ತ್ರಿಗಳು ಪ್ರೆಸ್ಸಿನ ಹೊಣೆ ಹೊತ್ತು ಕೆಲಸಕ್ಕೆ ಆಗಮಿಸಿದ ಸಂಗತಿ ಜನರಿಗೆ ತಿಳಿಯಿತು ಶಾಸ್ತ್ರಿಗಳು ಮುದ್ರಣದ ಕೆಲಸಕ್ಕೆ ಆಗಮಿಸುವ ಗ್ರಾಹಕರಿಗೆ ಒಂದು ರೂಪಾಯಿ ತುಟ್ಟಿ ಎನಿಸದಂತೆ-ತಮಗೆ ಒಂದು ರೂಪಾಯಿ ಹಾನಿಯಾಗದಂತೆ ಅಣ್ಣ ಬಸವಣ್ಣನವರು ಹೇಳಿದಂತೆ "ಅದ್ದಗಾಣಿಯ ಸೋಲ, ಅದ್ದ ಗಾಣಿಯಗೆಲ್ಲ ಜಾಣ" ನೋಡು ಎನ್ನುವಂತೆ ಗ್ರಾಹಕರ ಮನಸ್ಸು ಗೆದ್ದು ಕೆಲಸ ಮಾಡತೊಡಗಿದರು.

ಆ ಕಾಲದಲ್ಲಿ ನಡೆಯುವ ಜಾತ್ರೆ, ಉತ್ಸವ, ಉರುಸುಗಳ ಮನವಿ ಪತ್ರ ಆಟ-ನಾಟಕಗಳ ಹೆಂಡಬಿಲ್ ಲಗ್ನ ಪತ್ರ ಇನ್ನಿತರ ಪುರಾಣ, ಕೀರ್ತನೆ, ಮಂಗಳ ಕಾರ್ಯಗಳ ಜಾಹಿರಾತು ಜೊತೆಗೆ ಅಂಗಡಿಗಳ ಪಾವತಿ ಪುಸ್ತಕ, ಖಾತೆ-ಕೀರ್ದಿ ಶಾಲೆ ಕಾಲೇಜುಗಳ ಪ್ರವೇಶ ಪತ್ರಿಕೆ, ಹಾಜರಾತಿ ಪುಸ್ತಕ ಇತ್ಯಾದಿ ಕೆಲಸಗಳು ಶ್ರೀ ಶಂಕರಾನಂದ ಮುದ್ರಣಾಲಯಕ್ಕೆ ಸಾಲುಗಟ್ಟಿ ಬರ ತೊಡಗಿದವು. ತಮ್ಮ ಹತ್ತಿರ ಬರುತ್ತಿದ್ದ ಗ್ರಾಹಕರನ್ನು ದೇವರಂತೆ ಕಂಡು ಅತ್ಯಂತ ಪ್ರೀತಿ-ವಿಶ್ವಾಸದಿಂದ ಶಿಸ್ತಿನಿಂದ ಒಂದು ಅಕ್ಷರವೂ ತಪ್ಪಾಗದಂತೆ ಮುದ್ರಿಸ ತೊಡಗಿದರು.

ತಮ್ಮ ಮುದ್ರಣಾಲಯದಲ್ಲಿ ಪ್ರಕಟವಾಗಿ ಹೊರ ಬರುತ್ತಿದ್ದ 'ಅಮರವಾಣಿ' ಮಾಸ ಪತ್ರಿಕೆ ಹೊಸ ಹೊಸ ವಿನ್ಯಾಸದೊಂದಿಗೆ ಈ ಭಾಗದ ಕವಿ, ಸಾಹಿತಿ, ಪಂಡಿತರ ಗಮನ ಸೆಳೆಯುವಂತೆ ಮಾಡಿದರು. ಓದು ಬರಹ ಬಾರದವರೂ

ಸಹ ಪತ್ರಿಕೆ ಕೊಂಡುಕೊಂಡು ಹೋಗಬೇಕೆಂದು ಆಸೆ ಹುಟ್ಟಿಸತೊಡಗಿದರು 'ಅಮರವಾಣಿ' ಧಾರ್ಮಿಕ ಮಾಸ ಪತ್ರಿಕೆಯಿಂದ ಈ ಭಾಗದ ಸಾಕ್ಷರತೆಯ ಪ್ರಮಾಣ ತುಸು ಮೇಲಕ್ಕೆ ಬಂದಿತು. (ಕಂಪೋಜಿಟ) ಮಳೆ ಜೋಡಿಸುವವರನ್ನು, ಪುಸ್ತಕಗಳನ್ನು ಹೊಲಿದು, ಕತ್ತರಿಸುವವರನ್ನು(ಬಾಯಿಂಡಿಂಗ್) ಮುದ್ರಣದ ಕೆಲಸಕ್ಕೆ ಆಯ್ಕೆ ಮಾಡಿಕೊಂಡು ಅವರಿಗೆ ಸರಿಯಾಗಿ ತರಬೇತಿ ನೀಡಿ ಅವರಿಂದ ಕೆಲಸ ತೆಗೆದುಕೊಳ್ಳತೊಡಗಿದರು. ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಮುದ್ರಣಾಲಯದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಆಗಿನ ಕಾಲದಲ್ಲಿ ಮುದ್ರಣ ಯಂತ್ರಗಳನ್ನು ಕಾಲಿನಿಂದ ತುಳಿದು ನಡೆಸಬೇಕಾಗುತಿತ್ತು. ಯಾವ ಕೆಲಸಕ್ಕೂ ಶಾಸ್ತ್ರಿಗಳು ಅಂಜುತ್ತಿರಲಿಲ್ಲ. ಮಳೆ ಜೋಡಿಸುವುದು ಯಂತ್ರ ತುಳಿಯುವುದು(ರಸೀದಿ) ಪುಸ್ತಕಗಳನ್ನು ಗಟ್ಟಿಯಾಗಿ ಹೊಲಿಯುವುದು ಅಂಟು ಹಚ್ಚುವುದು ಸರಿಯಾದ ಪ್ರಮಾಣದಲ್ಲಿ ಕತ್ತರಿಸಿ ಸಜ್ಜುಗೊಳಿಸುವುದು ಗಂಟು ಕಟ್ಟಿ ಗಿರಾಕಿಗಳಿಗೆ ಎತ್ತಿಕೊಡುವ ಕೆಲಸವನ್ನೂ ಸಹ ಶಾಸ್ತ್ರಿಗಳು ಮಾಡುತ್ತಿದ್ದರು.

ಮುಂಜಾನೆ ೮ ಗಂಟೆಗೆ ಮುದ್ರಣಾಲಯ ಕೆಲಸ ಪ್ರಾರಂಭವಾದರೆ ರಾತ್ರಿ ೧೦ ಗಂಟೆಯವರೆಗೆ ಎಡಬಿಡದೆ ಕೆಲಸ ನಡೆಯುತಿತ್ತು. ಬಿಡುವಿಲ್ಲದ ಕೆಲಸದಿಂದ ಪ್ರೆಸ್ಸಿನ ಆದಾಯವೂ ಹೆಚ್ಚಿತು ಜಿ.ಎಂ.ಗುರುಸಿದ್ಧಶಾಸ್ತ್ರಿಗಳು ಕೈ ಬಿಗಿ ಹಿಡಿದು ಯಾದಗಿರಿಯ ಮನೆ ಖರ್ಚು ಗೋಡಿಹಾಳದ ಮನೆ ಖರ್ಚು ನೋಡಿಕೊಂಡು ಕಲವೇ ತಿಂಗಳುಗಳಲ್ಲಿ ಚಿಕ್ಕಪ್ಪ ಮಾಡಿದ ೮೦೦೦=೦೦ ಸಾವಿರ ರೂಪಾಯಿ ಸಾಲ ಹರಿದರು. ಇದರಿಂದ ಸಂತೋಷಗೊಂಡ ಚಿಕ್ಕಪ್ಪ ಬಸವರಾಜಯ್ಯ ಶಾಸ್ತ್ರಿಗಳು ನಮ್ಮ ಮಗ ಗುರುಸಿದ್ಧ ಶಾಸ್ತ್ರಿಗಳು ನಮ್ಮ ವಂಶ ಜ್ಯೋತಿ ಬಾಳ ಕುಡಿ ಎಂದು ಹರಸಿ ಹಾರೈಸಿ ಬಾಯ್ತುಂಬ ಹೊಗಳಿದರು.

ಜಿ.ಎಂ,ಬಸವರಾಜಯ್ಯ ಶಾಸ್ತ್ರಿಗಳ ಎರಡನೆಯ ಹೆಂಡತಿ ಚೆನ್ನಮ್ಮನ ಹೊಟ್ಟೆಯಿಂದ ಗಂಡು ಮಕ್ಕಳು ಆಗಿರಲಿಲ್ಲ ನಾಲ್ಕು ಜನ ಹೆಣ್ಣು ಮಕ್ಕಳೇ ಇದ್ದರು. ಗುರುಸಿದ್ಧ ಶಾಸ್ತ್ರಿಗಳು ತಮ್ಮ ಈ ತಂಗಿಯರನ್ನು ಬಹಳ ಅಕ್ಕರೆಯಿಂದ ತಾವು ಜೀವಂತ ಇರುವರೆಗೂ ನೋಡಿ ಕೊಂಡು ಬಂದರು. ಅದರಿಂದ ಈ ಇಬ್ಬರೂ ದಂಪತಿಗಳು ಗುರುಸಿದ್ಧ ಶಾಸ್ತ್ರಿಗಳೇ ತಮ್ಮ ಮಗನೆಂದು ತುಂಬ ಅಕ್ಕರೆಯಿಂದ ನೋಡಿಕೊಳ್ಳತ್ತಿದ್ದರು. ಗುರುಸಿದ್ಧ ಶಾಸ್ತ್ರಿಗಳು ತಮ್ಮ ಬಂಧು ಬಳಗದ ಜನರನ್ನು ಅಷ್ಟೇ ಪ್ರೀತಿ ಗೌರವಗಳಿಂದ ಕಂಡು ಎಲ್ಲರೊಳಗೊಂದಾಗುತ್ತಿದ್ದರು.

■

## ಬಾಳ ನೊಗಕ್ಕೆ ಹೆಗಲು ಕೊಟ್ಟರು

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಮದುವೆ ಮಮತೆಯ ಕರೆಯೋಲೆ ಅಚ್ಚ ಕನ್ನಡದಲ್ಲಿ ಅತ್ಯಂತ ಸುಂದರವಾಗಿ ಮುದ್ರಿಸಲ್ಪಟ್ಟಿತ್ತು. ಲಗ್ನ ಪತ್ರಿಕೆಯಲ್ಲಿ ಶ್ರೀ.ಷ.ಬ್ರ.. ಶಿವಶಂಕರ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಮಾಂಗಲ್ಯ ಧಾರಣ ನಡೆಯುವುದೆಂದು ಕನ್ನಡದಲ್ಲಿ ಮುದ್ರಣಗೊಂಡ ಲಗ್ನ ಪತ್ರ ಓದಿ ಗುರು ಹರ ಚರ ಮೂರ್ತಿಗಳು 'ಅಮರವಾಣಿ' ಧಾರ್ಮಿಕ ಪತ್ರಿಕೆ ಓದುವವರು, ವ್ಯಾಪಾರಿಗಳು ಶಿಷ್ಯ ವರ್ಗ, ನೆಂಟರಿಷ್ಟರು, ಬಂಧು-ಬಾಂಧವರು ಸಮಾಜದ ಧುರಿಣರು, ಪ್ರತಿಷ್ಠಿತ ವ್ಯಕ್ತಿಗಳು, ಸರಕಾರಿ ನೌಕರರು, ಸಂಸ್ಕೃತ ಕಾಲೇಜಿನ ಆಡಳಿತ ಮಂಡಳಿ , ಪ್ರಾಂಶುಪಾಲರು, ಪ್ರಾಧ್ಯಾಪಕ ಬಳಗ ವಿದ್ಯಾರ್ಥಿವೃಂದ, ಸಿಬ್ಬಂದಿಗಳಿಗಲ್ಲದೆ ನಾಯ್ಕಲ್ಲ, ಗೋಡಿಹಾಳ, ಶಹಪುರ, ಸುರಪುರ, ಎಲ್ಹೇರಿ, ಬಂಡೆಗುಂಬಳಿ, ಬೆಳೆಗೇರಿ, ಹಯ್ಯಾಳ, ನಂದೂರು, ಕಲಬುರ್ಗಿ ಮುಂತಾದ ಕಡೆಗಳಿಂದ ಅಭಿಮಾನಿಗಳ ಬಳಗ ಶಿಷ್ಯ ಕೋಟಿ ಹರಿದು ಬಂದಿತ್ತು. ಮದುವೆಯ ಮಂಟಪದಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಕುಂ.ಕುಂ.ಸೌ. ಸೋಮಲಿಂಗಮ್ಮ ವಧುವರರು ಶಿವ-ಪಾರ್ವತಿಯಂತೆ ಶೋಭಿಸುತ್ತಿದ್ದರು.

ಮದುವೆಗೆ ಆಗಮಿಸಿದ ಎಲ್ಲ ಜನರಿಗೆ, ಅತ್ಯಂತ ವಿನಯದಿಂದ ತಾವು ಎಲ್ಲರೂ ಊಟ ಮುಗಿಸಿಕೊಂಡು ಹೋಗಬೇಕೆಂದು ಎರಡೂ ಕೈ ಜೋಡಿಸಿ ತಲೆ ಬಾಗಿ ಹೇಳುವ ಮಾತನ್ನು ಕೇಳಿ ಜನರು ಸಂತೋಷಡುತ್ತಿದ್ದರು. ಎಲ್ಲ ಜನರೂ ವಧುವರರಿಗೆ ಹರಸಿ ಹಾರೈಸಿ ಮಮತೆಯ ಊಟ ಮುಗಿಸಿಕೊಂಡು ಹೋಗತೊಡಗಿದರು.

ಆಗ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಯಾದಗಿರಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಗುರುಸಿದ್ಧ ಶಾಸ್ತ್ರಿಗಳ ಧರ್ಮ ಪತ್ನಿ ಸೌ. ಸೋಮಲಿಂಗಮ್ಮ ಅತ್ತೆ-ಮಾವನರಿರುವ ಅದೇ ಮನೆಗೆ ಹಿರಿಯ ಸೊಸೆಯಾಗಿ ಬಂದು ಮನೆಯನ್ನು ತುಂಬಿಕೊಂಡರು.

ಗಾಜರ ಕೋಟ್ರಕೆಯ ಸಿದ್ಧರಾಮಯ್ಯನ ಮಗಳು ಸೋಮಲಿಂಗಮ್ಮ ಮೊದಲಸಲ ಬಂದು ಹೋಗುವಾಲೇ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಸೊಸೆಯ

ಮೈಮೇಲೆ ಹಾಕಿದ ೧೮ ತೊಲಿ ಬಂಗಾರದ ವಸ್ತುಗಳನ್ನು ಸೊಸೆಯ ಮೈಮೆಲು ಇದ್ದು, ಸೊಸೆ ತವರು ಮನೆಗೆ ಹೋಗುವಾಗ ಅವುಗಳನ್ನು ವಾಪಸ ಪಡೆದುಕೊಂಡು ತವರು ಮನೆಗೆ ಕಳಿಸಿದರು. ಇದರಿಂದ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳಿಗೂ, ಗಾಜರ ಕೋಟ್ರಕ್ಕಿಯ ಸಿದ್ಧರಾಮಯ್ಯನವರಿಗೂ ಇಬ್ಬರಲ್ಲಿಯೂ ಇರಿಸು-ಮುರಿಸು ಪ್ರಾರಂಭವಾಯಿತು.

■

# ಅಪ್ಪಾ ಬದುಕು ಬಂಗಾರವಾಗಬೇಕು

ಗೋಡಿಹಾಳ ಮಠದ ಲಿಂಗೈಕ್ಯ ಮಲ್ಲಿಕಾರ್ಜುನಯ್ಯನವರು ಹಳ್ಳಿಯಲ್ಲಿ ಕೃಷಿ ಕಾಯಕವನ್ನು ನಂಬಿಕೊಂಡು ತಮ್ಮ ಸಂಸಾರ ಸಾಗಿಸಿದ್ದರು. ಹೊಟ್ಟೆ-ಬಟ್ಟೆಗೆ ಇದ್ದರೆ ಸಾಕು ಎಂಬ ಮನೋಭಾವನೆ ಅವರದಾಗಿತ್ತು. ಇತ್ತ ಅವರ ಸಹೋದರ ಜಿ.ಎಂ.ಬಸವರಾಜಯ್ಯ ಶಾಸ್ತ್ರಿ ತಮ್ಮ ಸಂಸಾರ ನೋಡಿಕೊಂಡು ಅಲ್ಪ, ಸ್ವಲ್ಪ ಸಂಪಾದಿಸಿಕೊಂಡು ತುಸು ಉಳ್ಳವರ ಸಾಲಿನಲ್ಲಿದ್ದರು. ಅದು ಅಲ್ಲದೆ ತಮ್ಮ ಹೊಟ್ಟೆಯಿಂದ ಕೇವಲ ನಾಲ್ಕು ಜನ ಹೆಣ್ಣು ಮಕ್ಕಳೇ ಜನಿಸಿ ಬಂದದ್ದರಿಂದ ತಮ್ಮ ಅಂತಸ್ತಕ್ಕನುಸರಿಸಿ ನೆಂಟರಿಷ್ಟರು ದೊರಕಬೇಕಾದರೆ ತುಸು ಬೆಳ್ಳಿ-ಬಂಗಾರ ಬೇಕಾಗುತ್ತದೆ. ಎಂದು ದೂರದೃಷ್ಟಿ ಇಟ್ಟು ತಕ್ಕ ಮಟ್ಟಿಗೆ ಸಂಪಾದಿಸಿದ್ದರು ಹಿರಿಮಗಳು ಸೌ. ಲಿಂಗಮ್ಮನ ಮದುವೆಯೊಡನೆ ತಮ್ಮ ಅಣ್ಣನ ಮಗ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಮದುವೆ ಮಾಡುವುದನ್ನು ನಿರ್ಧರಿಸಿ ಒಂದೇ ಹಂದರದಲ್ಲಿ ಆರತಕ್ಷತೆ ಮಾಡಿ ಮುಗಿಸಿದ್ದರು. ಸೊಸೆಯ ಮನೆಗೆ ಬಂದು ಮನೆ ತುಂಬಿದಳು. ಮೊದಲಸಲ ಅತ್ತೆಯ ಮನೆಗೆ ಬಂದು ಮೊದಲ ಸಲವೇ ತವರು ಮನೆಗೆ ಹೋಗುವ ಸಮಯದಲ್ಲಿ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಸೊಸೆಯ ಮೈ ಮೇಲೆ ಲಗ್ನ ಮಂಟಪದಲ್ಲಿ ಹಾಕಿದ ೧೮ ತೊಲಿ ಬಂಗಾರದ ಒಡವೆ ಮರಳಿ ಪಡೆದುಕೊಂಡು ಸೊಸೆಯನ್ನು ತವರು ಮನೆಗೆ ಕಳಿಸಿಕೊಟ್ಟರು. ಇದರಿಂದ ಗಾಜರ ಕೋಟ್ರಕ್ಕೆಯ ಬೀಗ ಸಿದ್ಧರಾಮಯ್ಯನವರು ಸಿಡಿಮಿಡಿಗೊಂಡು ಬೀಗರ ಮೇಲೆ ಹರಿ ಹಾಯತೊಡಗಿದರು. ಮದುವೆ ಮಂಟಪದಲ್ಲಿ ತಮ್ಮ ಮಗಳ ಮೈ ಮೇಲೆ ಹಾಕಿದ ೧೮ ತೊಲಿ ಬಂಗಾರದ ಒಡವೆ ಹಾಕಿದರೆ ನಾನು ಮಗಳನ್ನು ಕಳಿಸಿ ಕೊಡುತ್ತೇನೆ ಇಲ್ಲವಾದರೆ ಕಳಿಸಿ ಕೊಡುವುದಿಲ್ಲ ಎಂದು ಹಟ ಹಿಡಿದು ಕುಳಿತುಬಿಟ್ಟರು. ಇದರಿಂದ ಎರಡೂ ಮನೆತನಗಳಲ್ಲಿ ಸಾಮರಸ್ಯ ಮೂಡುವುದರ ಬದಲು ವಿರಸ ಉಂಟಾಗಿತ್ತು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಇತ್ತ ಚಿಕ್ಕಮ್ಮ, ಚಿಕ್ಕಪ್ಪ, ಅತ್ತ ಅತ್ತೆ-ಮಾವ ಯಾರಿಗೂ ಏನೂ ಹೇಳಲಿಕ್ಕೆ ಬರದಂತಹ ಇಕ್ಕಟ್ಟಿನಲ್ಲಿ ಸಿಕ್ಕು ಯಾವುದನ್ನೂ ತಲೆಗೆ ಹಚ್ಚಿಕೊಳ್ಳದೆ ತಮ್ಮ ಕೆಲಸ ತಾವು ನೋಡಿಕೊಂಡು ಹೋಗ ತೊಡಗಿದರು

ಬಿಡುವಿಲ್ಲದ ಮುದ್ರಣಾಲಯದ ಕೆಲಸದಲ್ಲಿ ತುಸು ಬಿಡುವು ಮಾಡಿಕೊಂಡು ದಿನಾಲು ರಾಮಗಿರಿ ಕಟ್ಟಿಮನಿ ಹರೇಮಠಕ್ಕೆ ಸ್ವಾಮಿಗಳ ದರ್ಶನ ಪಡೆದುಕೊಂಡು ತುಸು ಹೊತ್ತು ಕುಳಿತು ಬೇರೆ ವಿಷಯ ಕುರಿತು ಸಮಾಲೋಚಿಸಿ ಪ್ರೆಸ್ಸಿನ ಕಡೆ ಬಂದು ತಮ್ಮ ಕೆಲಸದಲ್ಲಿ ತಾವು ಮಗ್ನ ರಾಗುತ್ತಿದ್ದರು.

ಎಲ್ಲರು ತಮ್ಮಷ್ಟಕ್ಕೆ ತಾವು ಮೌನವಾಗಿರುವುದರಿಂದ ಮನೆಯ ವಾತಾವರಣ ತನ್ನಷ್ಟಕ್ಕೆ ತಾನೆ ತಿಳಿಯಾಗುತ್ತ ಬಂದಿತು ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳ ಹೆಂಡತಿ ಚೆನ್ನಮ್ಮನವರು ಗಾಜರ ಕೋಟ್ರಕ್ಕಿಯ ತಮ್ಮ ಬೀಗ ಸಿದ್ರಾಮಯ್ಯನವರನ್ನು ಕರೆಸಿಕೊಂಡು ಸೊಸೆಯನ್ನು ಕಳಿಸಿಕೊಡಲು ಹೇಳಿದಳು "ಯಾರು ಏನೇ ಕೊಡುವುದರಿಂದಾಗಲಿ ಬೇಡಿತರುವುದರಿಂದಾಗಲಿ ನಮ್ಮ ಸಂಸಾರ ಹಿಂಗುವುದಿಲ್ಲ ಸ್ವಂತ ದುಡಿದು ಗಳಿಸಿದಾಗಲೇ ನಮ್ಮ 'ಮನೆ' 'ಮನ' ತುಂಬುತ್ತದೆ ಆಗ ನಮಗೆ ನೆಮ್ಮದಿ ಸಿಗುತ್ತದೆ"ಎಂದು ಹೇಳುತ್ತ ಸ್ವತಃ ನಿಮ್ಮ ಅಳಿಯ ಗುರುಸಿದ್ಧ ಶಾಸ್ತ್ರಿ 'ವಿದ್ಯಾರತ್ನ' 'ಜ್ಞಾನರತ್ನ' 'ಕಾಯಕರತ್ನ' 'ಸಮಯ ಪ್ರಜ್ಞಾರತ್ನ' ಇಂತಹ ಅಮೂಲ್ಯ ಆಸ್ತಿ ನಿಮ್ಮ ಅಳಿಯನೇ ಅಗಿರುವುದರಿಂದ ಬೇರೆ ಇನ್ನೊಂದು ಒಡವೆಯ ಆಸೆ ನಿಮಗೇಕೆ? ಎಂದು ಪರಿ ಪರಿಯಾಗಿ ತಿಳಿ ಹೇಳಿ ಸೊಸೆಯನ್ನು ಕಳಿಸಿ ಕೊಡಲು ಆಗ್ರ ಹಿಸಿದರು. ಅರ್ಥ ಕರಗಿದ ಬೀಗ ಸಿದ್ರಾಮಯ್ಯ ಊರಿಗೆ ಹೋಗಿ ಯಾವ ವಿಚಾರವನ್ನು ಹೋದ ಮೇಲೆ ತಿಳಿಸುತ್ತೇನೆ ಎಂದು ಗಾಜರ ಕೋಟ್ರಕ್ಕೆ ತಮ್ಮ ಊರಿಗೆ ಮರಳಿ ಬಂದರು.

ಯಾದಗಿರಿಯ ಗ್ರಾಮದಿಂದ ಬರುತ್ತಲೇ ಎಲ್ಲರೂ "ಏನಾಯಿತು ಎನ್ನುವ ಆತುರದ ದೃಷ್ಟಿ, ಮಾತುಗಳ ಮಧ್ಯದಲ್ಲಿ ಮನೆಯ ಯಜಮಾನ ಸಿದ್ರಾಮಯ್ಯನವರು ಮನೆಗೆ ಹೋಗಿ ಸೋಮಲಿಂಗಮನಿಗೆ ಒಂದು ಮಾತು ಕೇಳಿ ಆಮೇಲೆ ನನ್ನ ಮಾತು ಹೇಳುತ್ತೇನೆ ಎಂದು ಹೇಳಿ ಬಂದಿದ್ದೇನೆ" ಎಂದು ಹೇಳಿದರು.ಅಪ್ಪ ಸಿದ್ರಾಮಯ್ಯನವರಿಗೆ ಆಗ ಸೋಮಲಿಂಗಮ್ಮ "ಅಪ್ಪಾ ನಾನು ಕುಟ್ಟುವಾಗ–ಬೀಸುವಾಗ ಅನೇಕ ಹಾಡುಗಳನ್ನು ಹಾಡುತ್ತಲಿದ್ದೆ ಅದರಲ್ಲಿ ಒಂದು ಹಾಡು ಬದುಕಿಗೆ ತೀರ ಹತ್ತಿರವಾದ ಹಾಡು".ಆ ಹಾಡುನ್ನು ನಾನು ಬಹಳ ಮೆಚ್ಚಿಕೊಂಡಿದ್ದೇನೆ.

"ಕೂಲಿ ಮಾಡಿದರೇನು ಕೋರಿ ಹೊತ್ತರೇನು
ನಮಗ ನಮ ರಾಯ ಬಡವೇನು?–ಮನೆಯಾಗ
ಬಂಗಾರದ ಮಾಲ ಇದ್ದಾಂಗ"

ಎಂದು ದನಿದಗೆದು ಹಾಡಿದಳು, ಎಲ್ಲರ ಮನಸ್ಸು ಕರಗಿತು, ಅರಗಿನಿಂದ ತುಂಬಿದ ಕರಗಿ ಹೋಗುವ ಬಂಗಾರಕ್ಕಿಂತ ಬಂಗಾರದಂತಹ ಮನಸ್ಸುಳ್ಳ ನಿಮ್ಮ ಅಳಿಯನೇ ಮನೆಯಲ್ಲಿ ಇರುವಾಗ ಇನ್ನು ಬೇರೆ ಬಂಗಾರ ನಮಗೇಕೆ ಬೇಕು. ನಿಜವಾಗಿ ನನ್ನ ಗಂಡ ಮನೆಯಲ್ಲಿ "ಬಂಗಾರದ ಗಟ್ಟಿ" ಇದ್ದಂತೆ ಇದ್ದಾರೆ. ನಾವು ಇಬ್ಬರು ಒಂದಾಗಿ ದುಡಿದರೆ ನಮ್ಮ ಬದುಕು ಬಂಗಾರವಾಗುತ್ತದೆ ಮನೆಯಲ್ಲಿ ಅತ್ತೆ, ಮಾವ, ಮೈದುನ, ನಾದಿನಿಯರೊಡನೆ ಪರಸ್ಪರ ಪ್ರೀತಿ, ಹೊಂದಾಣಿಕೆ, 'ಒಮ್ಮನಸ್ಸಿನಿಂದ' ಬಾಳುವುದರೊಡನೆ "ನಮ್ಮ ಬದುಕು ಬಂಗಾರ" ವಾಗಬೇಕು ಅಂತಹ ಸಾರ್ಥಕ ಬದುಕಿನ ರೂವಾರಿಯಾಗಲು ನಾನು ಗಂಡನ ಮನೆಗೆ ಹೋಗುತ್ತೇನೆ" ಎಂದು ಸೌ. ಸೋಮಲಿಂಗಮ್ಮ ತನ್ನ ಮನದ ಇಂಗಿತ ವ್ಯಕ್ತಪಡಿಸಿದಳು.

ಮರುದಿವಸ ಸೋಮಲಿಂಗಮ್ಮ ತಮ್ಮ ತಾಯಿ-ತಂದೆಯ ಸಂಗಡ ಯಾದಗಿರಿಗೆ ಬಂದರು. ಸೊಸೆಯ ದಾರಿ ಕಾಯುತ್ತಲಿದ್ದ ಅತ್ತೆ ಚೆನ್ನಮ್ಮ ಮಾವ ಜಿ.ಎಂ.ಬಸವರಾಜಯ್ಯ ಶಾಸ್ತ್ರಿ ಎಲ್ಲ ಮಕ್ಕಳು ಸೋಮಲಿಂಗಮ್ಮ ನನ್ನು ಅಕ್ಕರೆಯಿಂದ ಬರಮಾಡಿಕೊಂಡು ಕೈ ಕಾಲಿಗೆ ನೀರು ಕೊಟ್ಟು ಹೃದಯ ತುಂಬಿ ಸ್ವಾಗತಿಸಿ ದಾರಿಯ ದಣಿವು ಇಳಿಸಿ ಕೊಂಡರು.

ಅಂದು ಸಂಜೆ ಸಿದ್ಧಪಡಿಸಿದ ಹೆಸರು ಬೇಳೆ ಪಾಯಸ ಸಾವಿಗೆ ಬಸಿದು ಚಿನ್ನಿ ಸಕ್ಕರಿ ಆಕಳ ತುಪ್ಪ ಕಾಸಿ ಸೋನಾಮಸೂರಿ ಅಕ್ಕಿ ಅನ್ನ ತಿಳಿಸಾರಿನೊಂದಿಗೆ ಎಲ್ಲರೂ ಊಟ ಮಾಡಿ ತಮ್ಮ ಮನದ ಸಂತಸವನ್ನು ಹಂಚಿಕೊಂಡರು. ಅಂದಿನ ಆ ಸಂತಸ ಸಮರಸ ಬದುಕಿಗೆ ನಾಂದಿ ಹಾಡಿತು. ಮನೆಯಲ್ಲಿ ಮೂಡಿದ ಹೊಸ ವಾತಾವರಣ ನೋಡಿ ಚೆನ್ನಮ್ಮ-ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಅಷ್ಟೇ ಹರ್ಷಾನಂದ ಪಟ್ಟರು. ಸಿದ್ರಾಮಯ್ಯನವರು ಧರ್ಮ ಪತ್ನಿಯೊಡನೆ ಒಂದೆರಡು ದಿನ ಇದ್ದು ಗಾಜರ ಕೋಟ್ರಕ್ಕೆ ಬಂದರು.

■

# ಹೊಣೆ ಗಾರಿಕೆ ಹೆಚ್ಚಿತು ; ವ್ಯಕ್ತಿತ್ವ ಅರಳಿತು

ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಪಡೆದು ಮುದ್ರಣ ಕಲೆಯನ್ನು ಕರಗತ ಮಾಡಿಕೊಂಡು ಕಾರ್ಯನಿರತರಾದ ಶಾಸ್ತ್ರಿಗಳು ವೇದ. ಆಗಮ; ಕಾವ್ಯ-ಪುರಾಣ ಅಭ್ಯಾಸ ನಿಲ್ಲಿಸಿದವರಲ್ಲ ವ್ಯಾಕರಣ, ಜ್ಯೋತಿಷ್ಯ, ವೈದ್ಯಕೀಯದೊಡನೆ ವೈಧಿಕತತ್ವವನ್ನು ಅಳವಡಿಸಿಕೊಂಡು ಧಾರ್ಮಿಕ ಪುರುಷರ ಸ್ಥಾನ-ಮಾನ ಪಡೆದುಕೊಂಡರು.

ಯಾದಗಿರಿಯ ರಾಮಗಿರಿ ಕಟ್ಟಿಮನಿ ಹರೇಮಠದ ಶ್ರೀಗಳು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ತುಂಬ ಪ್ರೀತಿಯಿಂದ ಕಂಡು ಹರಸಿ ಹಾರೈಸುತ್ತಿದ್ದರು. "ಅವರವಾಣಿ" ಕನ್ನಡ ಧಾರ್ಮಿಕ ಮಾಸ ಪತ್ರಿಕೆಯನ್ನು ಮುದ್ರಣ ದೋಷ ಉಳಿಯದಂತೆ ಆಕರ್ಷಕವಾಗಿ ಮುದ್ರಿಸಿ ಗ್ರಾಹಕರಿಗೆ ಕಳಿಸಿಕೊಟ್ಟು ಪತ್ರಿಕೆಯನ್ನು ಜನಪ್ರಿಯ ಗೊಳಿಸಿದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಸಾಹಸ, ಕರ್ತವ್ಯ, ನಿಷ್ಠೆ, ಧಾರ್ಮಿಕ ಪ್ರವೃತ್ತಿ ಕನ್ನಡ ಭಾಷೆಯ ಮೇಲೆ ಇದ್ದ ಅಭಿಮಾನಕಂಡು ಹಿರಿಯರಾದ ಬಿ.ಎಂ.ವೀರೇಶ ಶಾಸ್ತ್ರಿಗಳು, ಮಸ್ಕಿ ಬಸವರಾಜ ಶಾಸ್ತ್ರಿಗಳು ನಮ್ಮ ಜಿ.ಎಂ. ಗುರುಸಿದ್ಧ ಶಾಸ್ತ್ರಿಗಳು ಸಮಾಜದ ದೊಡ್ಡ ಆಸ್ತಿಯಾಗಿ ಪರಿಣಮಿಸುತ್ತಾರೆಂದು ಬಾಯ್ತುಂಬ ಬಣಸುತ್ತಿದ್ದರು.

ಯಾದಗಿರಿ-ಗೋಡಿಹಾಳ ಮನೆತನಗಳ ಹೊಣೆಗಾರಿಕೆ ಮುದ್ರಣಾಲಯದ ಕೆಲಸ ನೋಡಿಕೊಂಡು ಮುನ್ನಡೆದ ಶಾಸ್ತ್ರಿಗಳ ಸಹನ ಶೀಲತೆ, ತಾಳ್ಮೆ, ಜಾಣ್ಮೆ, ಕಂಡು ಚಿಕ್ಕಪ್ಪ ಬಸವರಾಜಯ್ಯ ಶಾಸ್ತ್ರಿಗಳಿಗೆ, ಹಾಲು ಕುಡಿದಷ್ಟೇ ಹರ್ಷವಾಗಿತ್ತು.

ತಮ್ಮ ಸಣ್ಣ ವಯ್ಯಸ್ಸಿನಲ್ಲಿ ಎಲ್ಲರನ್ನು ನಂಬಿಕೊಂಡು ಯಾರ ಮನಸ್ಸನ್ನು ನೋಯಿಸದೆ ಎಲ್ಲರೊಳಗೊಂದಾಗಿ ನಡೆದುಕೊಂಡು ಬರುತ್ತಿದ್ದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಪಾರದರ್ಶಕ ಗುಣವನ್ನು ಕಂಡು ತುಂಬ ಸಂತಸ ಪಡುತ್ತಿದ್ದರು.

ತಾವು ಇಷ್ಟು ಬೇಗ ಈ ಲೋಕ ಬಿಟ್ಟು ಹೋಗುತ್ತೇನೆಂದು ಕನಸು ಕಂಡಿದ್ದರೊ ಅಥವಾ ಯಾರಾದರು ಬಂದು ಭವಿಷ್ಯ ಹೇಳಿದ್ದರೋ ಏನು, ಎಂತು ಒಂದು ತಿಳಿಯದೆ ಮನಸ್ಸಿನಲ್ಲಿ ತಾವೂ ಏನೇನೋ ಎಣಿಕೆ ಹಾಕುತ್ತಿರುವಾಗ ಕೆಲವು

ದಿವಸಗಳ ನಂತರ ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಹೊರಗಿನಿಂದ ಬರುತ್ತಲೇ ಯಾಕೊ ಸುಸ್ತು, ಎಂದು ಆರಾಮಾಗಿ ಮಲಗಿಕೊಂಡರು. ಒಂದೆರಡು ದಿನ ಔಷಧೋಪಚಾರವೂ ನಡೆಯಿತು. ತಮ್ಮ ಮುಂದಿನ ಜೀವನದ ಹೊಣೆ ಹೊತ್ತ ಜಿ.ಎಂ. ಗುರುಸಿದ್ಧ ಶಾಸ್ತ್ರಿಗಳನ್ನು ನೆನೆಯುತ್ತ ಶಿವ ಶಿವ ಎಂದು ಜಿ.ಎಂ.ಬಸವರಾಜಯ್ಯ ಶಾಸ್ತ್ರಿಗಳು ಇಹ ಲೋಕ ಯಾತ್ರೆ ಮುಗಿಸಿದರು.

ಚಿಕ್ಕಪ್ಪ ಲಿಂಗೈಕ್ಯರಾದ ಸುದ್ದಿ ಕೇಳುತ್ತಲೇ ತಮ್ಮ ಮನೆತನದ ಒಂದು ಅಧ್ಯಾಯ ಮುಗಿಯಿತೆಂದು ನಿಟ್ಟುಸಿರು ಬಿಟ್ಟರು ಗುರುಸಿದ್ಧ ಶಾಸ್ತ್ರಿಗಳು. ಚಿಕ್ಕಮ್ಮ ಚೆನ್ನಮ್ಮನಿಗೆ ನಾಲ್ವರು ತಂಗಿಯರಿಗೆ ಧೈರ್ಯ ಹೇಳಿ ಯಾದಗಿರಿ-ಗೋಡಿಹಾಳ ಮನೆತನಗಳ ಮಧ್ಯ ಭದ್ರ ಸೇತುವಾಗಿ ಕಾರ್ಯ ನಿರ್ವಹಿಸ ತೊಡಗಿದರು. ಶಾಸ್ತ್ರ, ಪುರಾಣ, ಕಾವ್ಯ, ಕೀರ್ತನ ಎಷ್ಟು ಪವಿತ್ರವೋ ಅಷ್ಟೇ ಪವಿತ್ರ ಮನೆಯ ಹೊಣೆಗಾರಿಕೆ ಎಂದು ತಂಗಿ ಅನ್ನಪೂರ್ಣಾಳಿಗೆ 'ವರ' ಸಹೋದರ ಚೆನ್ನಬಸವಯ್ಯನಿಗೆ 'ಕನ್ಯಾ' ನೋಡಲು ಪ್ರಾರಂಭಿಸಿದರು.

ಹಿರಿಯ ತಂಗಿ ತಮ್ಮನಿಗೆ ಒಳ್ಳೆಯ ವರ, ಕನ್ಯಾ ಹುಡುಕಿ ಅತ್ಯಂತ ಸರಳ ಸುಂದರವಾಗಿ ಯಾವ ತಂಟೆ ತಕರಾರುಗಳಿಲ್ಲದೆ ಮದುವೆಯ ಶಾಸ್ತ್ರ ಮುಗಿಸಿ ಗುರುಸಿದ್ಧ ಶಾಸ್ತ್ರಿಗಳು ಎಲ್ಲರ ಕಡೆಯಿಂದಲೂ ಹೌದೆನಿಸಿಕೊಂಡರು.

ಈ ಜೋಡಿಗಳ ಲಗ್ನ ಪತ್ರ ಶ್ರೀಮತಿ ಚೆನ್ನಮ್ಮನವರ ಪ್ರೇಕ್ಷತ್ವದಲ್ಲಿಯೇ ಮುದ್ರಿತವಾಗಿದ್ದು ಜನಾಕರ್ಷಣೆ ಪಡೆಯಿತು. ಈ ಸಂದರ್ಭದಲ್ಲಿ ಗುರುಸಿದ್ಧ ಶಾಸ್ತ್ರಿಗಳ ಚಾಣಾಕ್ಷತನವನ್ನು ನೋಡಿ ಶಾಸ್ತ್ರಿಗಳನ್ನು ಹೊಗಳಿದ್ದೇ ಹೊಗಳಿದ್ದು

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಹಡೆದ ತಾಯಿ ನೀಲಮ್ಮನವರಾದರೆ ಪಡೆದ ತಾಯಿ ಚೆನ್ನಮ್ಮನವರು. ಶಾಸ್ತ್ರಿಗಳು ಚಿಕ್ಕಮ್ಮ ಚೆನ್ನಮ್ಮನವರ ಒಂದು ಮಾತು ಮೀರುತ್ತಿರಲಿಲ್ಲ. ಅವರು ಹಾಕಿದ ಗೆರೆ ದಾಟುತ್ತಿರಲಿಲ್ಲ, ಗುರುಸಿದ್ಧ ಶಾಸ್ತ್ರಿಯ ತಾವು ಬದುಕಿರುವವರೆಗೂ ತಮ್ಮ ಚಿಕ್ಕಪ್ಪನವರ ಇಚ್ಛೆಯಂತೆ ತಾವು ಅವರಿಗೆ ಕೊಟ್ಟ ಮಾತಿನಂತೆ ನಡೆಸು ಕೊಂಡುಬಂದರು. ಪೂಜ್ಯ ನೀಲಮ್ಮ ತಾಯಿಯವರು ಮಗು ಜಿ.ಎಂ. ಗುರುಸಿದ್ಧಶಾಸ್ತ್ರಿಗಳ ಬೆನ್ನೆಲುಬಾಗಿ ನಿಂತು, ಅವನ ಮನೆಗೆಲಸ, ಸಾಮಾಜಿಕ ಚಟುವಟಿಕೆಳಿಗೆ ಸ್ಫೂರ್ತಿ ನೀಡುತ್ತ ಸಂತಸ ಪಡುತಿದ್ದರು. ತಾಯಿ ನೀಲಮ್ಮನವರು ಮೌನ ಮುರಿದು ಬಂದು ಮಾತಾಡಿದರೆ ಕಡಿಮೆ ಎರಡು ಮಾತಾಡಿದರೆ ಹೆಚ್ಚು ಅನ್ನುವ ಮಾತಿನ ತೂಕದಲ್ಲಿ ಮನೆಗೆಲಸ ಮಾಡುತ್ತ ಮನೆಯಲ್ಲಿ ನೆಮ್ಮದಿಯ ವಾತಾವರಣ ನಿರ್ಮಾಣ ಮಾಡುತ್ತ ಬಂದರು.

■

# ಮುದ್ರಣ ಕೆಲಸದಲ್ಲಿ ನಾವಿನ್ಯತೆ; ವ್ಯಕ್ತಿತ್ವ ವಿಕಾಸ

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮ್ಮ ಪ್ರಿಂಟಿಂಗ್ ಪ್ರೆಸ್ಸಿಗೆ ಕೆಲಸ ಕೊಡಿರೆಂದು ಯಾವ ಸರಕಾರಿ ಕಛೇರಿಗಳಿಗೂ ಅಲೆದಾಡಲಿಲ್ಲ ದೊಡ್ಡ ದೊಡ್ಡ ಅಡತೆಗಳಿಗಾಗಲಿ, ಇನ್ನಿತರ ಅಂಗಡಿಗಳ ಹತ್ತಿರ ಸುಳಿದಾಡಲಿಲ್ಲ. ಇಂದು ಪ್ರೆಸ್ಸಿನಲ್ಲಿ ಕೆಲಸವೇ ಇಲ್ಲ ಹೇಗೆ ಮಾಡುವುದು ಎಂದು ಗೊಣಗಲಿಲ್ಲ. ಯಾದಗಿರಿ ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಭಾಷಾ ಪಂಡಿತರು, ಕಾವ್ಯತೀರ್ಥ ಪದವೀದರರು ಆದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಅತ್ಯಂತ ಸುಂದರವಾಗಿ ಒಂದು ಅಕ್ಷರವೂ ತಪ್ಪಾಗದಂತೆ ಬಿಳಿಯ ಹಾಳೆಯಲ್ಲಿ ಅಚ್ಚು ಕಟ್ಟಾಗಿ ಮುದ್ರಣ ಮಾಡಿಕೊಡುತ್ತಾರೆಂಬ ವಾರ್ತೆ ಕೇಳಿದ ಎಲ್ಲ ಜನರೂ ಶ್ರೀ ಶಂಕರಾನಂದ ಮುದ್ರಣಾಲಯಕ್ಕೆ ಬರುತ್ತಿದ್ದರು. ಅದರಿಂದ ಪ್ರೆಸ್ಸಿನಲ್ಲಿ ನಾನಾ ತರದ ವಿಪರೀತ ಕೆಲಸ, ಆ ಎಲ್ಲ ಕೆಲಸವನ್ನು ಕ್ರಮ ಬದ್ಧವಾಗಿ ಸ್ವೀಕರಿಸಿ ಹೊತ್ತಿಗೆ ಸರಿಯಾಗಿ ಮುಗಿಸಿ ಕೊಟ್ಟು ಗ್ರಾಹಕರ ಸಂತಸ, ನೆಮ್ಮದಿ ಕಾಪಾಡಿಕೊಂಡು ಹೋಗುತ್ತಿದ್ದರು.

ಸುರಪುರದ ವೇದ ಮೂರ್ತಿ ನೀಲಯ್ಯ ಸ್ವಾಮಿಗಳ ಹತ್ತಿರ ಜ್ಯೋತಿಷ್ಯ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದ ಗುರುಸಿದ್ಧ ಶಾಸ್ತ್ರಿಗಳು ತಮ್ಮ ಬಿಡುವಿನ ವೇಳೆಯಲ್ಲಿ ಜ್ಯೋತಿಷ್ಯ ಶಾಸ್ತ್ರದಲ್ಲಿ ಅಭ್ಯಾಸ ಮಾಡುತ್ತ ಅಪಾರವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರು. ಪಂಚಾಂಗದಲ್ಲಿ ಅವರಿಗೆ ತುಂಬಾ ನಂಬಿಕೆಯೂ ಇತ್ತು. ಬಸವ ತತ್ವ ಅರಿತ ಅವರಿಗೆ ಪಂಚಾಂಗದ ಕಡೆಗೆ ತುಸು ಅನಾದರತೆಯೂ ಇತ್ತು. ಅಭಿಮಾನವೂ ಇತ್ತು ಕೆಲವು ವಿಷಯಗಳನ್ನು ಬಾಯಿ ಪಾಠ ಹೇಳಿ ಬಿಡುತ್ತಿದ್ದರು.

ವಧು-ವರರ ಸಾಲಾವಳಿ, ಹೊಲ-ಮನೆ ಖರೀದಿಸುವವರಿಗೆ ಬಲಾಬಲ, ಮನೆ ಕಟ್ಟುವವರಿಗೆ, ಗೃಹ ಪ್ರವೇಶಕ್ಕೆ ಮುಹೂರ್ತ, ಮೂರ್ತಿ ಸ್ಥಾಪನೆ, ಮದುವೆ, ಉಪನಯನ, ಅಯ್ಯಾಚಾರ ಮುಂತಾದ ವಿಷಯ ಶಾಸ್ತ್ರಿಗಳನ್ನು ಕೇಳಿಯೇ ತಿಳಿದುಕೊಳ್ಳಲು, ಅದರಂತೆ ಮಾಡಲು ಜನರು ಅವರ ಹತ್ತಿರ ಬರುತ್ತಿದ್ದರು. ಹೀಗೆ ಕೇಳಲು ಬಂದವರು ಬಡವರಿರಲಿ, ಶ್ರೀಮಂತರಿರಲಿ ಅವರಿಗೆ ತಿಳಿಯುವಂತೆ-ಸಮಾಧಾನದಿಂದ ಹೇಳಿ ಕಳಿಸುತ್ತಿದ್ದರು. ಹೀಗೆ ಕೇಳಲು ಬರುತ್ತಿದ್ದ ಜನರಿಂದ ಶಾಸ್ತ್ರಿಗಳು ಏನನ್ನು ಪಡೆದುಕೊಳ್ಳದೆ ಇದು ಜನಸೇವೆಯೆಂದು ಭಾವಿಸಿಕೊಂಡಿದ್ದರು.

ಊರಲ್ಲಿ ಯಾರಾದರೂ ಸತ್ತರೂ ಶಾಸ್ತ್ರಿಗಳು ಬೇಕು, ಹುಟ್ಟಿದರೂ ಶಾಸ್ತ್ರಿಗಳು ಬೇಕು.ಹೀಗೆ ಕೆಟ್ಟದ್ದಕ್ಕೂ, ಒಳ್ಳೆಯದಕ್ಕೂ, ಶಾಸ್ತ್ರಿಗಳು ಬೇಕು ಎಂಬಂತೆ ಜನಮುಖಿಗಖಿಳಾಗಿ ಬಾಳತೊಡಗಿದರು ಯಾದಗಿರಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು.

ಜ್ಯೋತಿಷ್ಯ ಶಾಸ್ತ್ರದಲ್ಲಿ ಅಪಾರ ಅನುಭವವುಳ್ಳ ಶಾಸ್ತ್ರಿಗಳ ಹೆಸರನ್ನು ಕೇಳಿದ "ಸುರಪುರ ಭುವನೇಶ್ವರಿ ಪಂಚಾಂಗ" ಕರ್ತೃಗಳಾದ ಶ್ರೀ ಶೇಷ ಶಾಸ್ತ್ರಿಗಳು ಹೆಬ್ಬಾಳ ತಮ್ಮ ವಾರ್ಷಿಕ ಪಂಚಾಂಗವನ್ನು ಶ್ರೀ ಶಂಕರಾನಂದ ಮುದ್ರಣಾಲಯದಲಿಯೇ ಮುದ್ರಿಸಲು ನಿರ್ಧರಿಸಿದ್ದರು ಪ್ರತಿ ವರ್ಷ "ಸುರಪುರ ಭುವನೇಶ್ವರಿ ಪಂಚಾಂಗ" ಮುದ್ರಣದ ಕೆಲಸಕ್ಕಾಗಿ ಬರುತ್ತಿದ್ದ ಹೆಬ್ಬಾಳ ಶೇಷ ಶಾಸ್ತ್ರಿಗಳಿಗೂ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೂ ಅಪಾರ ಪ್ರೀತಿ- ವಿಶ್ವಾಸ ಬೆಳೆಯಿತು. ಕನ್ನಡದಲ್ಲಿ ಒಂದು ಅಕ್ಷರವೂ ತಪ್ಪಾಗದಂತೆ ಅತ್ಯಂತ ಸುಂದರವಾಗಿ ಮುದ್ರಣಗೊಂಡು ಹೊರಬರುತ್ತಿದ್ದೆ "ಸುರಪುರ ಭುವನೇಶ್ವರಿ ಪಂಚಾಂಗ" ಅತ್ಯಂತ ಜನಪ್ರಿಯತೆಯನ್ನು ಪಡೆಯಿತು. ಇಡೀ ಹೈದರಾಬಾದ್ ಕರ್ನಾಟಕದಲ್ಲಿಯೇ ಸುರಪುರ ಭುವನೇಶ್ವರಿ ಪಂಚಗಕ್ಕೆ ಎಲ್ಲಿಲ್ಲದ ಬೇಡಿಕೆ ಇತ್ತು. ಇದರಿಂದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ತಾವೇ ಒಂದು ಪಂಚಾಂಗ ಬರೆದು ಸಿದ್ಧಪಡಿಸುವಷ್ಟು ಅನುಭವ ಬಂದಿತು. ಮುದ್ರಣಾಲಯದಲ್ಲಿ "ಅಮರವಾಣಿ" ಆಧ್ಯಾತ್ಮ ಮಾಸ ಪತ್ರಿಕೆ "ಸುರಪುರ ಭುವನೇಶ್ವರಿ ಪಂಚಾಂಗ" ಶಾಸ್ತ್ರಿಗಳು ಮುದ್ರಣ ಕೆಲಸದಲ್ಲಿ ತುಂಬಾ ತಲ್ಲೀನರಾಗಿಬಿಟ್ಟರು. ಅದರಿಂದ ಮುದ್ರಣ ಕೆಲಸ ಹೊಸ ಆಯಾಮವನ್ನು ಪಡೆದುಕೊಳ್ಳತೊಡಗಿತು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಂದ "ಕನ್ನಡ ಕಸ್ತೂರಿ" ಪರಿಮಳಿಸತೊಡಗಿತು ಶಾಸ್ತ್ರಿಗಳ ಮನೆತನವೂ ಆರ್ಥಿಕ ತೊಂದರೆಯಿಂದ ಮೆಲ್ಲನೆ ಪಾರಾಗತೊಡಗಿತು. ಅದರಿಂದ ಮುದ್ರಣಾಲಯದಲ್ಲಿಯೂ ಶಾಂತಿ-ಸಮಾಧಾನ, ಮನೆಗಳಲ್ಲಿಯೂ ಶಾಂತಿ-ಸಮಾಧಾನ, ನೆಲೆಸತೊಡಗಿತು ಸಣ್ಣ ವಯಸ್ಸಿನ ಶಾಸ್ತ್ರಿಗಳು ಮನೆಯಲ್ಲಿಯೂ ಮುದ್ರಣಾಲಯದಲಿಯೂ ಯಜಮಾನರಂತೆ ಕಾಣತೊಡಗಿದರು.

ಯಾದಗಿರಿಯ ಸಮಸ್ತ ಜನರು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಸಾಕ್ಷಾತ್ ದೇವರು ಎಂದು ಭಾವಿಸ ತೊಡಗಿದರು. ಶಾಸ್ತ್ರಿಗಳ ನಡೆ-ನುಡಿ ಅವರ ರೀತಿ, ನೀತಿ ದಯೆ ಅಂತಃಕರಣ, ವಿದ್ಯೆ ವಿನಯಗಳಂತಹ ಸದ್ಗುಣಗಳನ್ನು ಕಂಡು ಜನರು ಶಾಸ್ತ್ರಿಗಳ ದರ್ಶನಕ್ಕೆ ಬರತೊಡಗಿದರು. ಯಾದಗಿರಿಯಲ್ಲಿ "ವಡಿ" ಎಂಬ ಒಂದು ದೊಡ್ಡದಾದ ಶ್ರೀಮಂತ ಕುಟುಂಬ. ಈ ಕುಟುಂಬದ ಯಜಮಾನ ಶರಣಪ್ಪ ಅವರು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಪರಮ ಭಕ್ತರು, ಕಟ್ಟಾಭಿಮಾನಿಗಳು ಶಾಸ್ತ್ರಿಗಳೊಡನೆ ಸಮಾಲೋಚಿಸದೇ ಯಾವ ಕಾರ್ಯವನ್ನು ಮಾಡುತ್ತಿರಲಿಲ್ಲ.

ಕೂರಿಗೆ ಪೂಜೆ ಯಾವ ಹೊಲದಲ್ಲಿ ಯಾವ ಬೀಜ ಬಿತ್ತಬೇಕು ಎಂಬುದನ್ನು ಹಿಡಿದುಕೊಂಡು ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕಳಿಸಿಕೊಡಬೇಕಾದಾಗಲೂ ಶಾಸ್ತ್ರಿಗಳ ಅಭಿಪ್ರಾಯವೇ ಅಂತಿಮವಾಗುತ್ತಿತ್ತು. ಅಷ್ಟೇ ಭಕ್ತಿ, ಶ್ರದ್ಧೆ, ವಿಶ್ವಾಸ ಯಜಮಾನ ವಡಿ ಶರಣಪ್ಪನವರಿಗೆ.

ಶರಣಪ್ಪ ವಡಿಯವರು ಪ್ರಪ್ರಥಮವಾಗಿ ಒಂದು ಕಬ್ಬಿಣದ ಅಂಗಡಿಯನ್ನು ಪ್ರಾರಂಬಿಸಿದರು ಆ ಅಂಗಡಿಗೆ "ಮೇ" ಗುರುಸಿದ್ಧೇಶ್ವರ ಐರನ್ ಮರ್ಚಂಟ್" ಎಂಬ ಹೆಸರನ್ನು ಇಟ್ಟು ಶಾಸ್ತ್ರಿಗಳ ಮೇಲಿನ ತಮ್ಮ ಗುರುಭಕ್ತಿಯನ್ನು ವ್ಯಕ್ತಪಡಿಸಿದರು. ಹೀಗೆ ಶಾಸ್ತ್ರಿಗಳು ತಮ್ಮ ಉತ್ತಮ ನಡೆ–ನುಡಿ ಸಹಕಾರ ಸೌಹಾರ್ದತೆ ಸರಸ–ಸಜ್ಜನಿಕೆಯಿಂದ ಯಾದಗಿರಿಯ ಜನರ ಮನೆ ಮಾತಾದರು.

■

## ಮನಸ್ಸು ಇದ್ದಲ್ಲಿ ಮಹಾದೇವನಿರುತ್ತಾನೆ

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಕೀರ್ತಿ ಅವರ ಬಂಧು ಬಳಗದಲ್ಲಿಯೂ ಹರಡಿತು ಇವರ ಮಂದಿ ಮಕ್ಕಳು ದೂರದ ಸಂಬಂಧಿಕರ ಹತ್ತಿರವಾಗತೊಡಗಿದರು.

ತಾಯಂದಿರು ಗುರುಸಿದ್ಧ ಶಾಸ್ತ್ರಿಗಳ ನಿತ್ಯ ಜೀವನದ ಚಾಕಚಕ್ಯತೆ, ಪ್ರಾಮಾಣಿಕ ದುಡಿತ ಸಂಪಾದಿಸಿದ ಜನತೆಯ ಪ್ರೀತಿಯನ್ನು ಕಂಡು ಸಂತೋಷ ಪಡತೊಡಗಿದರು. ಗುರುಸಿದ್ಧ ಶಾಸ್ತ್ರಿಗಳ ಮನದ ತುಡಿತವನ್ನು ಅರ್ಥಮಾಡಿಕೊಂಡು ಅವರಿಗೆ ಸಂಪೂರ್ಣ ಬೆಂಬಲ ನೀಡತೊಡಗಿದರು.

ಮನೆಗೆ ಹೋಗಿ ಬರುವವರ ಸಂಖ್ಯೆ ದಿನದಿನಕ್ಕೆ ಬೆಳೆಯ ತೊಡಗಿತು. ವಿಪರೀತ ಖರ್ಚು ಆದರೂ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಧೈರ್ಯಗೆಡದೆ ಸಂಸಾರ ರಥವನ್ನು ಸಾಗಿಸಿದರು. ಅವರಿಗಿದ್ದ ದೊಡ್ಡ ಮನಸ್ಸಿನಿಂದ ಎಲ್ಲ ಸಹೋದರಿಯರ ಸಹೋದರರ ಬಾಳು ಬಂಗಾರದಂತೆ ಬಣ್ಣ ತುಂಬಿಕೊಂಡು ಬೆಳಗತೊಡಗಿದವು. ಮನವಿದ್ದಲ್ಲಿ ಮಾರ್ಗವಿರುತ್ತದೆ ಎಂದು ಹೇಳುತ್ತಾರೆ ಇದು ಸತ್ಯವೆಂದು ಹೇಳುತ್ತಾರೆ ಶಾಸ್ತ್ರಿಗಳು. ಮೂವರು ತಂಗಿಯರ, ಮೂವರು ತಮ್ಮಂದಿರ ವಿವಾಹಗಳನ್ನು ಸುಸಂಸ್ಕೃತ ಮನೆತನಗಳೊಂದಿಗೆ ಸಂಬಂಧ ಬೆಳೆಸಿ ಮದುವೆಯ ಶಾಸ್ತ್ರ ಮುಗಿಸಿದರು. ತಮ್ಮಂದಿರು ತಮ್ಮ ತಮ್ಮ ಕುಟುಂಬಗಳ ಹೊಣೆಗಾರಿಕೆ ಹೊತ್ತು ಬೇರೆ ಬೇರೆ ಒಲೆ ಹೂಡಿಕೊಂಡು ತಿನ್ನಲು ಮುಂದಾದಾಗ ಬೇಡವೆನ್ನಲಿಲ್ಲ ಹೊರೆಗೆ ಹೋಗಿ ಸಂಸಾರ ಸಾಗಿಸಲು ಮುಂದಾದಾಗ ಸಹೋದರರಿಗೆ ಅವರವರ ಪ್ರಪಂಚಕ್ಕೆ ಅಗತ್ಯವಿದ್ದ ನೆರವು ನೀಡಿ ಬಿಚ್ಚು ಮನಸ್ಸಿನಿಂದ ಹರಿಸಿ ಸಾಮರಸ್ಯದ ಬದುಕಿಗೆ ನಾಂದಿ ಹಾಡಿದರು.

ಹೀಗೆ ಎಲ್ಲಾ ತಮ್ಮಂದಿರಿಗೆ ಅವರವರ ಇಚ್ಛೆಯಂತೆ ಕೆಲಸದಲ್ಲಿ ತೊಡಗಿಸಿ ಅವರೆಲ್ಲರಿಗೂ ಸತ್ಯ-ಶುದ್ಧ ಕಾಯಕ ಜೀವಿಗಳಾಗಿ, ಸದಾಚಾರಿಗಳಾಗಿ ಜನ ಮುಖಿಗಳಾಗಿ ನಿಜ ಸುಖಿಗಳಾಗಿ ಬಾಳಲು ಹೇಳಿ ಪರಸ್ಪರರಲ್ಲಿ ಪ್ರೀತಿ-ಮಮತೆ ಇರಬೇಕೆಂದು ಹೇಳುತ್ತಿದ್ದರು. ಬಿಡುವಿನ ವೇಳೇಯಲ್ಲಿ ಯಾದಗಿರಿಗೆ ಬಂದು ಹೋಗಲು ತಿಳಿಸುತ್ತಿದ್ದರು. ತಾವೂ ಎಲ್ಲರ ಕಡೆಗೆ ಹೋಗಿ ಬರುತ್ತಿದ್ದರು.

ಶಾಸ್ತ್ರಿಗಳು ಮನೆ–ಮುದ್ರಣಾಲಯಕ್ಕೆ ಸೀಮಿತವಾಗಿರದೆ ಸಮಾಜ ಕಾರ್ಯದಲ್ಲಿ ಪಾಲುಗೊಳ್ಳುತ್ತಿದ್ದರು. ಹೊರಗಿನ ವಿದ್ಯಮಾನದತ್ತ ದೃಷ್ಟಿ ಚಾಚುತ್ತಿದ್ದರು. ಮೂವತ್ತು, ಮೂವತ್ತೆರಡರ ಹರೆಯದ ಜಿ.ಎಂ.ಗುರುಸಿದ್ಧ ಶಾಸ್ತ್ರಿ ಸಮಾಜದ ಆಸ್ತಿಯಾಗಿ ಬೆಳೆಯತೊಡಗಿದರು. ಸಮಾಜದ ಮೌಲ್ಯಗಳನ್ನು ಎತ್ತಿ ಹಿಡಿದು ಸಮಾನತೆ ಕಾಯ್ದುಕೊಂಡು ಎಲ್ಲರೊಳೊಂದಾಗಿ ಬೆಲ್ಲ ಸಕ್ಕರೆಯಾಗಿ ಬಾಳತೊಡಗಿದರು.

■

## ಕೈ ಮಾಡಿ ಕರೆದ ರಾಮಗಿರಿ ಕಟ್ಟಿಮನಿ ಹಿರೇಮಠ

ತಮಗೆ ಆಗಾಗ್ಗೆ ಬಿಡುವು ಸಿಕ್ಕಾಗ ಒಮ್ಮೊಮ್ಮೆ ಬಿಡುವು ಮಾಡಿಕೊಂಡು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಯಾದಗಿರಿ ರಾಮಗಿರಿ ಕಟ್ಟಿಮನಿ ಹಿರೇಮಠಕ್ಕೆ ಹೋಗಿ ಬರುತ್ತಿದ್ದರು. ರಾಮಗಿರಿ ಕಟ್ಟಿಮನಿ ಹಿರೇಮಠ ಪೀಠಾಧಿಪತಿಗಳಾದ ಷ.ಬ್ರ.ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳೂ, ಬಾಳೆಹೊನ್ನೂರು ವೀರ ಸಿಂಹಾಸನ ಪೀಠದ ಶಾಖಾನುವರ್ತಿಗಳಾಗಿ ಭಕ್ತವೃಂದದ ಗೌರವಾದಾರಗಳಿಗೆ ಪಾತ್ರರಾಗಿಬಾಳುತ್ತಿದ್ದರು. ಅದು ಹೈದರಾಬಾದ ನಿಜಾಮರ ಕಾಲ ಹಿಂದುಗಳ ಧಾರ್ಮಿಕ ಚಟುವಟಿಕೆಗಳಿಗೆ ಅಷ್ಟೊಂದು ಅವಕಾಶ ಇರಲಿಲ್ಲ ಅದಕ್ಕಾಗಿ ಸ್ವಾಮಿಗಳು ನಿಧಾನವಾಗಿ ಪರಿಸ್ಥಿತಿಗೆ ಹೊಂದಿಕೊಂಡು ತಮ್ಮ ಕೈಲಾದ ಸೇವೆ ಮಾಡಿಕೊಂಡಿದ್ದರು.

ಅದರಲ್ಲಿ ಬ್ರಿಟೀಷ್ ಭಾರತದಲ್ಲಿ ಪೂಜ್ಯ ಮಹಾತ್ಮಗಾಂಧೀಜಿಯವರು ಹೂಡಿದ ಸ್ವಾತಂತ್ರ್ಯ ಚಳುವಳಿಯ ಗಾಳಿ ಭದ್ರಕೋಟೆಯಂತಿದ್ದ ನಿಜಾಮ ಸಂಸ್ಥಾನದಲ್ಲಿಯೂ ನುಸುಳಿ ನಿಜಾಮರ ಸಕ್ಕರೆಯ ನಿದ್ದೆಯನ್ನು ಕೆಡಿಸುತ್ತಲಿತ್ತು. ಅದಕ್ಕಾಗಿ ಸಾರ್ವಜನಿಗವಾಗಿ ಯಾವ ಸಭೆ ಸಮಾರಂಭಗಳಿಗೆ ಆಧ್ಯತೆ ಕೊಡಬಾರದೆಂದು ಸೂಚನೆಯೂ ಇತ್ತು. ನವನಾಗರೀಕತೆಯನ್ನು ಮೈಗೋಡಿಸಿಕೊಂಡು ಬೆಳೆದು ಬಂದ ಮೂವತ್ತೆರಡು ವರ್ಷದ ತುಂಬು ಹರೆಯದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಅಚ್ಚ ಕನ್ನಡದ ಕೆಚ್ಚೆದೆಯ ನಾಗರೀಕ. ಅವರು ಕನ್ನಡದಲ್ಲಿ ಮಾತನಾಡುತ್ತಿದ್ದರೆ ಮುತ್ತು ಸುರಿದಂತೆ ಭಾಸವಾಗುತ್ತಿತ್ತು.

ಸ್ವಾಮಿಗಳ ಹತ್ತಿರ ಮಠಕ್ಕೆ ಆಗಮಿಸಿದ ಭಕ್ತವೃಂದ ಶಿಷ್ಯ ಸಮೂಹ ಗುರುಸಿದ್ಧ ಶಾಸ್ತ್ರಿಗಳ ಮಾತು ಕೇಳಿ ಮಂತ್ರ-ಮುಗ್ಧರಾಗುತ್ತಿದ್ದರು. ಗುರುಸಿದ್ಧ ಶಾಸ್ತ್ರಿಗಳ ಮಾತು ಕೇಳಿ ಸ್ವಾಮಿಗಳು ಸಹಿತ ಹೆಮ್ಮೆ ಪಡುತಿದ್ದರು.

ತುಂಬು ವಯಸ್ಸಿನ ಸ್ವಾಮಿಗಳಿಗೆ ಗುರುಸಿದ್ಧ ಶಾಸ್ತ್ರಿಗಳು "ಬುದ್ದಿ, ತಮ್ಮ ತರುವಾಯ ಈ ಮಠಕ್ಕೆ ಯೋಗ್ಯ ಉತ್ತರಾಧಿಕಾರಿಯ ಅವಶ್ಯವಿದೆ. ಈಗಲೇ ಒಬ್ಬ ಮರಿಯನ್ನು ಆಯ್ಕೆ ಮಾಡಿ ಹಾನಗಲ್ಲ ಕುಮಾರ ಸ್ವಾಮಿಗಳು ಸ್ಥಾಪಿಸಿ

ಶಿವಯೋಗ ಮಂದಿರಕ್ಕೆ ಕಳಿಸಿ ಉತ್ತಮ ಶಿಕ್ಷಣ ಕೊಟ್ಟರೆ ಒಳ್ಳೆಯದಾಗಿತ್ತದೆ. ಎಂದು ಆಗಾಗ್ಗೆ ಹೇಳುತ್ತ ಬಂದರೂ ಶ್ರೀಗಳು ಗುರುಸಿದ್ಧ ಶಾಸ್ತ್ರಿಗಳ ಮಾತು ಕೇಳಿಯೂ ಕೇಳದಂತೆ ಇರುತ್ತಿದ್ದರು. ಆಗ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸ್ವಾಮಿಗಳ ಚಿತ್ತ ನಾವೇನು ಮಾಡಲಿಕ್ಕಾಗುವುದಿಲ್ಲ ಎಂದು ಸುಮ್ಮನಾಗುತ್ತಿದ್ದರು. ಆಗ ಸ್ವಾಮಿಗಳೇ ಮೌನ ಮುರಿದು "ನಮ್ಮ ಸಮಾಜಕ್ಕೆ ಹೊಸ ನೀರುಹರಿದು ಬರುತ್ತಲಿದೆ. ಹೊಸ ಕಳೆಯು ತುಂಬಿ ಕೊಳ್ಳುತ್ತಲಿದೆ. ಈಗ ಮಠದ ಕಡೆಯಿಂದ ಜನ ಜಾಗೃತಿಯ ಕಾರ್ಯಕ್ರಮ ಹಮ್ಮಿಕೊಳ್ಳೋಣ ಹೇಗೊ ನೀನು ಕನ್ನಡ ಪಂಡಿತ ಸಂಸ್ಕೃತದಲ್ಲಿ 'ಕಾವ್ಯ ತೀರ್ಥ' ನವನಾಗರಿಕತೆಯನ್ನು ಮೈಗೂಡಿಸಿಕೊಂಡು ಬೆಳೆದು ಬಂದ ಯುವಕ, ನುಡಿದಂತೆ ನಡೆವ ಅಚ್ಚ ಕನ್ನಡ 'ಶಾಸ್ತ್ರಿ', ಸಾಮಾಜಿಕ, ಆರ್ಥಿಕ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪಳಗಿದವ, ನಿನ್ನ ಮಾತು ಕೇಳಲು ಜನ ಉತ್ಸುಕರಾಗಿದ್ದಾರೆ. ಎಂದು ಹೇಳಿ ರಾಮಗಿರಿ ಹಿರೇಮಠದಲ್ಲಿ ಸಣ್ಣ-ಪುಟ್ಟ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳ ಬೇಕೆಂದು ಹೇಳಿದರು.

ಶ್ರೀಗಳ ಮಾತು ಕೇಳಿ ರಾಮಗಿರಿ ಹಿರೇಮಠದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಸಿದ್ಧತೆ ಮಾಡಿಕೊಳ್ಳಲಾಯಿತು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಜನರ ಮಧ್ಯದಲ್ಲಿ ಹಂಚಿಕೊಳ್ಳಲು ದೊರೆತ ಒಳ್ಳೆಯ ಅವಕಾಶವೆಂದು ಭಾವಿಸಿದರು, ಶಾಸ್ತ್ರಿಗಳು ಅತ್ಯಂತ ಉಪಯುಕ್ತವಾದ "ಗುರು-ಶಿಷ್ಯರ ಸಂಬಂಧ", "ಮಾತೃಭಾಷೆಯಲ್ಲಿ ಶಿಕ್ಷಣ" ದಯವೇ ಧರ್ಮದ ಮೂಲ, ತಾಯಿಯೇ ದೇವರು, "ಕನ್ನಡ ನಮಗೆ ಭಾಷೆ ಅಲ್ಲ ಬದುಕು" "ನುಡಿದಂತೆ ನಡೆ"ಮುಂತಾದ ವಿಷಯಗಳನ್ನೂ ಅಯ್ಕೆಮಾಡಿಕೊಂಡು ಜನರಿಗೆ ತಿಳಿಯುವಂತೆ ಹೇಳಿ ಜನಜಾಗೃತಿಗೊಳಿಸುತ್ತಿದ್ದರು.

ಮಠದ ಸ್ವಾಮಿಗಳು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ವ್ಯಕ್ತಿತ್ವ ಭಕ್ತವೃಂದಕ್ಕೆ ಪರಿಚಯ ಮಾಡಿಕೊಡುತ್ತ ತಾವು ವೇದಿಕೆಯ ನೇತೃತ್ವ ವಹಿಸಿ ಕೊನೆಯದಾಗಿ ಆಶೀರ್ವಚನ ನೀಡಿ ಭಕ್ತ ಸಮೂಹವನ್ನು ಆನಂದ ಸಾಗರದಲ್ಲಿ ತೇಲಿ ಬಿಡುತ್ತಿದ್ದರು. ಹೀಗೆ ರಾಮಗಿರಿ ಕಟ್ಟಿಮನಿ ಹರೇಮಠ ಗುರುಸಿದ್ಧ ಶಾಸ್ತ್ರಿಗಳನ್ನು ಕೈ ಮಾಡಿ ಕರೆದು ಸಮಾಜ ಸೇವೆಗೆ ಅಣಿಗೊಳಿಸಿತು.

■

# ಜಿ.ಎಂ,ಗುರುಸಿದ್ಧ ಶಾಸ್ತ್ರಿಗಳ ಸುಪರ್ಧಿಯಲ್ಲಿ ರಾಮಗಿರಿ ಕಟ್ಟಿಮನಿ ಹಿರೇಮಠ

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ರಾಮಗಿರಿ ಕಟ್ಟಿಮನಿ ಹಿರೇಮಠದ ಶ್ರೀ ಗಳ ಸನ್ನಿಧಿಯಲ್ಲಿ ಸಾಮಾಜಿಕ ಧಾರ್ಮಿಕ, ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸುತ್ತಲೇ ಸಮಾಜದಲ್ಲಿ ಬೇರು ಬಿಟ್ಟಿದ ಮೇಲು-ಕೀಳುತನ ಬಡವ ಬಲ್ಲಿದರು, ಅಜ್ಞಾನ ಅನಕ್ಷರತೆ, ಕಾಯಕ-ದಾಸೋಹ ಕುರಿತು ಜನರಲ್ಲಿ ಪ್ರಜ್ಞೆ ಮೂಡಿಸತೊಡಗಿದರು ಹಿಂದು-ಮುಸ್ಲಿಂರಲ್ಲಿ ಭೇದ ಭಾವ ಇಲ್ಲದೆ ಹೆಣೆದುಕೊಂಡು ಬಂದ ನಿಜಾಂ ಪ್ರಾಂತದಲ್ಲಿ ಹಿಂದುಗಳಿಗೂ ಅಷ್ಟೇ ಗೌರವವಿತ್ತು ನಿಜಾಂರು ಹಿಂದು-ಮುಸ್ಲಿಂ ಸಮಾಜಕ್ಕೆ ಎರಡು ಕಣ್ಣುಗಳೆಂದು ಭಾವಿಸಿಕೊಂಡಿದ್ದರು. ನಂತರ ತಲೆ ಹಾಕಿದ "ಆರ್ಯ ಸಮಾಜ" ಭಾರತದಲ್ಲಿ ಗಾಂಧೀಜಿಯವರು ಹೂಡಿದ ಸ್ವಾತಂತ್ರ್ಯ ಚಳುವಳಿಯ ಬಿಸಿಯಿಂದ ನಿಜಾಂ ಸರಕಾರ ಎಚ್ಚರಗೊಂಡು ಹಿಂದುಗಳ ನಡೆಸುವ ಸಭೆ ಸಮಾರಂಭಗಳತ್ತ ಹದ್ದಿನ ಕಣ್ಣಿಟ್ಟು ನೋಡ ಹತ್ತಿತು.

ವಿಜಾಪುರ ಜಿಲ್ಲೆಯ ಬಂಥನಾಳ ಮಠದ ಶ್ರೀ ಸಂಗನ ಬಸವ ಮಹಾಸ್ವಾಮಿಗಳು ಬಂಥನಾಳ ಸ್ವಾಮಿಗಳೆಂದೇ ಪ್ರಸಿದ್ಧರಾಗಿದ್ದರು ಅವರ ಒಂದು ಶಾಖಾ ಮಠ ರಾಯಚೂರು ಜಿಲ್ಲೆಯ "ಕೃಷ್ಣಾ"ದಲ್ಲಿ ಇರುವುದರಿಂದ ಮೇಲಿಂದ ಮೇಲೆ ನಿಜಾಂ ಪ್ರಾಂತಕ್ಕೆ ಬರುತಿದ್ದರು. ಅದು ೧೯೪೧-೪೨ ರ ಸಮಯ ಬಂಥನಾಳ ಶ್ರೀಗಳ ಸಂಗಡ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಕರ್ನಾಟಕದ ಗಾಂಧಿಯೆಂದು ಪ್ರಖ್ಯಾತರಾಗಿದ್ದ ಹರ್ಡೇಕರ ಮಂಜಪ್ಪನವರೂ ಇದ್ದರು. ವಚನ ಸಾಹಿತ್ಯ ಕುರಿತು ಪ್ರವಚನ ಮಾಡುತ್ತ ಯಾದಗಿರಿಯ ರಾಮಗಿರಯ ಹಿರೇಮಠಕ್ಕೆ ನೇರವಾಗಿ ಬಂದರು. ಸುದೈವದಿಂದ ಆ ಸಮಯದಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ರಾಮಗಿರಿ ಹಿರೇಮಠದಲ್ಲಿಯೇ ಸನ್ನಿಧಿಯವರ ಸಮ್ಮುಖದಲ್ಲಯೇ ಇದ್ದರು. ಆಕಸ್ಮಿಕವಾಗಿ ಆಗಮಿಸಿದ ಈ ಇಬ್ಬರು ಅತಿಥಿಗಳನ್ನು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಗುರುತಿಸಿ ಆದರದಿಂದ ಬರಮಾಡಿಕೊಂಡು ಶ್ರೀಗಳಿಗೆ ಪರಚಯಮಾಡಿಕೊಟ್ಟರು.

ಆಗ ಬಂಥನಾಳ ಶ್ರೀಗಳು ಶರಣರು, ರಾಷ್ಟ್ರ ಭಕ್ತರು ಆದ ಹರ್ಡೇಕರ ಮಂಜಪ್ಪನವರು ವಚನ ಸಾಹಿತ್ಯದ ಪ್ರಚಾರಕ್ಕಾಗಿ ನಮ್ಮೊಡನೆ ಇಲ್ಲಿಗೆ ಬಂದುದಾಗಿ

ತಿಳಿಸಿದರು. ಶ್ರೀ ಮಠದ ಪೀಠಾಧಿಪತಿಗಳಾದ ಶ್ರೀ ಶಿವಶಂಕರ ಮಹಾಸ್ವಾಮಿಗಳು ಶಾಸ್ತ್ರಿಗಳ ಕಡೆ ನೋಡುತ್ತಲೇ "ಪೂಜ್ಯರೇ ಇವರಿಗಾಗಿ ವೇದಿಕೆ ಸಿದ್ಧಪಡಿಸುತ್ತೇನೆ. ಆಕಸ್ಮಿಕವಾಗಿ ಆಗಮಿಸಿದ ಅತಿಥಿಗಳು ಪ್ರಕಾಂಡ ಪಂಡಿತರು ಸಮಾಜ ಚಿಂತಕರು ರಾಷ್ಟ್ರಭಕ್ತರು ಮೇಲಾಗಿ ಬಸವಾನುಯಾಯಿಗಳು ಇವರ ಸ್ನಾನ-ಪೂಜೆ, ಪ್ರಸಾದ ವ್ಯವಸ್ಥೆ ಮಾಡಿ ಸಾಯಂಕಾಲ ನಾಲ್ಕು ಗಂಟೆಗೆ ಪ್ರವಚನ ನಡೆಸುವ ವ್ಯವಸ್ಥೆ ಮಾಡುತ್ತೇನೆ. ತಾವು ಚಿಂತಿಸಬಾರದೆಂದು ಹೇಳಿದರು. ಹಾಗೆಯೇ ತಮ್ಮ ಸ್ನೇಹಿತರನ್ನು ಕೂಡಿಕೊಂಡು ಯಾದಗಿರಿ ಹಳೇ ಬಜಾರದಲ್ಲಿರುವ ಶಿಣ್ಣೂರು ರುದ್ರಪ್ಪನವರ ಕಾರ್ಖಾನೆಯಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದರು.

ಈ ಇಬ್ಬರು ಮುತ್ಸದ್ದಿಗಳು ಬಂದುದನ್ನು ಸಾಯಂಕಾಲ ನಡೆಯುವ ಸಭೆಗೆ ಬರಬೇಕೆಂದು ಟಾಂಗಾದಲ್ಲಿ ಇಬ್ಬರು ಪ್ರಚಾರಕರನ್ನು ಕೂಡ್ರಿಸಿ ಊರ ತುಂಬ ಪ್ರಚಾರ ಮಾಡಿದರು ಬಂಥನಾಳ ಶ್ರೀಗಳು ಶರಣ ಹರ್ಡೇಕರ ಮಂಜಪ್ಪನವರನ್ನು ನೋಡಲು ಜನ ಕಿಕ್ಕಿರಿದು ಸೇರಿರು. ಅಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸಭೆಯನ್ನುದ್ದೇಶಿಸಿ ಮಾಡಿದ ಭಾಷಣ ಕೇಳಿ ಯಾದಗಿರಿಯ ಜನರು ಬೆರಗಾಗಿ ಬೆರಳು ಕಚ್ಚಿಕೊಂಡರು. ಅಂದು ಪರಿಚಯವಾದ ಈ ಇಬ್ಬರು ಗಣ್ಯ, ಮಾನ್ಯ, ವ್ಯಕ್ತಿಗಳ ಪ್ರೀತಿ, ವಿಶ್ವಾಸ ಸಂಬಂಧ ಶಾಸ್ತ್ರಿಗಳು ಕೊನೆಯವರೆಗೂ ಉಳಿಸಿಕೊಂಡು ಬಂದರು. ಉದಾಹರಣೆಗಾಗಿ ಇದಾದ ಇಪ್ಪತ್ತು ವರ್ಷಗಳ ಮೇಲೆ ಅಂದರೆ ೧೯೬೦ರಲ್ಲಿ ಬಂಥನಾಳ ಶಿವಯೋಗಿಗಳು ದುಷ್ಟಗ್ರಹಗಳ ನಿವಾರಣೆಗಾಗಿ ವಾಡಿ ರಾಯಚೂರು ರೈಲು ಮಾರ್ಗದಲ್ಲಿರುವ ಕೃಷ್ಣಾ ಸುಕ್ಷೇತ್ರದಲ್ಲಿ ಪಂಚ ಕೋಟಿ ಜಪಾನುಷ್ಠಾನ ಏರ್ಪಡಿಸಿದರು ಈ ಕಾರ್ಯಕ್ರಮದ ಆರ್ಥಿಕ ಭಾರವನ್ನು ನವತರುಣ, ಸಮಾಜದುರಿಣ ವಿಶ್ವನಾಥ ರೆಡ್ಡಿ ಮುದ್ನಾಳ ಮುಂದಾಳತ್ವ ಅವರು ಹೊತ್ತುಕೊಂಡರೆ ಧಾರ್ಮಿಕ ವಿಧಿ ವಿಧಾನಗಳನ್ನು "ಕಾವ್ಯತೀರ್ಥ" ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ವಹಿಸಿಕೊಂಡರು. ಕಾರ್ಯಕ್ರಮದ ಯಶಸ್ವಿಗೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಹಗಲಿರುಳೆನ್ನದೆ ಒಂದೇ ಸಮನೆ ಹೋರಾಟ ಮಾಡಿದರು.

ಅತ್ಯಂತ ವಿಶಾಲ ಹೃದಯ ದೊಡ್ಡ ಮನಸ್ಸಿನ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ದೂರ ದೃಷ್ಟಿಯನ್ನು ಗಮನಿಸಿದ ರಾಮಗಿರಿ ಹಿರೇಮಠದ ಶ್ರೀಗಳು ಒಂದು ದಿವಸ ರಾಮಗಿರಿಯ ತಮ್ಮ ಮಠದ ಶಿಷ್ಯರನ್ನು ಹಿತೈಷಿಗಳನ್ನು ಬರಮಾಡಿಕೊಂಡು ಮುಂದಿನ ಮಠದ ಉತ್ತರಾಧಿಕಾರಿಯ ಕುರಿತು ಚರ್ಚಿಸಿದರು. ಆಗ ಶ್ರೀಗಳು ಹೇಳಿದ ಮಾತು "ರಾಮಗಿರಿ ಹಿರೇಮಠಕ್ಕೆ ಈ ಮಠದ ಜಾಗಬಿಟ್ಟರೆ ಇದಕ್ಕೆ ಇನ್ನೊಂದು ಆಸ್ತಿಯೇ ಇಲ್ಲ. ಈ ಮಠವೂ ಸಹ ಜೀರ್ಣಾ ವ್ಯವಸ್ಥೆಗೆ ಬಂದು ಜೀರ್ಣೋದ್ಧಾರಕ್ಕಾಗಿ ಕಾಯುತ್ತಲಿದೆ. ಇಂತಹ ಸ್ಥಿತಿಯಲ್ಲಿ ಈ ಮಠಕ್ಕೆ ಸ್ವಾಮಿಗಳಾಗಿ

ಯಾರು ಬಂದಾರು? ಬಂದರೂ ಸಹ ಈ ಮಠ ನುಂಗಿ ನೀರು ಕುಡಿಯುವವರೇ ಬರುತ್ತಾರೆ ಅಂತಹರಿಗೆ ಈ ಮಠ ವಹಿಸಿಕೊಡುವುದರ ಬದಲು ಸಮಾಜ ಚಿಂತಕರು, ಧಾರ್ಮಿಕ ಮನೋಭಾವವುಳ್ಳವರು ಕನ್ನಡ, ಸಂಸ್ಕೃತ ಪಂಡಿತರು ಅದರಲ್ಲಿಯೂ ನನ್ನ ಅಚ್ಚು ಮೆಚ್ಚಿನ ಶಿಷ್ಯರೂ ಆದ ಕಾವ್ಯ ತೀರ್ಥ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಈ ರಾಮಗಿರಿ ಕಟ್ಟಿಮನಿ ಹಿರೇಮಠ ಒಪ್ಪಿಸಲು ನಿರ್ಧರಿಸಿದ್ದೇವೆ. ಮಠದ ಆಸ್ತಿಯೆಂದರೆ ಈ ಮಠದ ಶಿಷ್ಯರಾದ ತಾವುಗಳೆಲ್ಲರೂ. ತಾವೇನು ಹೇಳುತ್ತೀರಿ ಅದು ಅಂತಿಮ ರೂಪ ಪಡೆದುಕೊಳ್ಳುತ್ತದೆ ಎಂದು ಶ್ರೀಗಳು ಹೇಳಿದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ನಡೆ-ನುಡಿ ಅನುಭವ ಅನುಭಾವದ ಆಳವನ್ನು ಅರಿತಿದ್ದ ರಾಮಗಿರಿ ಹಿರೇಮಠದ ಭಕ್ತವೃಂದ ಈ ಮಠದ ಹೊಣೆಗಾರಿಕೆ ಗುರುಸಿದ್ಧ ಶಾಸ್ತ್ರಿಗಳಿಗೆ ಒಪ್ಪಿಸುವುದೆಂದರೆ "ಬಂಗಾರಕ್ಕೆ ಕುಂದಣ ವಿಟ್ಟಂತೆ" ಆಗುತ್ತದೆ ಎಂದು ಎಲ್ಲರೂ ಒಮ್ಮನಸ್ಸಿನಿಂದ ಹೇಳಿದರು. ಆಗ ಗುರುಸಿದ್ಧ ಶಾಸ್ತ್ರಿಗಳು ನೆಲದ ಮೇಲೆ ಗಟ್ಟಿಯಾಗಿ ಕಾಲೂರಿ ಮುಗಿಲು ಕಡೆ ಮುಖಮಾಡಿ ಬಾನ್ದಳಕ್ಕೆ ಕೈ ಮುಗಿದು ಎಲ್ಲವೂ ನಿನ್ನಾಟ ನೀನು ಮಾಡಿದಂತೆ ಆಗಲಿ ಎಂದು ಮುಂದೆಯೇ ಕುಳಿತಿದ್ದ ಶ್ರೀ ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳ ಪಾದಾರವಿಂದಕ್ಕೆ ಕೈ ಮುಗಿದು ರಾಮಗಿರಿ ಹಿರೇಮಠದ ಹೊಣೆ ಹೊತ್ತು ಕೊಂಡರು. ಆಗ ಹಾಲು-ಜೇನು ಬೆರೆಸಿ ಕುಡಿದಂತೆ ಖುಷಿಯಾಯಿತು ನೆರೆದ ಭಕ್ತ ಸಮೂಹಕ್ಕೆ.

ಮುಂದೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಡಮಾಡಲೇ ಇಲ್ಲ ತಮ್ಮ ಹಿರಿಯ ಮಗ ಮಲ್ಲಿನಾಥ ಸ್ವಾಮಿಗಳಿಗೆ ರಾಮಗಿರಿ ಹಿರೇಮಠದ ಉತ್ತರಾಧಿಕಾರಿಗಳೆಂದು ಪಟ್ಟ ಕಟ್ಟಿದರು. ಧಾರ್ಮಿಕ ಸಭೆ ಕರೆದು ಶಿವ ಚಿಂತನ ಗೋಷ್ಠಿ ನಡೆಸಿದರು. ಅಂದಿನ ಆ ಗೋಷ್ಠಿಯ ದಿವ್ಯ ಸಮಾರಂಭದ ಸಾನಿಧ್ಯ ರಾಮಗಿರಿ ಹಿರೇಮಠದ ಹಿರಿಯ ಸ್ವಾಮಿಗಳಾದ ಶ್ರೀ ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿಕೊಂಡಿದ್ದರು ಅಂದಿನ ಸಭೆ ಪ್ರತ್ಯಕ್ಷ ಕೈಲಾಸದಂತೆ ಕಂಗೊಳಿತಿತ್ತು. ಅಂದು ನಡೆದ ಅರ್ಚನೆ, ಅರ್ಪಣೆ ಅನುಭಾವದಿಂದ ರಾಮಗಿರಿ ಹಿರೇಮಠದ ಶಿವಶಂಕರ ಸ್ವಾಮಿಗಳಿಗೂ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೂ ಆದ ಆನಂದಕ್ಕೆ ಅಳತೆಯೇ ಇಲ್ಲ.

■

# ರಾಮಗಿರಿ ಹಿರೇಮಠದ ಜೀರ್ಣೋದ್ಧಾರ ಮತ್ತು ಅಕ್ಷರ ದಾಸೋಹ

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಮಠದ ವ್ಯವಸ್ಥೆ ವಹಿಸಿಕೊಂಡ ಮೇಲೆ ಅವರು ಮೊದಲು ಮಾಡಿದ ಕೆಲಸವೆಂದರೆ ಮಠದ ಜೀರ್ಣೋದ್ಧಾರ ತಮ್ಮ ಸ್ವಂತ ಹಣದಿಂದ ಶಿಥಿಲಗೊಂಡ ಮಠದ ಗೋಡೆಗಳನ್ನು ಬಿಚ್ಚಿ ವ್ಯವಸ್ಥಿತ ರೀತಿಯಲ್ಲಿ ಕಟ್ಟಿಸಿ ಮಠಕ್ಕೆ ನಾವಿನ್ಯತೆಯನ್ನು ತಂದುಕೊಟ್ಟರು. ಮಠಕ್ಕೆ ಬಂದು ಹೋಗುವವರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಯಿತು. ಇದರಿಂದ ರಾಮಗಿರಿ ಹಿರೇಮಠ ಹೊಸ ತಿರುವು ಪಡೆದುಕೊಂಡಿತು. ಮುದ್ರಣ ಸೇವೆಯೊಡನೆ ಸಮಾಜ ಸೇವೆಗೂ ಅವಕಾಶ ದೊರಕಿತೆಂದು ಶಾಸ್ತ್ರಿಗಳು ಮನದಲ್ಲಿಯೇ ಹಿರಿ ಹಿರಿ ಹಿಗ್ಗಿದರು. ಮಠದ ಹಿರಿಯ ಸ್ವಾಮಿಗಳಾದ ಶ್ರೀ ಶಿವಶಂಕರ ಶಿವಾಚಾರ್ಯರಿಗೂ ವ್ಯವಸ್ಥಿತ ಸ್ನಾನ, ಪೂಜೆ, ಅನುಭಾವ ಪ್ರಸಾದಕ್ಕೂ, ಅವರ ದರ್ಶನಕ್ಕೂ ಬಂದು ಹೋಗುವ ಶಿಷ್ಯ ಬಳಗಕ್ಕೂ, ಅತಿಥಿ ಅಭ್ಯಾಗತರಿಗೂ ಪ್ರಸಾದ ವ್ಯವಸ್ಥೆ ಇರುತ್ತಿತ್ತು.

ಅದರಂತೆ ನಿಸ್ತೇಜಗೊಂಡ ಗೋಡಿಹಾಳ ಮಠ, ನಾಯ್ಕಲ್ಲ ಸ್ಥಾವರ ಮಠ ಬೆಳಗೇರಿ ಮಠಗಳನ್ನು ಜೀರ್ಣೋದ್ಧಾರಗೊಳಿಸಿದರು ಶಾಸ್ತ್ರಿಗಳ ಸಾಹಸ ಪ್ರಾಮಾಣಿಕ ಪ್ರಯತ್ನದಿಂದ ಎಲ್ಲ ಅವರ ಬಂಧು ಬಳಗದವರು ನೆಂಟರಿಷ್ಟರು ಒಬ್ಬೊಬ್ಬರಿಗೊಬ್ಬರು ಪ್ರೀತಿ–ವಿಶ್ವಾಸದಿಂದ ಕೂಡಿ ಬಾಳುತ್ತಿದ್ದರು. ಎಲ್ಲರೂ ಒಂದಿಲ್ಲ ಒಂದು ಕೆಲಸದಲ್ಲಿ ತೊಡಗಿ ಸುಖ–ಸಂತೋಷದಿಂದ ಕಾಲ ಕಳೆಯ ತೊಡಗಿದರು. ಎಲ್ಲಾ ಸಹೋದರ ಸಹೋದರಿಯರು ಸಂತಾನ ಸಂಪತ್ತಿನಿಂದಲೂ ಧನ ಸಂಪತ್ತಿನಿಂದಲೂ ಆಯುರಾರೋಗ್ಯ, ಭಾಗ್ಯಪಡೆದು ಒಬ್ಬರಿಗೊಬ್ಬರು ಹಿತೈಷಿಗಳಾಗಿ ಬಾಳುತ್ತಿದ್ದರು ಶಾಸ್ತ್ರಿಗಳು ತಮ್ಮ ಶ್ರಮ ಸಾರ್ಥಕವಾಗ ತೊಡಗಿದೆ ಎಂದು ಅವರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಭಗವಂತ ತಮ್ಮ ಮೇಲೆ ತೋರಿಸಿದ ಕೃಪೆಗೆ ನಾವೆಷ್ಟು ಕೃತಜ್ಞತೆ ಅರ್ಪಿಸಿದರೂ ಕಡಮೆಯೇ ಸರಿ ಎಂದು ಹಗಲಿರುಳು ಆ ಪರಮದಯಾಳು ಪರಶಿವನ ಧ್ಯಾನದಲ್ಲಿಯೇ ಇರುತ್ತಿದ್ದರು. ಶಾಸ್ತ್ರಿಗಳಿಗೆ "ಕಾಯಕ–ದಾಸೋಹ" ತುಂಬ ಇಷ್ಟವೆನಿಸಿದವು.

ಶ್ರೀ ಶಂಕರಾನಂದ ಪ್ರೆಸ್ಸಿಗೆ ಮುದ್ರಣದ ಕೆಲಸಕ್ಕೆ ಬಂದ ಸ್ವಾಮಿಗಳ ಸ್ನಾನ, ಪೂಜೆ, ಪ್ರಸಾದ ರಾಮಗಿರಿ ಹಿರೇಮಠದಲ್ಲಿಯೇ ಆಗತೊಡಗಿತು. ಪುಸ್ತಕ ಮುದ್ರಣಕ್ಕಾಗಿ ಹೊರಗಿನಿಂದ ಆಗಮಿಸುತ್ತಿದ್ದ ಕವಿಗಳಿಗೂ, ಸಾಹಿತಿಗಳಿಗೂ, ನಾಟಕ ಕಾರರಿಗೂ ಶಾಸ್ತ್ರಿಗಳು ಬಹಳ ಗೌರವದಿಂದ ಕಾಣುತ್ತಿದ್ದರು. ಅವರಿಗಾಗಿ ಮಠದಲ್ಲಿ ಮಧ್ಯಾಹ್ನದ ಪ್ರಸಾದ ವ್ಯವಸ್ಥೆಯೂ ಇರುತ್ತಿತ್ತು. ಕೆಲವರು ಸಂಜೆಗೆ ಉಳಿದರೆ ರಾತ್ರಿ ಪ್ರಸಾದ ಮಠದಲ್ಲಿಯೇ ಆಗುತ್ತಿತ್ತು. ಹೀಗೆ ಹನ್ನೆರಡನೆಯ ಶತಮಾನದಲ್ಲಿ ಅಣ್ಣ ಬಸವಣ್ಣನವರು ಪ್ರಾರಂಭ ಮಾಡಿದ ಅಕ್ಷರ ದಾಸೋಹ ಶ್ರೀ ಶಂಕರಾನಂದ ಮುದ್ರಣಾಲಯಕ್ಕೆ ಅಚ್ಚು ಹಾಕಿಸಲು ಬಂದ ಅತಿಥಿ ಅಭ್ಯಾಗತರಿಗೆ ಅಕ್ಷರ ದಾಸೋಹ ಶಾಸ್ತ್ರಿಗಳು ತಪ್ಪದೇ ನಡೆಸಿಕೊಂಡು ಬಂದರು, ಅದರಿಂದ ಮಠದ ಕೀರ್ತಿಯೂ ಹಬ್ಬಿತು. ಮುದ್ರಣಾಲಯದ ವಾರ್ತೆಯೂ ಹರಡಿತು.

ಮುದ್ರಣಾಲಯದಲ್ಲಿ ಕೆಲಸ ಮಾಡುವ ಎಲ್ಲ ಸಿಬ್ಬಂದಿಗೆ ಅದೇ ಆಗ ಹಣಿಕೆ ಹಾಕಿದ ಚಹಾ ಸಮಾಜದಲ್ಲಿ, ಮನೆಯಲ್ಲಿ ಕಛೇರಿಗಳಲ್ಲಿ, ಜಾತ್ರೆ ,ಮದುವೆ, ಮುಂಜಿಗಳಂತಹ ಕಾರ್ಯಕ್ರಮದಲ್ಲಿ ತುಂಬ ಮಾನ್ಯತೆ ಪಡೆದಿತ್ತು ಗುರುಸಿದ್ಧ ಶಾಸ್ತ್ರಿಗಳು ಮುಂಜಾನೆ ೧೧ ಗಂಟೆಗೆ ಮತ್ತು ಸಂಜೆ ೫ ಗಂಟೆಗೆ ಎರಡು ಸಮಯ ಮುದ್ರಣಾಲಯದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ 'ಚಹಾದ' ವ್ಯವಸ್ಥೆ ಮಾಡಿದರು, ಅದರಿಂದ ಎಲ್ಲ ಕೆಲಸಗಾರರು ತುಂಬ ಖುಷಿಯಿಂದ ಬೇಸರವಿಲ್ಲದೆ ಕೆಲಸ ಮಾಡುತ್ತಿದ್ದರು. ರಾತ್ರಿ ೮.೩೦ರ ವರೆಗೆ ಮುದ್ರಣಾಲಯದಲ್ಲಿ ಕೆಲಸ ನಡೆಯುತ್ತಿತ್ತು. ಕೆಲಸಗಾರರೊಡನೆ ಶಾಸ್ತ್ರಿಗಳು ಬೇಸರವಿಲ್ಲದೆ ಅವರೊಡನೆ ನಗು ನಗುತ್ತ ಕೆಲಸ ಮಾಡುತ್ತಿದ್ದರು. "ದುಡಿತವೇ ದುಡ್ಡಿನ ತಾಯಿ" ಎಂದು ಹೇಳಿ ಎಲ್ಲರಿಗೂ ದುಡಿಯಲು ಹಚ್ಚುತ್ತಿದ್ದರು.

■

# ನಿಜಾಂ ಪ್ರಾಂತದಲ್ಲಿ ಕನ್ನಡ ಕಟ್ಟಿದವರು

ರಾಜಕೀಯ (ಇತಿಹಾಸ) ವಿರಳಿತದಿಂದ ಕನ್ನಡ ಭಾಷೆ ಅನೇಕ ಸಲ ಆಘಾತಕ್ಕೊಳಗಾಗಿ ಅದಃ ಪತನಕ್ಕೀಡಾಯಿತು ಕನ್ನಡ ಭಾಷೆ ನುಚ್ಚು ನೂರಾಗಿ ಹರಿದು ಹಂಚಿ ಹೋಯಿತು. ಈ ಮಾತಿಗೆ ಕಲ್ಯಾಣ ಕರ್ನಾಟಕವೇ ಸಾಕ್ಷಿ "ಕುರಿ ತೋದದೆಯಿಂದ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಇದ್ದ ಈ ನಾಡಿನಲ್ಲಿ ಅಸಂಖ್ಯಾತ ಶರಣರು ಕಲ್ಯಾಣದಲ್ಲಿ ನೆಲೆಸಿ ಅನುಭವಮಂಟಪದಲ್ಲಿ ಬಸವಾದಿ ಶರಣರ ಮಾರ್ಗದರ್ಶನದಲ್ಲಿ ವಚನ ರಚನೆ ಮಾಡಿ ಸಾಮಾಜಿಕ, ಧಾರ್ಮಿಕ ಕ್ರಾಂತಿಮಾಡಿದ ಈ ಪುಣ್ಯದ ಬೀಡಿನಲ್ಲಿ "ಈಸ ಬೇಕು ಇದ್ದು ಜೈಸ ಬೇಕು" ಎಂದು ಹರಿದಾಸರು ಹಾಡಿದ ಈ ಗಂಡು ಮೆಟ್ಟಿನ ನೆಲದಲ್ಲಿ ಇದ್ದಕ್ಕಿದಂತೆ ಬಹುಮನಿ ರಾಜ್ಯ ಸ್ಥಾಪನೆಯಾಯಿತು. ಮೆಲ್ಲನೆ ಕನ್ನಡ ಭಾಷೆ, ಸಂಸ್ಕೃತಿ, ಸಭ್ಯತೆಗೆ ದಕ್ಕೆ ತಗುಲ ತೊಡಗಿತು. ಅಚ್ಚ ಕನ್ನಡ ನೆಲದಲ್ಲಿ ಉರ್ದು, ಪಾರಷಿ ಭಾಷೆಗಳು ಹಣಿಕೆ ಹಾಕಿದವು. ಕೊನೆಗೆ ಅಕ್ಷರ ಸಂಸ್ಕೃತಿ ಅಳಿದು, ಅಜ್ಞಾನ ಮೂಢನಂಬಿಕೆ, ಅಂಧಾನುಕರಣೆಗಳು ಗೊಡ್ಡು ಆಚರಣೆಗಳು ಮನೆ ಮಾಡತೊಡಗಿದವು. ಬಹುಮನಿ ಸುಲ್ತಾನರ ನಂತರ ಬಹಳ ದುರ್ಧೈರ್ವದಿಂದ ಮತ್ತೆ ಈ ಪ್ರದೇಶ ಹೈದರಾಬಾದ ನಿಜಾಮರ ಆಡಳಿತಕ್ಕೆ ಒಳಗಾಗಿ ಸತತ ಆರು ನೂರು ವರ್ಷಗಳ ಕಾಲ ಕನ್ನಡಿಗರು ತಮ್ಮ ನೆಲದಲ್ಲಿಯೇ ತಾವು ಪರಕೀಯರಾಗಿ ಬಾಳ ತೊಡಗಿದರು. ನಿಜಾಂ ಸಂಸ್ಥಾನದಲ್ಲಿ ಉರ್ದು ರಾಜ್ಯ ಭಾಷೆಯಾಗಿ ಕಂಗೊಳಿಸತೊಡಗಿತು. ನೂರಕ್ಕೆ ೮೫ರಷ್ಟು ಹಿಂದುಗಳ ಮಾತೃ ಭಾಷೆ ಕನ್ನಡ; ಈ ಕನ್ನಡಿಗರಿಗೂ ಕನ್ನಡ ಭಾಷೆಗೂ ನಿಜಾಂ ಪ್ರಾಂತದಲ್ಲಿ ಓದು, ಬರಹಕ್ಕೂ ಆಸ್ಪದವೇ ಇರಲಿಲ್ಲ, ಶಿಕ್ಷಣದ ಸೌಲಭ್ಯವಿಲ್ಲದ ಹಿಂದುಗಳು ತಮ್ಮ ಮಾತೃ ಭಾಷೆ ಕನ್ನಡದಲ್ಲಿ ಮಾತನಾಡುತ್ತಿದ್ದರು. ಯಾರೊ ಒಬ್ಬರು ಎಲ್ಲಿಯೋ ಹೋಗಿ ಕನ್ನಡ ಕಲಿತು ಕನ್ನಡದಲ್ಲಿ ಓದುತ್ತ ಬರೆಯುತ್ತಲಿದ್ದರು. ಇನ್ನು ಕೆಲವರು ಕನ್ನಡ ಭಾಷೆಯನ್ನೆ ಮೋಡಿ, ಮರಾಠಿ ಲಿಪಿಯಲ್ಲಿ ಬರೆದಿಡುತ್ತಿದ್ದರು.

ನೂರಕ್ಕೆ ೮೫ ರಷ್ಟು ಹಿಂದುಗಳಿದ್ದ ಈ ಪ್ರಾಂತದಲ್ಲಿ ಅನೇಕ ಜನ ತತ್ವ ಪದಕಾರರು, ವಚನಕಾರರು, ಕಾಲಜ್ಞಾನಿಗಳು, ಕವಿಗಳು ಆಶುಕವಿಗಳು ಜಾನಪದ ಕವಿ, ಕಲಾವಿದರು ಸಾಹಿತಿಗಳು ಆಗಿ ಹೋಗಿದ್ದಾರೆ. ಅದಲ್ಲದೆ ಈ ಭಾಗದ ಕೃಷಿ

ಕಾರ್ಮಿಕರು ತಮ್ಮ ಕಾಯಕದೊಡನೆ ಹಾಡಿದ ಜನಪದ ಸಾಹಿತ್ಯ ಮಾಡಿದ ಸಣ್ಣಾಟಗಳು, ಪ್ರದರ್ಶಿಸಿದ ದೊಡ್ಡಾಟಗಳು. ಆಡಿದ ನಾಟಕಗಳು ಈ ಸಂರ್ಭದಲ್ಲಿ ರಚನೆಯಾದ ಕೀರ್ತನೆಗಳು ಲೆಕ್ಕವಿಲ್ಲದಷ್ಟು ರಚನೆಗೊಂಡವು. ಹೀಗೆ ರಚನೆಗೊಂಡ ಸಾಹಿತ್ಯ ಸಂರಕ್ಷಿಸುವುದೂ ಅಷ್ಟೇ ಕಷ್ಟದ ಕೆಲಸವಾಗಿತ್ತು. "ಕಾವ್ಯತೀರ್ಥ" ಪದವೀಧರರಾದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಕನ್ನಡ, ಮರಾಠಿ, ಉರ್ದು, ಸಂಸ್ಕೃತ, ಇಂಗ್ಲೀಷ್ ಭಾಷೆಯಲ್ಲಿ ತುಂಬ ಕೃಷಿ ಮಾಡಿದ ವ್ಯಕ್ತಿಗಳು ಶ್ರೀಯುತರು ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಕನ್ನಡದಲ್ಲಿ ಬರೆದ ಕೃತಿಗಳನ್ನು ಪರಿಶೀಲಿಸಿ ಹಸ್ತ ಪ್ರತಿ ಶುದ್ಧಿಗೊಳಿಸಿ ಸುಂದರವಾಗಿ ಮುದ್ರಿಸಿ ಜನರಿಗೆ ತಲುಪಿಸುತ್ತಿದ್ದರು. ಅದರಿಂದ ಶ್ರೀ ಶಂಕರಾನಂದ ಮುದ್ರಣಾಲಯಕ್ಕೆ ಅನೇಕ ಜನ ಸಾಹಿತಿಗಳು, ಕವಿಗಳು ನಾಟಕಕಾರರು ಪುರಾಣ ರಚನೆಯ ಪುರಾಣಿಕರು ತಮ್ಮ ತಮ್ಮ ಹಸ್ತ ಪ್ರತಿಗಳೊಂದಿಗೆ ಶಂಕರಾನಂದ ಮುದ್ರಣಾಲಯಕ್ಕೆ ಬರುತಿದ್ದರು. ಶಾಸ್ತ್ರಿಗಳು ಈ ಹಸ್ತ ಪ್ರತಿಗಳನ್ನು ಓದಿ ತಪ್ಪಿದ್ದಲ್ಲಿ ತಿದ್ದಿ ಸರಿಪಡಿಸಿ 'ಮಳಿ' ಜೋಡಿಸಲು ಕಳುಹಿಸುತ್ತಿದ್ದರು. ಮೊದಲು ಗ್ಯಾಲಿ ಪ್ರುಫ್, ಎರಡನೇ ಸಲ ಪೇಜ ಪ್ರುಫ್ ಮೂರನೆಯ ಸಲ ಮಶಿನ್ ಪ್ರುಫ್ ಹೀಗೆ ಮೂರು ಸಲ ಕರಡು ಪ್ರತಿ ತಿದ್ದಿ ಮತ್ತೊಮ್ಮೆ ಮಗದೊಮ್ಮೆ ತಾವೇ ನೋಡಿ ತಿದ್ದಿ, ತೀಡಿ ಅಚ್ಚು ಕಟ್ಟಾದ ಮುನ್ನುಡಿಯೋ ಹಿನ್ನುಡಿಯೋ ಚೆನ್ನುಡಿಯೋ ಅಭಿಪ್ರಾಯಗಳೊಂದಿಗೆ ಮುದ್ರಿಸಿ ಕೊಡುತ್ತಿದ್ದರು. ಯಾವುದೇ ಕೃತಿ ಶ್ರೀ ಶಂಕರಾನಂದ ಮುದ್ರಣದಲ್ಲಿ ಮುದ್ರಣಗೊಂಡಿದೆ ಎಂದರೆ ಆ ಕೃತಿಗೆ ಹೆಸರಿಡುವವರೇ ಇರಲಿಲ್ಲ. ಇಂತಹ ಒಂದು ವ್ಯವಸ್ಥಿತ ಮುದ್ರಣದ ವ್ಯವಸ್ಥೆ ಆ ಕಾಲದಲ್ಲಿ ಯಾದಗಿರಿಯಲ್ಲಿತ್ತು. ಇದನ್ನು ಬಿಟ್ಟರೆ ಕಲಬುರ್ಗಿಯಲ್ಲಿ ಶ್ರೀ ಶರಣಯ್ಯ ಸ್ವಾಮಿ ಮಹಾಗಾಂದ ಅವರು ನಡೆಸುವ "ಕಲ್ಯಾಣ ಕರ್ನಾಟಕ ಪ್ರೆಸ್" ಈ ಎರಡೇ ಪ್ರೆಸ್ಸುಗಳು ಇದ್ದು ಕನ್ನಡ ಭಾಷೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿವೆಯೆಂದು ಹೇಳಬಹುದು.

೧೯೪೨ರಿಂದ ೧೯೪೮ರ ವರೆಗೆ ಹೈದರಾಬಾದ ಸಂಸ್ಥಾನದ ಜನರು ಒಂದಿಲ್ಲ ಒಂದು ಸಮಸ್ಯೆಯಿಂದ ತಮ್ಮೊಳಗೆ ತಾವೇ ಕುದಿಯುತ್ತಿದ್ದರು. ಒಂದು ಕಡೆ ಭಾಷೆಯ ಗೊಂದಲ, ಇನ್ನೊಂದು ಕಡೆ ಧಾರ್ಮಿಕ ಅಡೆ–ತಡೆ, ಮತ್ತೊಂದು ಕಡೆ ರಾಜಕೀಯ ಗೊಂದಲ ಯಾರ ಮನಸ್ಸಿಗೂ ಸಮಾಧಾನವಿಲ್ಲ. ಶಾಂತಿ ಇಲ್ಲ.

ಆಗ ಭಾರತ ದೇಶದಲ್ಲಿ ೧೯೪೨ರಲ್ಲಿ ಘೋಷಣೆಯಾದ "ಭಾರತ ಬಿಟ್ಟು ತೊಲಗಿ" "ಚಲೇಜಾವ ಚಳುವಳಿ" "ಮಾಡುಇಲ್ಲವೇ ಮಡಿ" ಘೋಷಣೆಗಳು ಸಮಾಜದಲ್ಲಿ ಅತ್ಯಂತ ಉಗ್ರ ರೂಪ ತಾಳಿ 'ಸ್ವಾತಂತ್ರ್ಯ ಜ್ವಾಲೆ' ಎಲ್ಲೆಡೆಗೂ ಹರಡಿತ್ತು. ಈ ಬಿಸಿ ನಿಜಾಂ ಪ್ರಾಂತದಲ್ಲಿಯೂ ಹರಡಿದ್ದರೂ ನಿಜಾಮರ

ಕಪಿಮುಷ್ಠಿಯಲ್ಲಿದ್ದ ಈ ಪ್ರಾಂತದ ಜನರು ತುಟಿ ಪಿಟಿಕೆನ್ನದೇ ನಮ್ಮಷ್ಟಕ್ಕೆ ತಾವೇ ಕುದಿಯುತ್ತಿದ್ದರು.

ಇಂತಹ ಸಂದರ್ಭದಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮ್ಮ ರಾಮಗಿರಿ ಕಟ್ಟಿಮನಿ ಹಿರೇಮಠ ಆಶ್ರಯದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸುಧಾರಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ ಅರಿವು–ಆಚಾರ ಮೂಡಿಸಿ ಜಾಗೃತ ಗೊಳಿಸುತ್ತಿದ್ದರು. ಶ್ರೀ ಶಂಕರಾನಂದ ಮುದ್ರಣಾಲಯದ ಮೂಲಕ ಕನ್ನಡ ಭಾಷೆ, ಸಾಹಿತ್ಯ ಸಂರಕ್ಷಣೆಯಲ್ಲಿ ತೊಡಿಗದ್ದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮಗೆ ಲಾಭ ದೊರಕಲಿ ಎಂದು ತಮ್ಮಲ್ಲಿ ಮುದ್ರಣಕ್ಕೆ ಬರುತ್ತಿದ್ದ ಪುರಾಣಗಳು ಮುದ್ರಿಸುತ್ತಿರಲಿಲ್ಲ ನಮ್ಮ ಭಾಗದ ಶರಣರನ್ನು ಮಹಾತ್ಮರನ್ನು ಕುರಿತು ಬರೆದ 'ಪುರಾಣಗಳು' ಚರಿತ್ರೆಗಳು' ನಾಮಾವಳಿಗಳು, ವಚನಗಳು ಇವು ಜನರಿಗೆ ತಲುಪಲಿ ಎಂದು ಅಷ್ಟೇ ಭಕ್ತಿ–ಭಾವಗಳಿಂದ ಮುದ್ರಣ ಮಾಡಿಕೊಡುತ್ತಿದ್ದರು. ಪುಸ್ತಕಗಳನ್ನು ಮುದ್ರಣ ಮಾಡಿಸಿಕೊಳ್ಳಲು ಬಂದವರು ತಮ್ಮಲ್ಲಿದ್ದಷ್ಟು ಹಣ ಕೊಟ್ಟು ಇನ್ನುಳಿದ ಹಣ ಈ ಕೃತಿಗಳನ್ನು ಮಾರಾಟ ಮಾಡಿ ಹಣ ಕೊಡುತ್ತೇನೆ ಎಂದು ಹೇಳಿದವರಿಗೂ ಆಮೇಲೆ ನೆನಪಿನಿಂದ ತಂದು ಕೊಡಿ ಎಂದು ನಗುನಗುತ್ತಲೇ ಹೇಳುತ್ತಿದ್ದರು ಯಾದಗಿರಿಯಲ್ಲಿ ಶ್ರೀ ಶಂಕರಾನಂದ ಮುದ್ರಣಾಲಯ ಇತ್ತೆಂದು ಅಲ್ಲಿ ಜಿ.ಎಂಗುರುಸಿದ್ಧ ಶಾಸ್ತ್ರಿಗಳು ಇದ್ದಾರೆಂದು ಈ ಭಾಗದಲ್ಲಿ ಕನ್ನಡ ಕಟ್ಟುವ ಕೆಲಸ ನಡೆಯುತ್ತೆಂದು ಜನರು ಮಾತಾಡ ತೊಡಗಿದರು.

ಶಹಪುರದಿಂದ ಚರ ಬಸವೇಶ್ವರರ ಭಕ್ತ ವೃಂದ ತಮ್ಮ ಆರಾಧ್ಯ ದೈವ "ಚರ ಬಸವೇಶ್ವರರಪುರಾಣವ"ನ್ನು ರಚನೆ ಮಾಡಿಸಿ ಅದನ್ನು ಮುದ್ರಣ ಮಾಡಬೇಕೆಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಕಡೆ ಬಂದರು ಆಗ ಶಾಸ್ತ್ರಿಗಳು ಶಹಾಪುರ ಭಕ್ತ ವೃಂದವನ್ನು ಕಟ್ಟಿಕೊಂಡು ರಾಯಚೂರಿಗೆ ಹೋದರು ಅಲ್ಲಿ ಕವಿರತ್ನ ಅಷ್ಟ ಭಾಷಾ ಪ್ರವೀಣರಾದ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಜ್ಯೋತಿಪುರ ಅವರಿಗೆ ಭೇಟಿ ಮಾಡಿಸಿ ಪುರಾಣ ಬರೆಯಿಸಲು ಅರಿಕೆ ಮಾಡಿಕೊಂಡರು. ಆಗ ಜ್ಯೋತಿಪುರ ಶಾಸ್ತ್ರಿಗಳು "ತಾವು ನನಗೆ ಶಹಾಪುರ ಚರ ಬಸವೇಶ್ವರ ಜೀವನ ಚರಿತ್ರೆ ಒದಗಿಸಿದರೆ ನಾನು ಆಮೇಲೆ ಪುರಾಣ ಬರೆಯಬಲ್ಲೆ" ಎಂದು ಹೇಳಿದರು. ಈ ಮಾತು ಕೇಳಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಬಹಳ ಸುಂದರವಾಗಿ ಚರ ಬಸವೇಶ್ವರ ಚರಿತ್ರೆ ಬರೆದುಕೊಟ್ಟರು. ಆ ಮೇಲೆ ಶಾಸ್ತ್ರಿಗಳು ಬರೆದ ಚರಿತ್ರೆ ಪುಸ್ತಕ ಓದಿ ಜ್ಯೋತಿಪುರ ಚಂದ್ರಶೇಖರ ಶಾಸ್ತ್ರಿ ಚರ ಬಸವೇಶ್ವರ ಪುರಾಣ ಬರೆದುಕೊಟ್ಟರು. ಈ ಪುರಾಣವನ್ನು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಶಂಕರಾನಂದ ಪ್ರಿಸ್ಸಿನಲ್ಲಿ ಮುದ್ರಿಸಿ ಕೊಟ್ಟರು ಇದೇ ಪ್ರಕಾರ ಜ್ಯೋತಿಪುರ ಚಂದ್ರಶೇಖರ ಶಾಸ್ತ್ರಿಗಳು

ಅವರ ಕಡೆಯಿಂದ ಯಾದಗಿರಿ ತಾಲೂಕಿನ ತುಮಕೂರಿನ ಶ್ರೀ ವಿಶ್ವಾರಾಧ್ಯರ ಪುರಾಣವನ್ನು ಇದೇ ಯಾದಗಿರಿ ತಾಲೂಕಿನ ಚಿಂತನಹಳ್ಳಿಯ ಶ್ರೀ ಗವಿ ಸಿದ್ಧಲಿಂಗೇಶ್ವರ ಪುರಾಣವನ್ನು, ಚಿತ್ತಾಪುರ ತಾಲೂಕಿನ ಮಲಕೂಡದ ಶ್ರೀ ಸೋಮೇಶ್ವರ ಪುರಾಣವನ್ನು ಇದೇ ತಾಲೂಕಿನ ನಾಲ್ವಾರ ಶ್ರೀ ಕೇರಿಸಿದ್ಧೇಶ್ವರ ಪುರಾಣವನ್ನು ಶಾಸ್ತ್ರಿಗಳ ಕಡೆಯಿಂದ ಬರೆಯಿಸಿ ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಸುಧೀರ್ಘ ಪ್ರಸ್ತಾವನೆಯನ್ನು ಬರೆದು ಮುದ್ರಿಸಿಕೊಟ್ಟು ನಿಜಾಂ ಪ್ರಾಂತದ ಕನ್ನಡ ಸಾಹಿತ್ಯ ಸುಧೆಯನ್ನು ಜನರಿಗೆ ಉಣಬಡಿಸಿದರು.

■

## ಬನದೇಶ್ವರ ಸುಪ್ರಭಾತ

ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸ್ವತಃ ಕವಿಗಳಾಗಿದ್ದರು, ಸಾಹಿತಿಗಳಾಗಿದ್ದರು, ಸಂಶೋಧಕರಾಗಿದ್ದರು, ಸಂಘಟಿತರಾಗಿದ್ದರು

ಶಾಸ್ತ್ರಿಗಳು ಯಾದಗಿರಿ ತಾಲೂಕಿನ ಕಾಳೆಬೆಳಗುಂದಿ ಬನದೇಶ್ವರರ ಪರಮ ಭಕ್ತರಾಗಿದ್ದರು. ಯಾದಗಿರಿ ಮತ್ತು ಸುತ್ತ ಮುತ್ತಲಿನ ಬನದೇಶ್ವರರ ಭಕ್ತರಾದುದರಿಂದ ಆ ಭಕ್ತ ಸಮೂಹ ತಮ್ಮ ಹರಕೆಗಳನ್ನು, ಮುಡುಪುಗಳನ್ನು ಸಲ್ಲಿಸಲು ಬೆಳಗುಂದಿ ಬನದೇಶ್ವರ ದೇವಾಲಯಕ್ಕೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಸಹ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಭಕ್ತ ಸಮೂಹದೊಂದಿಗೆ ಹೋಗಿ ಬರುತ್ತಿದ್ದ ಶಾಸ್ತ್ರಿಗಳಿಗೆ ಬನದೇಶ್ವರರ ಮೇಲೆ ಅಪಾರವಾದ ಭಕ್ತಿ ವಿಶ್ವಾಸ ಬೆಳೆದು ಬಂದಿತು. ಬನದೇಶ್ವರ ಮಹಿಮೆಯನ್ನು ಅರಿತ ಶಾಸ್ತ್ರಿಗಳಿಗೆ ಸುಮ್ಮನೇ ಕೂಡ್ರಲಾಗಲಿಲ್ಲ ತಮ್ಮ ಮನಸ್ಸಿನಲ್ಲಿ ಬಂದ ಭಾವನೆಗಳನ್ನು ಕ್ರೋಢಿಕರಿಸಿ ಬನದೇಶ್ವರ ಸುಪ್ರಭಾತವನ್ನು ರಚಿಸಿ ತಮ್ಮ ಮುದ್ರಣಾಲಯದಲ್ಲಿ ಸುಂದರವಾಗಿ ಮುದ್ರಿಸಿ ಪ್ರಕಟಿಸಿದರು. ಈ ಸುಪ್ರಭಾತವನ್ನು ಸಂಗೀತಗಾರರು ತಮ್ಮ ಸುಶ್ರಾವ್ಯವಾದ ಮಧುರ ಕಂಠದಿಂದ ಹಾಡಿ ಭಕ್ತ ವೃಂದದ ಹೃದಯವನ್ನು ತಣಿಸತೊಡಗಿದರು. ಮುಂದೆ ಈ ಸುಪ್ರಭಾತ ಟೇಪ್ ರಿಕಾರ್ಡ್ ಮಾಡಿ "ಕಾಳೆ ಬೆಳಗುಂದಿಯ ಬನದೇಶ್ವರ" ದೇವಾಲಯದಲ್ಲಿ ದಿನಾಲು ಬೆಳಗಿನ ಜಾವ ಈ ಸುಪ್ರಭಾತ ಹಚ್ಚ ತೊಡಗಿದರು. ಆಗ ಗುರುಸಿದ್ಧ ಶಾಸ್ತ್ರಿಗಳ ಕಾವ್ಯ ಶಕ್ತಿ ಎಷ್ಟೆಂಬುದು ಜನರಿಗೆ ಅರ್ಥವಾಯಿತು.

ಇಂದು ಈ ಕಾಳೆ ಬೆಳಗುಂದಿಯ ಬನದೇಶ್ವರ ದೇವಾಲಯ ಬೃಹದಾಕಾರವಾಗಿ ಬೆಳೆದು ನಿಂತಿದೆ. ಅಲ್ಲಿ ನಿತ್ಯ ರುದ್ರಾಭಿಷೇಕ ಸಹಸ್ರ ನಾಮ, ಬಿಲ್ವಾರ್ಚನೆ ನಡೆಯುತ್ತದೆ. ಇದಕ್ಕೆ ಕಾರಣ ಕರ್ತರು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು. ಕಾಳೇ ಬೆಳಗುಂದಿಯ ಬನದೇಶ್ವರ ದೇವಾಲಯದ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿ ಬಹಳ ವರ್ಷ ಸೇವೆ ಸಲ್ಲಿಸದರು. ಈ ಸಂದರ್ಭದಲ್ಲಿ ಭಕ್ತ ಸಮೂಹ ಕಾಳೆ ಬೆಳಗುಂದಿಯ ವನದೇಶ್ವರ ಪುರಾಣ ಬರೆಯಿಸಿ ಪ್ರಕಟಿಸಬೇಕೆಂದು ಶಾಸ್ತ್ರಿಗಳ ಮೊರೆ ಹೊಕ್ಕರು ಶ್ರೀ ಅಮರ ಕವಿಗಳಿಂದ ಬನದೇಶ್ವರ ಪುರಾಣ ಬರೆಯಿಸಿ

ತಮ್ಮ ಮುದ್ರಣಾಲಯದಲ್ಲಿಯೇ ಮುದ್ರಿಸಿದರು. ಈ ಪುರಾಣ ಪ್ರಕಟನೆಗೋಸ್ಕರ ಗುರುಸಿದ್ದ ಶಾಸ್ತ್ರಿಗಳು ತಮ್ಮ ಮುದ್ರಣಾಲಯದ ಕೆಲಸ ಬಿಟ್ಟು ತಿಂಗಳಾನುಗಟ್ಟಲೆ ಅಲೆದಾಡ ಬೇಕಾಯಿತೆಂದು ಇಂದಿಗೂ ಜನ ಮುಕ್ತ ಕಂಠದಿಂದ ಹೊಗಳುತ್ತಾರೆ.

ತಮ್ಮ ಬೀಗರಾದ ಶ್ರೀ ಹಂಪಯ್ಯ ಹಿರೇಮಠ ಆದೋನಿಯವರು ಕಲಬುರ್ಗಿ ಶ್ರೀ ಶರಣ ಬಸವೇಶ್ವರ ಪುರಾಣವನ್ನು ಬರೆಯಿಸಿ ಪ್ರಕಟಿಸಬೇಕೆಂದು ಶಾಸ್ತ್ರಿಗಳ ಮೊರೆ ಹೊಕ್ಕರು. ಆಗ ಶಾಸ್ತ್ರಿಗಳು ಹಂಪಯ್ಯನವರನ್ನು ಕರೆದುಕೊಂಡು ಜೇವರ್ಗಿ ತಾಲೂಕಿನ ಮಾವನೂರು ಗ್ರಾಮಕ್ಕೆ ಕರೆದು ಕೊಂಡು ಬಂದರು. ಅಲ್ಲಿ ಚೆನ್ನ ಬಸವ ಕವಿಗಳು ತುಂಬಾ ಪ್ರತಿಭಾವಂತರು. "ಕಾವ್ಯಕಲಾ ಕೋಗಿಲೆ" ಎಂಬ ಕೀರ್ತಿಗೆ ಭಾಜನರಾಗಿದ್ದರು. ಅವರ ವಂಶಸ್ಥರಿಗೆ ಭೇಟಿಯಾಗಿ ಚೆನ್ನ ಬಸವ ಕವಿಗಳು ರಚಿಸಿದ ಶರಣಬಸವೇಶ್ವರರ ಪುರಾಣ ಪ್ರಕಟಿಸುವ ಸಂಕಲ್ಪ ಇಟ್ಟುಕೊಂಡು ಇಲ್ಲಿಗೆ ಬಂದಿದ್ದೇವೆ " ಎಂದು ಇಬ್ಬರೂ ಅರಿಕೆ ಮಾಡಿಕೊಂಡರು.

ಆಗ ಮಾವನೂರು ಕವಿಗಳ ವಂಶಸ್ಥರು ಶರಣ ಬಸವೇಶ್ವರರ ಪುರಾಣವನ್ನು ದ್ಯಾಂಪುರ ಚೆನ್ನ ಕವಿಗಳು ಮಹಾಗಾಂವದ ಗುರುಲಿಂಗ ಕವಿಗಳು ರಚಿಸಿದ್ದಾರೆ. ಇನ್ನೊಂದು ಯಾತಕ್ಕೆ ಬೇಕು ಎಂದು ಕೇಳಿದರು. ಆಗ ಗುರುಸಿದ್ಧ ಶಾಸ್ತ್ರಿಗಳು 'ಕಲಬುರ್ಗಿ ಶರಣ ಬಸವೇಶ್ವರರು ಇದೇ ತಾಲೂಕಿನ ಅರಳ ಗುಂಡಿಗಿ ಗ್ರಾಮದವರು ಚೆನ್ನ ಬಸವ ಕವಿಗಳು ಇದೇ ತಾಲೂಕಿನವರು. ಪ್ರಗಲ್ಭ ಪಂಡಿತರು ಅವರು ರಚಿಸಿದ ಇನೊಂದು ಪುರಾಣ ಪ್ರಕಟಿಸಿದರೆ ತಪ್ಪೇನಿಲ್ಲ' ಎಂದು ಹೇಳುತ್ತಲೇ ಚೆನ್ನ ಕವಿಗಳ ವಂಶಸ್ಥರು ಒಪ್ಪಿಕೊಂಡು ಅತ್ಯಂತ ಶ್ರದ್ಧೆ ಭಕ್ತಿಯಿಂದ ಪುರಾಣ ಮುದ್ರಿಸಿಕೊಟ್ಟರು. ಈ ಪುರಾಣ ಗುರುಸಿದ್ಧ ಶಾಸ್ತ್ರಿಗಳು ತಮ್ಮ ಮುದ್ರಣಾಲಯದಲ್ಲಿ ಮುದ್ರಿಸಿ ಕೊಟ್ಟರು. ಇಂದು ಈ ಮೂರು ಪುರಾಣಗಳು ಜನಪ್ರಿಯತೆಯನ್ನು ಪಡೆದುಕೊಂಡಿವೆ.

ಶಹಾಪುರ ತಾಲೂಕಿನ ರಸ್ತಾಪುರದ ಶ್ರೀ ಗುರುನಾಥ ರೆಡ್ಡಿ ಗೌಡರು ತಮ್ಮ ಊರಿನ ಶ್ರೀ ಪ್ರಭಲಿಂಗೇಶ್ವರರನ್ನು ಕುರಿತು ಹಾಲುಮತದ ಕವಿಗಳಾದ ಶ್ರೀ ಭೀಮ ಕವಿಗಳು ರಚಿಸಿದ ಪುರಾಣವಿದೆ. ಈ ಪುರಾಣವನ್ನು ಪರಿಶೀಲಿಸಿ ಪ್ರಸ್ತಾವನೆ ಬರೆದು ತಮ್ಮ ಮುದ್ರಣಾಲಯದಲ್ಲಿ ಮುದ್ರಿಸಿಕೊಡಬೇಕೆಂದು ಕೇಳಿಕೊಂಡಾಗ ಗುರುಸಿದ್ಧ ಶಾಸ್ತ್ರಿಗಳು ಈ ಕೆಲಸ ನಾನಲ್ಲದೇ ಮತ್ತಾರು ಮಾಡಬೇಕೆಂದು ಸಂತೋಷದಿಂದ ಒಪ್ಪಿಕೊಂಡು ಮುದ್ರಣ ಕಾರ್ಯ ಮುಗಿಸಿಕೊಟ್ಟರು.

ಹೀಗೆ ಈ ಭಾಗದ ಎಷ್ಟೋ ಕವಿಗಳು ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ

ಅಚ್ಚು ಕಟ್ಟಾಗಿ ಮುದ್ರಣಗೊಳಿಸಿ ನಿಜಾಂ ಪ್ರಾಂತ ಕನ್ನಡ ಸಾಹಿತ್ಯ ಶಾರದೆಯ ಮುಡಿ ಮುಕುಟಕ್ಕೇರಿಸಿದರು.

ಅಫಜಲ ಪೂರ ತಾಲೂಕಿನ ಗೌಡಪ್ಪ ಸಾಧು ಕಡಕೋಳ ಮಡಿನಾಳಪ್ಪನವರ ಪರಮ ಭಕ್ತರು. ಮಡಿವಾಳೇಶ್ವರರು ತಮ್ಮ ಅಪಾರವಾದ ಅನುಭಾವದ ಬೆಳಕಿನಲ್ಲಿ ತತ್ವ ಪದಗಳನ್ನು ರಚಿಸಿದ್ದರು. ಈ ತತ್ವಪದಗಳು ಜನರ ನಾಲಿಗೆಯ ಮೇಲೆ ಉಲಿಯುತ್ತಿದ್ದವು. ನಲಿಯುತ್ತಿದ್ದವು. ಈ ಎಲ್ಲ ತತ್ವ ಪದಗಳನ್ನು ಹಾಡಿಸಿ ಕೇಳಿ ತನಗೆ ಗೊತ್ತಿದ್ದ ಹರಕು ಮುರುಕು ಭಾಷೆಯಲ್ಲಿ ಬರೆದುಕೊಂಡು ಬಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಕಡೆ ಕೊಟ್ಟರು. ಆಗ ಆ ಪುಡಿ ಕಾಗದದಲ್ಲಿದ್ದ ಕಾವ್ಯಸೌರಭ, ತತ್ವಾರ್ಥವನ್ನು ಗಮನಿಸಿ ಸಂತೋಷ ಪಟ್ಟ ಗೌಡಪ್ಪ ಸಾಧುಗಳನ್ನು ತಮ್ಮ ಮಠದಲ್ಲಿ ಇಟ್ಟುಕೊಂಡು ಆ ಎಲ್ಲ ಪದ್ಯಗಳನ್ನು ಹಾಡಿಸಿ ತಾವೂ ಓದಿ ಹಾಡುಗಳನ್ನು ಸರಿಪಡಿಸಿ "ಕೈವಲ್ಯ ವಾಕ್ಯಾಮೃತ" ಎಂದು ಹೆಸರಿಟ್ಟು ತುಂಬ ಅಚ್ಚು ಕಟ್ಟಾಗಿ ಮುದ್ರಿಸಿ ಕೊಟ್ಟರು. ಹಾಗೆ ಕೊಡುವಾಗ ಮುದ್ರಣದ ವೆಚ್ಚ ಎಂದು ಕೊಡುತ್ತೀರಿ ಎಂದು ಶಾಸ್ತ್ರಿಗಳು ಕೇಳಲಿಲ್ಲ. "ತನ್ನತಾ ತಿಳಿದ ಮೇಲೆ ಇನ್ನೇನಿನ್ನೇನು?" ಎಂದು ಹಾಡಿದ ಕಡಕೋಳ ಮಡಿವಾಳಪ್ಪನವರ ತತ್ವ ಪದ ಸಂಗ್ರಹಿಸಿ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡ ಗೌಡಪ್ಪ ಸಾಧು ಮುದ್ರಣದ ಖರ್ಚು ತೀರಿಸದೇ ಬಿಟ್ಟಾರೆಯೇ? ಹಳ್ಳಿ ಹಳ್ಳಿಗೆ ಸಂಚರಿಸಿ ಆ ಪುಸ್ತಕವನ್ನು ಮಾರಿ ಹಣ ಕೂಡಿಸಿ ಒಂದು ಪೈಸ ಸಹ ಉಳಿಸಿಕೊಳ್ಳದೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಋಣದಿಂದ ಮುಕ್ತರಾದರು. ಇಂದಿಗೂ ಅವರು ರಚಿಸಿದ ತತ್ವ ಪದಗಳನ್ನು ಜನರು ಹಾಡಿ ತಮ್ಮ ಜೀವನದಲ್ಲಿ ಧನ್ಯತೆಯನ್ನು ಪಡೆದುಕೊಳ್ಳುತ್ತಲಿದ್ದಾರೆ. ಕಡಕೋಳ ಮಡಿವಾಳಪ್ಪನವರು ರಚಿಸಿದ "ನಿಜ ಲೀಲಾಮೃತ" ವಚನಗಳನ್ನು ಶಾಸ್ತ್ರಿಗಳೇ ಮುದ್ರಿಸಿ ಅವುಗಳನ್ನು ಬೆಳಕಿಗೆ ತಂದರು.

ಕೂಡಲೂರು ಬಸವಲಿಂಗಪ್ಪನವರು ರಚಿಸಿದ ಭಜನೆಯ ಹಾಡು ಜೇವರ್ಗಿ ತಾಲೂಕಿನ ರಾಮಪುರ ಬಕ್ಕಪ್ಪಯ್ಯನವರ ತತ್ವಪದ ಸ್ವರ ವಚನಗಳು ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿಯೇ ಅಚ್ಚು ಕಂಡು ಜನರ ನಾಲಿಗೆಯ ಮೇಲೆ ನಲಿದಾಡ ತೊಡಗಿದವು.

ಅದು ಒಂದಿಷ್ಟು ಪುರಾಣ ಕಾಲ. ಬಹಳ ಜನ ಅನಕ್ಷರಸ್ಥರಿದ್ದ ಆ ದಿನಗಳಲ್ಲಿ ಶ್ರಾವಣ ಮಾಸದಲ್ಲಿ ಇನ್ನಿತರ ಪವಿತ್ರ ದಿನಗಳಲ್ಲಿ ಪುರಾಣ ಹಚ್ಚಿ ಜನರಿಗೆ ತಿಳುವಳಿಕೆ ನೀಡಲಾಗುತ್ತಿತ್ತು. ಈ ದಿಸೆಯಲ್ಲಿ ರಚನೆಗೊಂಡ ಪುರಾಣ-ಕೀರ್ತನೆಗಳು ನಾಮಾವಳಿಗಳು ಜನರಿಗೆ ಜ್ಞಾನಾಮೃತವನ್ನು ನೀಡುತ್ತಿದ್ದವು. ಹೀಗೆ ರಚನೆಗೊಂಡ ಪುರಾಣಗಳು ಮುದ್ರಣದ ಸೌಲಭ್ಯವಿಲ್ಲದೆ ಹಾಗೆ ಉಳಿದುಕೊಂಡಿದ್ದವು. ಶ್ರೀ

ಶಂಕರಾನಂದ ಮುದ್ರಣಾಲಯದಲ್ಲಿ ಮುದ್ರಣಗೊಳ್ಳುವ ವಿಷಯ ತಿಳಿಯುತ್ತಲೇ ಚಿಂಚನಸೂರ ಸಿದ್ಧಮಲ್ಲೇಶ್ವರ ಪುರಾಣ, ಬಿಲ್ವ ಮಹಾತ್ಮೆ ಪುರಾಣ, ಗೆಜ್ಜೆ ಬಾವಿಯ ರುದ್ರ ಸ್ವಾಮಿಗಳ ಪುರಾಣ, ಗುಡಗುಂಟೆಯ ಅಮರೇಶ್ವರ ಪುರಾಣ, ಘನಮಠದ ನಾಗಭೂಷಣ ಶಿವಯೋಗಿಗಳ ಪುರಾಣ, ಜಾನೆ ಕಲ್ಲ ರುದ್ರ ವಿಜಯ ಪುರಾಣಗಳು, ಆಂದೋಲದ ಕರುಣೇಶ್ವರ ಪುರಾಣ, ಸಾಲುಗಟ್ಟಿ ಬಂದು ಮುದ್ರಣಗೊಂಡು ಜನರ ಕೈ ಸೇರಿದವು.

ಶಾಸ್ತ್ರಿಗಳ ಸಮಾಜ ಸೇವೆಯೊಂದಿಗೆ ಮಾಡಿದ ಸಾಹಿತ್ಯ ಸೇವೆ ಅಮೂಲ್ಯವೂ, ಅಪಾರವೂ ಆಗಿದೆ. ಡಾ.ವಿ.ಶಿವಾನಂದ ಸಂಪಾದಿತ ಗುಂಜಿ ಹಳ್ಳಿಯ ಷಡಕ್ಷ ಕವಿಗಳು ರಚಿಸಿದ ಷಣ್ಮುಖ ಶಿವಯೋಗಿಗಳ ಪುರಾಣ, ಗುಲಬರ್ಗಾ ಚೌದಾಪುರಿ ಶ್ರೀಗಳಿಗೆ ಅರ್ಪಿಸಿದ ಸಂಭಾವನಾ ಗ್ರಂಥ 'ಅರಳು' ಎ.ಕೆ.ರಾಮೇಶ್ವರರ "ಶರಣು ಶರಣಾರ್ಥಿ" ಬೋಧಿವೃಕ್ಷದ ಹಣ್ಣು ಚೀನಾದರಾಕ್ರಮಣ ನಾಟಕ ಬಿ.ಎ.ಸನದಿ ಅವರ "ಹಿಮಗಿರಿಯ ಮುಡಿಯಲ್ಲಿ" ಕವನ ಸಂಕಲನ ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಅಚ್ಚಾಗಿ ಜನರ ಕೈ ಸೇರಿದವು. ಹೀಗೆ ಶಾಸ್ತ್ರಿಗಳು ಕನ್ನಡಕ್ಕೆ ಮನ್ನಣೆಯಿಲ್ಲದ ಕಾಲದಲ್ಲಿ ಕನ್ನಡ ಕಟ್ಟಿ ಕನ್ನಡಿಗರ ಕಣ್ಮಣಿಯಾದದ್ದು ಸಾಮಾನ್ಯ ಸಂಗತಿ ಏಲ್ಲವೆ?

■

# ಶ್ರೇಷ್ಠ ಸಾಹಿತಿ, ಉತ್ತಮ ವಾಗ್ಮಿ

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಮುದ್ರಣಾಲಯದ ಬಿಡುವಿಲ್ಲದ ಕೆಲಸದಲ್ಲಿಯೂ ತಾವು ಓದುವುದನ್ನು ಬರೆಯುವುದನ್ನು ನಿಲ್ಲಿಸಿದವರಲ್ಲ. ನಸುಕಿನ ಐದು ಗಂಟೆಗೆ ಎದ್ದು ಶರಣ ಫ.ಗು.ಹಳಕಟ್ಟಿ ಅವರು ರಚಿಸಿದ "ವಚನ ಶಾಸ್ತ್ರ ಸಾರ" ಆರ್.ಆರ್.ದಿವಾಕರ ಅವರು ರಚಿಸಿದ "ವಚನ ಶಾಸ್ತ್ರ ರಹಸ್ಯ" ಗ್ರಂಥಗಳನ್ನು ಓದಿ ಅರಗಿಸಿಕೊಳ್ಳುತ್ತಿದ್ದರು. ಅಲ್ಲದೆ ಶರಣರು ರಚಿಸಿದ ವಚನಗಳನ್ನು ಅರ್ಥೈಸಿಕೊಂಡು ಸಂದರ್ಭಕ್ಕನುಸರಿಸಿ ಸಭೆ-ಸಮಾರಂಭಗಳಲ್ಲಿ ಉದಾಹರಿಸುತ್ತಿದ್ದರು.

ಶಂಕರಾನಂದ ಮುದ್ರಣಾಲಯದಲ್ಲಿ ಮುದ್ರಣಗೊಳ್ಳುತ್ತಲಿದ್ದ ಬಿ.ಎಂ.ವೀರೇಶ ಶಾಸ್ತ್ರಿಗಳ "ಅಮರವಾಣಿ" ಮಾಸಪತ್ರಿಕೆಯು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಕೈಯಲ್ಲಿ ಬ್ರಹ್ಮಾಸ್ತ್ರದಂತೆ ಕಂಗೊಳಿಸುತ್ತಿತ್ತು. ಚಿಕ್ಕಂದಿನಿಂದಲೂ ವಚನ ಸಾಹಿತ್ಯಕ್ಕೆ ಮಾರು ಹೋಗಿ ಶರಣರ ವಚನಗಳನ್ನು ಸಂಗ್ರಹಿಸಿ ಕೊಳ್ಳುತ್ತ ಅವುಗಳನ್ನು ಓದಿ ತಮ್ಮ ನಿತ್ಯ ಜೀವನದ ನಡೆ-ನುಡಿಗಳಲ್ಲಿ ತರುವ ಪ್ರಯತ್ನ ಮಾಡುತ್ತಿದ್ದರು. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಕ್ರಾಂತಿ ಮಾಡಿ ಹೋದ ಶರಣ-ಶರಣೆಯರನ್ನು ಕುರಿತು "ಅಮರವಾಣಿ' ಮಾಸಪತ್ರಿಕೆಯಲ್ಲಿ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು. "ಅಮರವಾಣಿ" ಶ್ರೀ ಶಂಕರಾನಂದ ಮುದ್ರಣಾಲಯಕ್ಕೆ ಒಳ್ಳೆಯ ಹೆಸರು ತಂದು ಕೊಟ್ಟಿತು. ಆ ಕಾಲದಲ್ಲಿ ಶರಣರನ್ನು, ಅವರು ರಚಿಸಿದ ವಚನ ಸಾಹಿತ್ಯವನ್ನು ಕುರಿತುಬರೆದು ಪ್ರಕಟಿಸುವ ವಿಜಾಪುರ ಫ.ಗು.ಹಳಕಟ್ಟಿ ಅವರ ಸಂಪಾದಕತ್ವದಲ್ಲಿ ಹೊರ ಬರುತ್ತಿದ್ದ "ಶರಣ ಸಾಹಿತ್ಯ" ನಿಜಾಂ ಪ್ರಾಂತದ ಯಾದಗಿರಿಯಲ್ಲಿ ಬಿ.ಎಂ.ವೀರೇಶ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರ ಬರುತ್ತಿದ್ದ "ಅಮರವಾಣಿ" ಪತ್ರಿಕೆಯ ಹಿಂದೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಶ್ರಮವಿತ್ತೆಂಬುದು ಪತ್ರಿಕೆ ಓದಿದವರೆಲ್ಲರಿಗೂ ಅರಿವಿತ್ತು.

ಈ ಪತ್ರಿಕೆಯನ್ನು ಓದಿದವರೆಲ್ಲರೂ "ಅಮರವಾಣಿ" ಮಾಸ ಪತ್ರಿಕೆಗೆ ಚಂದಾದಾರರಾಗಲು ಬಯಸುತ್ತಿದ್ದರು. "ಅಮರವಾಣಿ" ಹೊರ ತರುವುದರೊಡನೆ ಅನೇಕ ಕೃತಿಗಳನ್ನು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ರಚಿಸಿ ಪ್ರಕಟಿಸಿದರು. ಅವುಗಳಲ್ಲಿ,

೧)ಶಹಾಪುರದ ಚರಬಸವಯ್ಯ ತಾತನವರ ಜೀವನ ಚರಿತ್ರೆ.

೨)ನಂದೂರು ಮಲಯ ಮಹಾಂತೇಶ್ವರ ಚರಿತ್ರೆ.

೩)ಜೇವರ್ಗಿ ತಾಲೂಕಿನ ಶಿವನ ಗುಂಡದ ಗುಂಡಪ್ಪ ಜವಳಗಿ ಚರಿತ್ರೆ

೪)ತುಮಕೂರಿನ ವಿಶ್ವಾರಾಧ್ಯರ ಚರಿತ್ರೆ.

೫)ವೀರಭದ್ರ ವಿಜಯ (ಸಂಗೀತ ನಾಟಕ)

೬)ಮಾಯಾ ಕೋಲಾಹಲ (ಸಂಗೀತ ನಾಟಕ)

೭)ಬಸವೇಶ್ವರ ಸುಪ್ರಭಾತ

ಹೀಗೆ ಹಲವಾರು ಗ್ರಂಥಗಳನ್ನು ಬರೆದು ಪ್ರಕಟಿಸಿ ಕನ್ನಡಿಗರ ಕೈಗೆ ನೀಡಿದರು. ಅಲ್ಲದೆ ಅವರು ಬರೆದ ಮುನ್ನುಡಿ, ಬೆನ್ನುಡಿ, ಚೆನ್ನುಡಿ ಅಭಿಪ್ರಾಯಗಳಿಗೆ ಲೆಕ್ಕವೇ ಇಲ್ಲ. ಸಂಗ್ರಹಿಸಿ ಪ್ರಕಟಿಸಿದರೆ ಒಂದು ಉತ್ತಮ ಕೃತಿಯಾಗುತ್ತದೆ.

ಶಾಸ್ತ್ರಿಗಳು ತಮಗೆ ಬಿಡುವು ಸಿಕ್ಕಾಗ ಆಗಾಗ್ಗೆ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ ಶರಣ ಸಾಹಿತ್ಯವನ್ನು ಕುರಿತು ನಿರರ್ಗಳವಾಗಿ ಮಾತನಾಡಿ ಸಭಿಕರ ಮನ ಸೆಳೆಯುತ್ತಿದ್ದರು. ನುಡಿದಂತೆ ನಡೆಯುತ್ತಿದ್ದ ಬರಹದಂತೆ ಬದುಕುತ್ತಿದ್ದ ಶಾಸ್ತ್ರಿಗಳ ಅಸ್ಖಲಿತವಾಣಿಗೆ ಜನರು ಬೆರಗಾಗಿ ಬೆರಳು ಕಚ್ಚಿಕೊಳ್ಳುತ್ತಿದ್ದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಬರೆದುದು ಕಡಿಮೆ, ಬರೆದುದೆಲ್ಲ ಚೊಕ್ಕ-ಚಿನ್ನ. ಅವರು ತಾವು ಬರೆಯುವುದಕ್ಕಿಂತ ಜನರಿಂದ ಬರೆಯಿಸಿ ಪ್ರಕಟಿಸಿದ್ದ ಬಹಳಷ್ಟು. ಬಿಡುವು ಇಲ್ಲದ ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಜಿಲ್ಲಾ ಮಟ್ಟದ ಎರಡನೇ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷರಾದ ತವಗ ಭೀಮಸೇನರಾವ ಅವರ ಅಧ್ಯಕ್ಷತೆಯಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

೧೯೪೮ ರ ಸೆಪ್ಟಂಬರ್ ೧೭ನೇ ತಾರೀಖು ಹೈದರಾಬಾದ ಸಂಸ್ಥಾನ ನಿಜಾಮರ ಆದಿಪತ್ಯದಿಂದ ಬಿಡುಗಡೆಗೊಂಡು ಭಾರತದ ಒಕ್ಕೂಟಕ್ಕೆ ಒಳಪಟ್ಟಿತು. ಹೈದರಾಬಾದ ಕರ್ನಾಟಕದ ಜನ ಹೊಸ ಆಯಾಮದ ಕಡೆಗೆ ಮುಖಮಾಡಿತು. ಹೈದರಾಬಾದ ಸಂಸ್ಥಾನದಲ್ಲಿ ರಾಯಚೂರಿನಲ್ಲಿ ಪಂಡಿತ ತಾರಾನಾಥರು ಸ್ಥಾಪಿಸಿದ ಹಮದರ್ದ ಹೈಸ್ಕೂಲ್ ಕಲಬುರ್ಗಿಯಲ್ಲಿ ವಿಠ್ಠಲರಾವ ದೇವಳಗಾಂವಕರ ಸ್ಥಾಪಿಸಿದ ನೂತನ ವಿದ್ಯಾಲಯ ಹೈದರಾಬಾದ ಕೇಶರಾವ ಕೋರಟಕರ ವಾಮನ್ ನಾಯಕ್ ಹಾಗೂ ಕಾಶೀನಾಥರಾವ ವೈದ್ಯ ಮೊದಲಾದವರು ಸ್ಥಾಪಿಸಿದ ವಿವೇಕ ವರ್ಧಿನಿ

ಮೆಲ್ಲನೆ ಅಂದಿನ ರಾಷ್ಟ್ರೀಯ ಶಾಲೆಗಳಲ್ಲಿ ಕನ್ನಡಿಗರ ಮಾತೃಭಾಷೆ ಕನ್ನಡ ಪ್ರವೇಶ ಮಾಡಿತು. ಜನರಲ್ಲಿ ಮಾತೃ ಭಾಷೆಯ ಶಿಕ್ಷಣದಿಂದ ಜಾಗೃತಿ ಮೂಡತೊಡಗಿತು ೧೯೫೦-೧೯೫೧ರಲ್ಲಿ ಯಾದಗಿರಿಯಲ್ಲಿ ಸ್ಥಾಪನೆಗೊಂಡ ಶಂಕರ ಸಂಸ್ಕೃತ ಕಾಲೇಜು ಮುಚ್ಚುವ ಸ್ಥಿತಿಗೆ ಬಂದಿತು. ಹೊಸ ಆಯಾಮಕ್ಕೆ ಮುಖ ಮಾಡಿದ ಕನ್ನಡ ಭಾಷೆಗೆ ಹಬ್ಬದ ಸಂಭ್ರಮ ಬಂದಿತು. ಆಗ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಬಿ.ಎಂ.ವೀರೇಶ ಶಾಸ್ತ್ರಿಗಳು ಯಾದಗಿರಿ ಬಿಟ್ಟು ರಾಯಚೂರಿಗೆ ಹೋಗಲು ನಿರ್ಧರಿಸಿ "ಅಮರವಾಣಿ' ಮಾಸ ಪತ್ರಿಕೆ ಕಾರ್ಯಾಲಯ ರಾಯಚೂರಿಗೆ ಸ್ಥಳಾಂತರಿಸಲು ಮನಸ್ಸು ಮಾಡಿದರು. ಹೈದರಾಬಾದ ಸಂಸ್ಥಾನದಲ್ಲಿ ಕನ್ನಡ ಭಾಷೆಗೆ ಆದ್ಯತೆ ಇಲ್ಲದ ಆ ಕಾಲದಲ್ಲಿ ಯಾದಗಿರಿ ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ "ಅಮರವಾಣಿ" ಮಾಸ ಪತ್ರಿಕೆಯನ್ನು ತುಂಬ ಅಚ್ಚು ಕಟ್ಟಾಗಿ, ಆಕರ್ಷಕವಾಗಿ ಮುದ್ರಿಸಿ ಕನ್ನಡಿಗರ ಕೈಗೆ ಕೊಟ್ಟ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಈ ಸ್ಥಳಾಂತರದ ಸಂಗತಿ ಕೇಳಿ ನೋವಾಯಿತು.

"ಅಮರವಾಣಿ" ಮಾಸ ಪತ್ರಿಕೆ ಯಾದಗಿರಿಗೆ ಅಪೂರ್ವ ಘನತೆ, ಗೌರವ ತಂದು ಕೊಟ್ಟಿತ್ತು. ಕೂಸಿನಂತೆ ಜೋಪಾನಮಾಡುತ್ತ ಬಂದ "ಅಮರವಾಣಿ" ಪತ್ರಿಕೆ ಕೈ ತಪ್ಪಿ ಹೋಗಬಾರದೆಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಎಷ್ಟು ಪ್ರಯತ್ನ ಮಾಡಿದರು ಅದನ್ನು ಅವರಿಗೆ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ "ಕಾಲಾಯ ತಸ್ಮೈನಮಃ" ಎಂದು ತಮ್ಮನ್ನೇ ತಾವು ಸಂತೈಸಿಕೊಂಡರು.

■

## "ಹೈದರಾಬಾದ ಕನ್ನಡಿಗ" ವಾರ ಪತ್ರಿಕೆ

ಹೈದರಾಬಾದ ಸಂಸ್ಥಾನವು ನಿಜಾಮರ ಕಪಿ ಮುಷ್ಟಿಯಿಂದ ಬಿಡುಗಡೆಯಾಯಿತು. ಈ ಪ್ರಾಂತದ ಜನರು ಒಂದು ಸಂಕಟದಿಂದ ಪಾರಾಗುತ್ತಲೇ ಮತ್ತೊಂದು ಸಂಕಟ ಅವರಿಗೆ ಕಾಯ್ದು ಕುಳಿತ್ತಿತ್ತು. ಅದು "ಕರ್ನಾಟಕ ಏಕೀಕರಣ" ಹರಿದು ಹಂಚಿಹೋಗಿದ್ದ ಕನ್ನಡಿಗರು ಒಂದಾಗುವುದು ಕನ್ನಡ ನಾಡಿನಲ್ಲಿ ಕನ್ನಡ ರಾಜ್ಯಭಾಷೆಯಾಗಿ ಸಕಲ ಕನ್ನಡಿಗರ ಆಶೆ–ಆಕಾಂಕ್ಷೆಗಳು ಈಡೇರಲು ಭಾಷಾವಾರು ಪ್ರಾಂತ ರಚನೆಗಾಗಿ ಹೋರಾಟ ತೀವ್ರಗೊಂಡಿತು. ಇಂತಹ ಸಂದರ್ಭದಲ್ಲಿ ಶ್ರೀ ಶಂಕರಾನಂದ ಮುದ್ರಣಾಲುದಲ್ಲಿ ಮುದ್ರಣಗೊಂಡು ಸಕಲ ಕನ್ನಡಿಗರ ಕೈ ಸೇರುತ್ತಲಿದ್ದ "ಅಮರವಾಣಿ" ಮಾಸ ಪತ್ರಿಕೆ ಪ್ರೆಸ್ಸಿನಿಂದ ಕೈ ಬಿಟ್ಟು ಹೋದ ಮೇಲೆ ಪ್ರೆಸ್ಸಿನ ಸಿರಿ ಅಷ್ಟೇ ಅಲ್ಲ ಯಾದಗಿರಿಯ ಸಾಂಸ್ಕೃತಿಕ ಸಿರಿ–ಸಂಪತ್ತೇ ಹೋದಂತಾಯಿತು. ಒಂದು ಜಿಲ್ಲೆಯ ಪ್ರಮುಖಸ್ಥಳದಲ್ಲಿ ಪ್ರಕಟವಾಗ ಬೇಕಾಗಿದ್ದ "ಅಮರವಾಣಿ" ಒಂದು ತಾಲೂಕಿನ ಸ್ಥಳದಲ್ಲಿ ಪ್ರಕಟವಾಗಿ ಎಲ್ಲೆಲ್ಲಿ ಕನ್ನಡಿಗರಿದ್ದಾರೆ ಅಲ್ಲೆಲ್ಲ ಪಸರಿಸಿ ಕನಡಿಗರ ಮನತಣಿಸುತ್ತಿತ್ತು. ಇಂದು ಅಂದರೆ ೧೯೫೧–೧೯೫೨ ಈ ಸಂಧಿ ಕಾಲದಲ್ಲಿ ಏಕೀಕರಣದಂತಹ ಈ ಪವಿತ್ರ ಪ್ರಸಂಗದಲ್ಲಿ "ಅಮರವಾಣಿ" ಕೈತಪ್ಪಿ ಹೋಗಿದ್ದಕ್ಕೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತುಂಬಾ ಕಕ್ಕಾಬಿಕ್ಕಿಯಾದರು. ಶ್ರೀ ಶಂಕರಾನಂದ ಮುದ್ರಣಾಲಯ ಕೆಲಸ ಕೇವಲ ಹೊಟ್ಟೆ ಹೊರೆದುಕೊಳ್ಳುವ ಕೆಲಸವಾಗಬಾರದೆಂದು ಈ ಕೆಲಸದಿಂದ ಸಮಾಜ ಸೇವೆ, ನುಡಿ ಸೇವೆ, ನಾಡು ಸೇವೆ, ಧರ್ಮ, ಸಂಸ್ಕೃತಿಯ ಬೆಳಕಿನಿಂದ ಮನುಷ್ಯನ ಮನ ತೃಪ್ತಿಯಾಗಬೇಕು, ಆಗ ಆ ಕೆಲಸ ಕಾಯಕ ರೂಪ ಪಡೆಯುವುದು ಎಂದು ಬಗೆದ ಶಾಸ್ತ್ರಿಗಳು ಶ್ರೀ ಶಂಕರಾನಂದ ಮುದ್ರಣಾಲಯದಿಂದ "ಹೈದರಾಬಾದ ಕನ್ನಡಿಗ" ವಾರ ಪತ್ರಿಕೆ ಪ್ರಾರಂಭಿಸಲು ನಿರ್ಧರಿಸಿದರು. ತಮ್ಮ ಕನಸು ನನಸಾಗಬೇಕೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿ ಪತ್ರಿಕೆ ಹೊರತರಲು ಸಕಲ ಸಿದ್ಧತೆ ಮಾಡಿಕೊಳ್ಳತೊಡಗಿದರು. ರಾಮಗಿರಿ ಮಠದ ಹೊಣೆ ಹೊತ್ತ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸಮಾಜಕ್ಕೆ ಅರಿವು–ಆಚಾರ ಮೂಡಿಸಲು ಹೊಸ ಹೊಸ ವಿಚಾರ ಜನರ ಮನಸ್ಸಿನ ಮೇಲೆ ಮೂಡಿಸಲು ಆಧ್ಯಾತ್ಮ ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ಪೂಜ್ಯ ಶ್ರೀ ಹಿರಿಯ

ಸ್ವಾಮಿಗಳಾದ ಶಿವಶಂಕರ ಶಿವಾಚಾರ್ಯ ನೇತೃತ್ವದಲ್ಲಿ ಹಮ್ಮಿಕೊಳ್ಳುತ್ತ ಬಂದರು. ಅದರಿಂದ ರಾಮಗಿರಿ ಹಿರೇಮಠದ ಶಿಷ್ಯವೃಂದ, ಭಕ್ತ ಸಮೂಹ ಎಚ್ಚರಗೊಂಡು ಒಳ್ಳೆಯ ಜನರ ಸಂಘಟನೆಯಾಗಿತ್ತು. ಬಡವ ಬಲ್ಲಿದರೆಂಬ ಭೇದ-ಭಾವ ಮರೆಯಾಗಿ ಮೇಲು-ಕೀಳುತನ ತೊಲಗಿ ಎಲ್ಲರು ಒಂದೆಂಬ ಭಾವ ಜನರಲ್ಲಿ ಮೂಡಿಸಲು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಪಡುತ್ತಿದ್ದ ಶ್ರಮ ಸಾರ್ಥಕವಾಗುತ್ತ ಬಂದಿತು. ಶಾಸ್ತ್ರಿಗಳು ಪ್ರೆಸ್ಸಿನ ಉದ್ಯೋಗಗಳಲ್ಲಿಯೂ ಪ್ರಗತಿ ಕಂಡಿದ್ದರು. ರಾಮಗಿರಿ ಕಟ್ಟಿಮನಿ ಹಿರೇಮಠ ಸೇವೆಯಿಂದಲೂ ಯಶಸ್ಸು ಪಡೆದಿದ್ದರು. "ಇವನಾರವ, ಇವನಾರವ,ಇವನಾರವ ಎಂದೆನಿಸದೆ ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ" ಎಂಬ ಬಸವಣ್ಣನವರ ಅಮರವಾಣಿ ಶಾಸ್ತ್ರಿಗಳಿಗೆ ಅಮೃತವಾಣಿಯಾಗಿ ಪರಿಣಮಿಸಿತು.

ಅವರು ಪ್ರತಿ ವರ್ಷ ತಪ್ಪದೆ ಆಚರಿಸಿಕೊಂಡು ಬರುತ್ತಿದ್ದ "ಬಸವ ಜಯಂತಿ" ಕಾರ್ಯಕ್ರಮ. ಈ ಕಾರ್ಯಕ್ರಮ ಇಡೀ ಸಮಾಜವನ್ನು ಒಂದುಗೂಡಿಸುವ ಪವಿತ್ರ ವೇದಿಕೆಯಾಗಿ ಪರಿಣಮಿಸಿತ್ತು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಕೈಕೊಂಡ ಸಮಾಜೋಧಾರ್ಮಿಕ ಕಾರ್ಯಕ್ರಮವನ್ನು ಯಾದಗಿರಿಯಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತುಂಬ ಕಳಕಳಿಯಿಂದ ಏರ್ಪಡಿಸಿ ಜನಾನುರಾಗಿಗಳು ಆಗಿದ್ದರು.

ಯಾದಗಿರಿಯಲ್ಲಿ ಹೆಸರು ಮಾಡಿದ ಕಾಂಗ್ರೆಸ್ ಧುರಿಣ ಡಾ. ಎಸ್.ಆರ್.ಕಂಠಿಯವರನ್ನು, ಸೊಷಿಲಿಷ್ಟ ಮುಂದಾಳು ಪಿ.ರಾಚನೌಡ ಅವರನ್ನು, ಲೋಕ ಸೇವಾ ಸಂಘದ ಅಧ್ಯಕ್ಷ ಮುದ್ನಾಳ ವಿಶ್ವನಾಥ ರೆಡ್ಡಿ ಅವರನ್ನು, ಅಖಂಡ ಕರ್ನಾಟಕ ನಿರ್ಮಾಣ ಪರಿಷತ್ತು ರೂವಾರಿ ಶಿವ ಮೂರ್ತಿ ಸ್ವಾಮಿ ಅಳ ವಂಡಿ ಅವರನ್ನು, ಏಕೀಕರಣದ ಶಾಸ್ತ್ರಿಗಳೆಂದೇ ಪ್ರಖ್ಯಾತರಾಗಿದ್ದ ಚಂದ್ರಶೇಖರ ಶಾಸ್ತ್ರಿಗಳನ್ನು, ಬಳ್ಳಾರಿಯ ಚನ್ನಬಸಪ್ಪ ಅವರನ್ನು, ಆದವಾನಿಯ ದತ್ತುಗೌಡ ಪಾಟೀಲರವರನ್ನು, ಏಕೀಕರಣದ ಮುಂಚೂಣಿಯಲ್ಲಿ ಕಲಬುರ್ಗಿಯ ಶರಣ ದೊಡ್ಡಪ್ಪ ಅಪ್ಪ ಅವರನ್ನು, ಸ್ವಾತಂತ್ರ್ಯ ಹೋರಾಟಗಾರ ಸರ್ದಾರ ಶರಣ ಗೌಡರನ್ನು, ಕರ್ನಾಟಕ ಏಕೀಕರಣಕ್ಕಾಗಿಯೇ ಟೊಂಕಕಟ್ಟಿನಿಂತ ಸ್ವಾತಂತ್ರ್ಯ ಹೋರಾಟಗಾರ "ಕಲ್ಯಾಣ ಕರ್ನಾಟಕ ಮುದ್ರಣಾಲಯ" ದ ಮಾಲಕ ಶರಣಯ್ಯ ಸ್ವಾಮಿ ಮಹಾಗಾಂವ ಅವರನ್ನು, ಭಾಲ್ಕಿ ಹಿರೇಮಠದ ಡಾ. ಚನ್ನಬಸವ ಸ್ವಾಮಿಗಳನ್ನು ಸಮಾಜಸೇವಾಧುರಿಣ ಎಲ್ಹೇರಿ ಅನ್ನ ಪೂರ್ಣಯ್ಯ ಅವರನ್ನು ಕರ್ನಾಟಕ ಗಾಂಧಿಯೆಂದು ಕೀರ್ತಿ ಭಾಜನರಾದ ಹರ್ಡೇಕರ ಮಂಜಪ್ಪ ಅವರನ್ನು, ಪ್ರಗತಿಪರ ಚಿಂತಕ ಪೂಜ್ಯ ಬಂಥನಾಳ ಸ್ವಾಮಿಗಳನ್ನು ಸೋಲಾಪುರದ ಏಕೀಕರಣದ

ರೂವಾರಿ ಡಾ.ಜಯದೇವಿ ತಾಯಿಲಿಗಾಡೆ ಅವರನ್ನು, ಹುಣಸಿಗಿಯ ಮಹಾಂತ ಸ್ವಾಮಿಗಳನ್ನು, ಅನ್ನದ ಮಠ ಎಂದೇ ಪ್ರಖ್ಯಾತರಾಗಿದ್ದ ಸೊನ್ನದ ಸ್ವಾಮಿಗಳನ್ನು, ಭೇಟಿ ಮಾಡಿ ಅವರ ನಿಕಟ ಸಂಪರ್ಕದಲ್ಲಿದ್ದು, ಅವರೊಡನೆ ಸಮಾಲೋಚಿಸಿ ೧೯೫೩ರಲ್ಲಿ ನಡೆದ ಬಸವ ಜಯಂತ್ಯೋತ್ಸವ ಸಮಯದಲ್ಲಿ

"ಹೊತ್ತಿತೋ ಹೊತ್ತಿತೋ
ಕನ್ನಡ ದೀಪ
ಆರಿತೋ ಆರಿತೋ
ಶತಮಾನಗಳ ಶಾಪ"

ಎಂದು ಹಾಡಿದ ಸಿದ್ಧಯ್ಯ ಪುರಾಣಿಕರ ಕಾವ್ಯ ವಾಣಿಯೊಂದಿಗೆ ಯಾದಗಿರಿಯಲ್ಲಿ "ಹೈದರಾಬಾದ ಕನ್ನಡಿಗ" ವಾರಪತ್ರಿಕೆ ಪ್ರಾರಂಭ ಮಾಡಿದರು. ಅಂದು ಯಾದಗಿರಿ ನಗರದಲ್ಲಿ "ಕನ್ನಡದ ಹಬ್ಬ" "ಬಸವ ಜಯಂತಿ" "ವಚನೋತ್ಸವ"ದ ಸಂಭ್ರಮ ಅಂದು ಪ್ರತಿಯೊಬ್ಬರ ಕೈಯಲ್ಲಿ "ಹೈದರಾಬಾದ ಕನ್ನಡಿಗ" ವಾರ ಪತ್ರಿಕೆ ಪ್ರತಿಯೊಬ್ಬರ ಮನ, ಮನೆಗಳಲ್ಲಿ ಹಬ್ಬದ ವಾತಾವರಣ. ೩೮ವರ್ಷದ ಕನ್ನಡಿಗ "ಕಾವ್ಯ ತೀರ್ಥ" ಕನ್ನಡದ ಕಣ್ಮಣಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸಕಲ ಕನ್ನಡಿಗರ "ಕಾವ್ಯ ತೀರ್ಥ"ವಾಗಿ ಕಂಗೊಳಿಸತೊಡಗಿದರು. ಅವರು ತಲೆಯ ಮೇಲೆ ಸುತ್ತಿದ್ದ ಬಿಳಿಯ ರುಮಾಲು, ಮುಖದಲ್ಲಿ ಎದ್ದು ಕಾಣುತ್ತಿದ್ದ ಚಿಗುರು ಮೀಸೆ ಹೃದಯ ಪಟಲದಲ್ಲಿ ಒಂದೇ ಸವನೆ ಮಿಡಿಯುತ್ತಿದ್ದ "ಎನಗಿಂತ ಕಿರಿಯರಾರಿಲ್ಲ" ಎಂಬ ಬಸವಣ್ಣನವರ ವಚನಾಮೃತ ಅವರ ನಡೆ-ನುಡಿಯಲ್ಲಿಯೂ ಹಾಸುಹೊಕ್ಕಾಗಿ ಎದ್ದು ಕಾಣುತ್ತಿತ್ತು.

ಹೈದರಾಬಾದ ಕರ್ನಾಟಕದಿಂದ ಹೊರಬರುತ್ತಿದ್ದ "ಹೈದರಬಾದ ಕನ್ನಡಿಗ" ವಾರಪತ್ರಿಕೆ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡುತ್ತಲಿದ್ದ ಅಂದಿನ ಕನ್ನಡಿಗರ 'ಚಿಂತನೆ'ಗಳನ್ನು ಹಂಚಿಕೊಳ್ಳುವ ವೇದಿಕೆಯಾಯಿತು. ಜನರಿಂದ ಸರಕಾರಕ್ಕೆ ಸರಕಾರದಿಂದ ಜನರಿಗೆ ಚುರುಕು ಮುಟ್ಟಿಸುವ ದಿವ್ಯ ಅಸ್ತ್ರವಾಯಿತು.

"ಹೈದರಾಬಾದ ಕನ್ನಡಿಗ" ವಾರ ಪತ್ರಿಕೆಯು ಪಕ್ಷಾತೀತವಾಗಿ, ಧರ್ಮಾತೀತವಾಗಿ ಈ ಭಾಗದ ಕನ್ನಡಿಗರ ಮನೆ ಮನ ಬೆಳಗಬೇಕೆಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಮೈತುಂಬ ಕಣ್ಣಾಗಿ ಈ ಪತ್ರಿಕೆ ಹೊರತರುತ್ತಿದ್ದರು. ಭಾಷವಾರ ಪ್ರಾಂತ ಚಳುವಳಿಯ ಕಾಲ ಅದಾಗಿರುವುದರಿಂದ ಕನ್ನಡಿಗರನ್ನು ಒಂದು ಗೂಡಿಸುವುದು, ಅವರಲ್ಲಿ ಜಾಗೃತಿ ತಂದುಕೊಡುವುದೇ ಮುಖ್ಯ ಕೆಲಸವಾಗಿತ್ತು. ಆ ಕೆಲಸ ಶಾಸ್ತ್ರಿಗಳು ತ್ರಿಕರ್ಣ ಪೂರ್ವಕವಾಗಿ ಮಾಡತೊಡಗಿದರು.

ಹರಿದು ಹಂಚಿ ಹೋಗಿದ್ದ ಕನ್ನಡಿಗರನ್ನು ಒಟ್ಟುಗೂಡಿಸಲು ಅವರು ನಡೆಸುತ್ತಿದ್ದ ಅಂಗಡಿ, ಅಡತಿ ಬೇರೆ ಬೇರೆ ಸಂಘ ಸಂಸ್ಥೆ ಸರಕಾರಿ ಕಛೇರಿಗಳ ನಾಮ ಫಲಕ ಕನ್ನಡದಲ್ಲಿ ಇರಬೇಕೆಂದು ಹೇಳುತ್ತಿದ್ದರು. ನಿಮ್ಮ ಮಕ್ಕಳು ಓದಿ ಬರೆದು ಜಾಣರಾಗಬೇಕು. ಅದಕ್ಕಾಗಿ ನಿಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸಿಕೊಡಬೇಕೆಂದು ತಿಳಿಸಿ ಹೇಳತೊಡಗಿದರು. ಇಂತಹ ಉಪಯುಕ್ತ ಲೇಖನಗಳನ್ನು ಕನ್ನಡದಲ್ಲಿ ಬರೆದು ಪ್ರಕಟಿಸುತ್ತಿದ್ದರು.

ನಿಜಾಂ ಪ್ರಾಂತದಲ್ಲಿದ್ದ ಜಹಿರಾಬಾದ, ತಾಂಡೂರು ಆದೋನಿ; ಮುಂಬಯಿ ಪ್ರಾಂತದಲ್ಲಿದ್ದ ಜತ್ತ, ಅಕ್ಕಲಕೋಟ ದಕ್ಷಿಣ ಸೋಲಾಪುರ, ಲಾತೂರ ಬಾರ್ಷಿ; ಕೇರಳದ ಕಾಸರಗೋಡು ತಾಲೂಕುಗಳು, ಅಚ್ಚಕನ್ನಡ ಪ್ರದೇಶಗಳು. ಈ ಕನ್ನಡದ ನೆಲ ಜಲಗಳ ಪುಣ್ಯದ ಬೀಡುಗಳಾಗಿವೆ. ಈ ಬೀಡುಗಳು ಕನ್ನಡ ನಾಡಿನಲ್ಲಿ ಬಂದು ಸೇರಬೇಕೆಂದು ಅವರು ಬರೆದ ಅಗ್ರ ಲೇಖನಗಳು ಕರ್ನಾಟಕ ಏಕೀಕರಣಕ್ಕೆ ಸ್ಫೂರ್ತಿ ನೀಡುತ್ತಿದ್ದವು.

ಆರುನೂರು ವರ್ಷಗಳಿಂದ ಕನ್ನಡದ ಸೊಲ್ಲನ್ನು ಕಳೆದುಕೊಂಡಿದ್ದ ನಿಜಾಂ ಪ್ರಾಂತದ ಕನ್ನಡಿಗರು "ಹೈದರಾಬಾದ ಕನ್ನಡಿಗ" ಪತ್ರಿಕೆಯ ಮೂಲಕ ಜಾಗೃತರಾಗಿ ಕನ್ನಡ ಜಲ ನೆಲದ ಬಗ್ಗೆ ಮಾತನಾಡತೊಡಗಿದರು. ಕನ್ನಡ ಶಾಲೆಗಳು ಇಲ್ಲದಕ್ಕೆ ಮಕ್ಕಳಿಗೆ ಓದಲು ಬರೆಯಲು ಅವಕಾಶವೇ ಇಲ್ಲದ ಕಡೆ ಕೂಡಲೇ ಕನ್ನಡ ಶಾಲೆಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರಕ್ಕೆ ಮೊರೆಯಿಡುವ ಕೆಲಸ ಪ್ರಾರಂಭವಾಯಿತು. ಸಭೆ ಸಮಾರಂಭಗಳಲ್ಲಿ ಅಲ್ಲಲ್ಲಿ ನಡೆಯುತ್ತಿರುವ ಶಾಲೆಗಳಲ್ಲಿ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಅದರ ಜೊತೆಗೆ "ವಂದೇ ಮಾತರಂ" ಗೀತೆ ಪ್ರಾರ್ಥನಾಗೀತೆಗಳಾಗಿ ಪರಿಣಮಿಸಿದವು. ಈ ಎರಡು ಗೀತೆಗಳು ಈ ಭಾಗದ "ಕರ್ನಾಟಕ ಏಕೀಕರಣ" ಚಳುವಳಿಗೆ ಸ್ಫೂರ್ತಿ ನೀಡಿದವು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸಮಗ್ರ ಕರ್ನಾಟಕ ಮತ್ತು ಸಮೃದ್ಧ ಕರ್ನಾಟಕ ರಚನೆ ಯಾಗಬೇಕೆಂಬ ಸದುದ್ದೇಶ ಇಟ್ಟುಕೊಂಡು ಕರ್ನಾಟಕ ಏಕೀಕರಣ ವಿಷಯಗಳಿಗೆ ಹೇಗೆ ಒತ್ತು ಕೊಟ್ಟು ಬರೆಯುತ್ತದ್ದರು. ನಮ್ಮ ಭಾಗದ ಯಾವ ಯಾವ ತಾಲೂಕುಗಳು ಯಾವ ಯಾವ ಪ್ರಾಂತಗಳಿಗೆ ಸೇರುತ್ತವೆಂಬುದನ್ನು "ಹೈದರಾಬಾದ ಕನ್ನಡಿಗ ಪತ್ರಿಕೆಯನ್ನು ಜನರು ಕುತೂಹಲದಿಂದ ಓದಿ ತಿಳಿದುಕೊಳ್ಳುತ್ತಿದ್ದರು. ಓದಲು ಬಾರದವರು ಪತ್ರಿಕೆಯನ್ನು ಓದಿಸಿ ತಿಳಿದುಕೊಳ್ಳುತ್ತಿದ್ದರು. ಬಳ್ಳಾರಿ ನಗರವನ್ನು ಬಳ್ಳಾರಿ ಜಿಲ್ಲೆಯ ತಾಲೂಕುಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳಲು ಶ್ರೀ ಶಿವಮೂರ್ತಿ ಸ್ವಾಮಿ ಅಳವಂಡಿ ಮುಂದಾಳತ್ವದಲ್ಲಿ ಅಖಂಡ ಕರ್ನಾಟಕ ನಿರ್ಮಾಣ ಪರಿಷತ್ತು ನಡೆಸಿದ್ದ ಹೋರಾಟದ ಹೆಜ್ಜೆಯನ್ನು

ತಪ್ಪದಂತೆ ಸಂಗ್ರಹಿಸಿ ಹೈದರಾಬಾದ ಕನ್ನಡಿಗ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.೧೯೫೪ರಲ್ಲಿ ಮತ್ತು ೧೯೫೫ ರಲ್ಲಿ "ಹೈದರಾಬಾದ ಕನ್ನಡಿಗ" ಪತ್ರಿಕೆ ಕರ್ನಾಟಕದ ಮೂಲೆ ಮೂಲೆಗಳಿಗೂ ಹೋಗಿ ತಲುಪಿ ಕನ್ನಡಿಗರನ್ನು ಬಡಿದೆಬ್ಬಿಸುತ್ತಿತ್ತು. ಬೀದರ ಜಿಲ್ಲೆಯನ್ನು ಮೂರು ಭಾಗಮಾಡಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಹಂಚುವ ಪ್ರಯತ್ನವನ್ನು ಖಂಡಿಸಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಬರೆದ ಅಗ್ರ ಲೇಖನ ಓದಿ ಕನ್ನಡ ನಾಡಿನ ಮಣಿ ಮುಖುಟದಂತಿದ್ದ ಬೀದರ ಜಿಲ್ಲೆ ಕನ್ನಡ ನಾಡಿನಲ್ಲಿ ಉಳಿಸಿಕೊಂಡು ಬರಲು ಸಾಧ್ಯವಾಯಿತು. ಇಂದು ಕನ್ನಡ ನಾಡಿನ ಮಣಿ ಮುಖುಟದಂತೆ ಬೀದರ ಜಿಲ್ಲೆ ಕಂಗೊಳಿಸುತ್ತಿದೆ.

ದುರ್ದೈವದಿಂದ ಸೋಲಾಪುರ, ಅಕ್ಕಲಕೋಟ, ಜತ್ತ, ಮಹಾರಾಷ್ಟ್ರಕ್ಕೆ ಹೋಗಿ ಸೇರಿದವು. ಇಂದು ಜತ್ತದಿಂದ ಅಕ್ಕಲಕೋಟುವನ್ನೊಳಗೊಂಡ ದಕ್ಷಿಣ ಸೊಲ್ಲಾಪುರದ ಈ ಕನ್ನಡದ ಬೆಳ್ಳಿಯ ಪಟ್ಟಿ ಮಹಾರಾಷ್ಟ್ರದಲ್ಲಿ ಉಳಿದುಕೊಂಡಿದೆ. ಇಲ್ಲಿ ಇರುವವರೆಲ್ಲರೂ ಅಚ್ಚ ಕನ್ನಡಿಗರು.

೧೯೫೫ರಲ್ಲಿ ಬಸವಕಲ್ಯಾಣದಲ್ಲಿ ಅಖಿಲ ಭಾರತ ೭ನೆಯ ವೀರಶೈವ ಮಹಾಧಿವೇಶನ ಸಮಾವೇಶಗೊಂಡಿತ್ತು. ಈ ಅಧಿವೇಶನ ಅಧ್ಯಕ್ಷರೆಂದು ಬಂಥನಾಳ ಸಂಗನ ಬಸವ ಮಹಾಸ್ವಾಮಿಗಳವರು ಆಯ್ಕೆಯಾಗಿದ್ದರು. ಬಂಥನಾಳ ಶ್ರೀಗಳ ಮೇಲೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಭಕ್ತಿ, ವಿಶ್ವಾಸ, ಅಪಾರವಾಗಿತ್ತು. ಬಂಥನಾಳ ಶ್ರೀಗಳು ರಾಯಚೂರು ಜಿಲ್ಲೆ ಕೃಷ್ಣಾ ಕ್ಷೇತ್ರದಲ್ಲಿದ್ದ ಲಚ್ಯಾಣ ಸಿದ್ದಪ್ಪ ಮಹಾರಾಜರ ಮಠವಿದೆ, ಈ ಮಠವು ಬಂಥನಾಳ ಶಿವಯೋಗಿಗಳ ಒಡೆತನಕ್ಕೆ ಸೇರಿದೆ. ಇದರ ಶಾಖೆಯು ಒಂದು ಯಾದಗಿರಿಯಲ್ಲಿಯೂ ಇದೆ. ಈ ಮಠಗಳಿಗೆ ಸಂಗನ ಬಸವ ಶಿವಯೋಗಿಗಳು ಮೇಲಿಂದ ಮೇಲೆ ಬರುತ್ತಿದ್ದರು ಅದರಂತೆ ಯಾದಗಿರಿಗೂ ಬರುತ್ತಿದ್ದರು. ಹಾಗೆ ಬಂದಾಗ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಶ್ರೀಗಳನ್ನೂ ಭೆಟಿ ಮಾಡಿ ಅನೇಕ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಇದರಿಂದ ಇವರಿಬ್ಬರಲ್ಲಿಯೂ ಅಪಾರವಾದ ಪ್ರೀತಿ ವಿಶ್ವಾಸ ಬೆಳೆದಿತ್ತು. ಬಸವಕಲ್ಯಾಣದ ಅಧಿವೇಶನದ ಈ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದ ಬಂಥನಾಳ ಶಿವಯೋಗಿಗಳು ಮಾಡಿದ ಸಾಧನೆಯನ್ನು ಕುರಿತು ಲೇಖನ, ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರೆಂದು ಆಯ್ಕೆಯಾದ ಶ್ರೀಗಳ ಭಾವಚಿತ್ರ ಮುಖಪುಟದಲ್ಲಿ ಸುಂದರವಾಗಿ ಮುದ್ರಿಸಿ "ಹೈದರಾಬಾದ ಕನ್ನಡಿಗ" ವಿಶೇಷ ಸಂಚಿಕೆಯನ್ನು ಹೊರತಂದಿದ್ದರು.

"ಹೈದರಾಬಾದ ಕನ್ನಡಿಗ" ವಿಶೇಷ ಸಂಚಿಕೆ ಬಸವಕಲ್ಯಾಣದ ಅಧಿವೇಶನದಲ್ಲಿ ವಿಶೇಷ ಗಮನ ಸೆಳೆಯಿತು. ಸಾಮಾಜಿಕ, ಶೈಕ್ಷಣಿಕ ಧಾರ್ಮಿಕ ಲೇಖನಗಳು

ಏಕೀಕರಣಕ್ಕೆ ಸಂಬಂಧ ಪಟ್ಟ ವಿಶೇಷ ಲೇಖನಗಳನ್ನು ಓದಿದ ಕೆಲವು ಜನ ಕನ್ನಡಿಗರು ಪತ್ರಿಕೆಗೆ ಹೊಸದಾಗಿ ಚಂದಾದಾರರಾದರು. ಆದರೆ ಶಾಸ್ತ್ರಿಗಳು ನಿರೀಕ್ಷಿಸಿದಷ್ಟು ಚಂದಾದರರಾಗಲಿಲ್ಲ, ಇದರಿಂದ ಗುರುಸಿದ್ಧ ಶಾಸ್ತ್ರಿಗಳು ನಿರಾಶರಾಗಲಿಲ್ಲ ಗಟ್ಟಿ ಧೈರ್ಯ ಮಾಡಿ ಪತ್ರಿಕೆ ಮುಂದುವರಿಸಿದರು.

ಪ್ರತಿವಾರ "ಹೈದರಾಬಾದ ಕನ್ನಡಿಗ" ಪತ್ರಿಕೆಯಲ್ಲಿ ಕರ್ನಾಟಕ ಏಕೀಕರಣಕ್ಕೆ ಸಂಬಂಧ ಪಟ್ಟಂತೆ ಲೇಖನಗಳೊಂದಿಗೆ ಅಸ್ಪೃಶ್ಯತಾ ನಿವಾರಣೆ, ಪಾನ ಪ್ರತಿಬಂಧಕ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆ ನಿರುದ್ಯೋಗ, ಅನಾರೋಗ್ಯ ಸಮಸ್ಯೆ, ಆರ್ಥಿಕ ಮುಗ್ಗಟ್ಟು ದುಶ್ಚಟಗಳಿಗೆ ಬಲಿಯಾಗದಿರುವಿಕೆ ಮುಂತಾದ ಲೇಖನಗಳನ್ನು ತಾವು ಸ್ವತಃ ಬರೆದು ಲೇಖಕರಿಂದ ಬರೆಯಿಸಿ ಪ್ರಕಟಿಸಿ ಜನ ಜಾಗೃತಿಗೊಳಿಸುತ್ತಿದ್ದರು ಸುದೀರ್ಘ ಹೋರಾಟದ ನಂತರ ೧೯೫೬ನವ್ಹಂಬರ್ ಒಂದರಂದು ಕರ್ನಾಟಕ ಏಕೀಕರಣವಾಯಿತು.  ವಿಶಾಲ ಕರ್ನಾಟಕವೆಂದು ಹೆಸರಿಡದೆ "ಮೈಸೂರು ರಾಜ್ಯ"ವೆಂದು ನಾಮಕರಣ ಮಾಡಲಾಯಿತು.  ಅಕ್ಕಲ ಕೋಟ, ಜತ್ತ, ದಕ್ಷಿಣ ಸೋಲಾಪುರ, ಜಹಿರಾಬಾದ ತಾಂಡೂರು, ಆದವಾನಿ, ಅನಂತಪುರ ಕೆಲ ಭಾಗಗಳು ಕರ್ನಾಟಕಕ್ಕೆ ಬಂದು ಸೇರಲಿಲ್ಲ ಇದರಿಂದ ಬೇಸತ್ತ ಕನ್ನಡಿಗರು ಆಕ್ರೋಶ ವ್ಯಕ್ತ ಪಡಿಸಿದರು.

'ನಾಡೇ ನುಡಿಯು ನುಡಿಯೇ ನಾಡು' ಎಂದು ಹೇಳಿಕೊಳ್ಳುವ ಮಾತಾಗಲಿಲ್ಲ. "ಕನ್ನಡವೇ ಸತ್ಯ ಕನ್ನಡವೇ ನಿತ್ಯ ಅನ್ಯವಲ್ಲದೆ ಮಿಥ್ಯ" ಎಂಬ ನುಡಿಗಡಣವಾಗಲಿ "ಹೆಸರಾಯಿತು ಕನ್ನಡ, ಉಸಿರಾಗಲಿ ಕನ್ನಡ"ಎಂಬ ಮೊರೆಯಾಗಲಿ "ಹಚ್ಚೇವು ಕನ್ನಡ ದೀಪ" ಎಂಬ ಧ್ಯೇಯವಾಗಲಿ "ಜೋಗದ ಸಿರಿ ಬೆಳಕಿನಲ್ಲಿ ನಿತ್ಯೋತ್ಸವ ತಾಯಿ ನಿತ್ಯೋತ್ಸವ" ಎಂಬ ಕನ್ನಡ ಕವಿಗಳ ಕಾವ್ಯ ವಾಣಿಯಲ್ಲಿ ತೇಲಿಬರುವ, ಮೂಡಿ ಬರುವ ಭಾವ ದೀಪ್ತಿಯಲ್ಲಿ, ಕನ್ನಡನಾಡಿನ ಚಾರಿತ್ರ್ಯವೂ ಭಾವಾತ್ಮಕವಾಗಿ ಪ್ರತಿಫಲಿಸುತ್ತಲಿದೆ ಅಂತೆಯೇ ಇಲ್ಲೊ, ಕವಿ "ಪಂಪನಿಲ್ಲಿ ಮುಖ್ಯ ಮಂತ್ರಿ" ಎಂದು ಮೈದುಂಬಿ ಹಾಡುತ್ತಾನೆ. ಅಖಂಡ ಕರ್ನಾಟಕಕ್ಕೆ "ಬಾರಿಸು ಕನ್ನಡ ಡಿಂಡಿಮ" ಎಂದು ಕರೆಕೊಟ್ಟರು.  "ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂದು ಹೊರಗುಳಿದ ಕನ್ನಡಿಗರಿಗೆ ಧೈರ್ಯ ಹೇಳಿದರು. ಈ ಎಲ್ಲ ಭಾವನೆಗಳನ್ನು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು "ಹೈದರಾಬಾದ ಕನ್ನಡಿಗ"ರಿಗೆ ಮನವರಿಕೆ ಮಾಡಿಕೊಟ್ಟರು.

ಕನ್ನಡ ನಾಡು ಒಂದಾಯಿತು. ಎಂದು ಆನಂದ ಅಭಿಮಾನ ಉಕ್ಕಿ ಬಂದಿತು ಇನ್ನೊಂದುಕಡೆ "ಮೈಸೂರು ರಾಜ್ಯ"ವೆಂದು ನಾಮಕರಣಗೊಂಡಿತು ಎಂಬ ಅಸಮಧಾನ ಹೊಗೆಯಾಡತೊಡಗಿತು.  ಈ ಎರಡರ ಮಧ್ಯದಲ್ಲಿ ಕನ್ನಡ ನಾಡಿನಲ್ಲಿ

ಕನ್ನಡ ಆಡಳಿತ ಭಾಷೆಯಾಗಿ ಮಾನ್ಯತೆ ಪಡೆಯಬೇಕೆಂದು ಜಿ.ಎಂ.ಗುರುಸಿದ್ದ ಶಾಸ್ತ್ರಿಗಳು ಹೋರಾಟ ಮಾಡತೊಡಗಿದರು.

ಭಾರತ ದೇಶ, ಬ್ರಿಟೀಷ್ ಕಪಿ ಮುಷ್ಟಿಯಿಂದ ಬಿಡುಗಡೆಗೊಂಡಂತೆ ಹೈದರಾಬಾದ ಸಂಸ್ಥಾನವು ನಿಜಾಮರ ಆದಿಪತ್ಯದಿಂದ ಹೊರ ಬಂದು ಭಾರತದ ಒಕ್ಕೂಟದಲ್ಲಿ ಸೇರಿ ಭಾರತ ಪ್ರಜಾಪ್ರಭುತ್ವವುಳ್ಳ ದೊಡ್ಡ ದೇಶವೆಂದು ಕೀರ್ತಿ ಭಾಜನವಾಯಿತು.

ಕಾಲಾನು ಕಾಲದಿಂದ ಬೇರು ಬಿಟ್ಟಿದ್ದ ಅಸಮಾನತೆ, ಅನಕ್ಷರತೆ, ಅಜ್ಞಾನ, ಅನಾರೋಗ್ಯ ಮೂಢನಂಬಿಕೆಗಳಿಂದ ಮುಕ್ತವಾಗಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಕಾಂಗ್ರಸ್ಸಿನ ಪ್ರಾಬಲ್ಯದ ಕಾಲ ಅದಾಗಿರುವುದರಿಂದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮ್ಮ ಸಂಪಾದಕತ್ವದಲ್ಲಿ ಪ್ರಕಟಿಸುತ್ತ ಬಂದ "ಹೈದರಾಬಾದ ಕನ್ನಡಿಗ" ವಾರ ಪತ್ರಿಕೆಯು ಸಂಪೂರ್ಣ ಪಕ್ಷಾತೀತವಾಗಿ ತನ್ನದೇ ಆದ ಒಂದು ನಿಲುವು ಹೊಂದಿತ್ತು. ಇದು ಅಂದಿನ ರಾಜಕೀಯ ಮುಂದಾಳುಗಳಿಗೆ ಬೇಡವಾಗಿತ್ತು. ಅದರಲ್ಲಿಯೂ ಯಾದಗಿರಿಯ ಅಂದಿನ ಕಾಂಗ್ರೆಸ್ ಮುಖಂಡರು, ಜನತೆಯ ಮುಂದಾಳುಗಳು ಆಗಿದ್ದ ಕೋಲೂರು ಮಲ್ಲಪ್ಪ, ಜಗನ್ನಾಥ ಚಂಟರಕ್ಕಿ, ಕೋದಂಡ ರಾಯರಂತಹ ರಾಷ್ಟ್ರೀಯ ನಾಯಕರ ಕಾರ್ಯ ಕ್ಷೇತ್ರ ಅದಾಗಿತ್ತು. ಈ ಮಹನಿಯರ ಸಣ್ಣ ಪುಟ್ಟ ಸುದ್ದಿಗಳೂ ಸಹ ಈ ಪತ್ರಿಕೆಯಲ್ಲಿ ಬಂದು ಜನ ಜನಿತವಾಗಬೇಕೆಂದು ಅಪೇಕ್ಷಿಸುತ್ತಿದ್ದರು. ಪತ್ರಿಕೆಯನ್ನು ತುಂಬಾ ಪಕ್ಷಾತೀತವಾಗಿ ನಡೆಸಿಕೊಂಡು ಬಂದಿದ್ದ ಶಾಸ್ತ್ರಿಗಳಿಗೆ ಇದು ಬೇಕಾಗಿರಲಿಲ್ಲ. ತಮ್ಮ ಪತ್ರಿಕೆಯ ಮೂಲಕ ಒಬ್ಬರನ್ನು ಏರಿಸುವುದು ಇನ್ನೊಬ್ಬರನ್ನು ಇಳಿಸುವುದು, ಒಬ್ಬರನ್ನು ಹೊಗಳುವುದು, ಇನ್ನೊಬ್ಬರನ್ನು ತೆಗಳುವುದು, ಸಮಾಜಾವಾದಿ, ಸಮಾನತಾವಾದಿ, ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಆಗಿ ಬರುತ್ತಿರಲಿಲ್ಲ.

ಪರಿಶುದ್ಧ ಹೋರಾಟ ಮನೋಭಾವವುಳ್ಳ ಕರ್ನಾಟಕ ಏಕೀಕರಣ ಚಳುವಳಿಯ ರೂವಾರಿಗಳಾದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಪತ್ರಿಕೆಯ ಧ್ಯೇಯ ಧೋರಣೆಗಳನ್ನು ಗಾಳಿಗೆ ತೂರಿ ಹೊತ್ತು ಬಂದಂತೆ ಕೊಡೆಹಿಡಿದು ತಾಳಕ್ಕೆ ತಕ್ಕಂತೆ ಕುಣಿಯುವ ವ್ಯಕ್ತಿಗಳಾಗಿರಲಿಲ್ಲ, ಅವರ ಭಾವ ಮೈದುನರಾಗಿದ್ದ ಮತ್ತೂರ ಗ್ರಾಮದ ಶ್ರೀ ಗುರುಶಾಂತ ಶರ್ಮಾ ಅವರು ಕಾಂಗ್ರೆಸ್ಸಿನ ಧುರೀಣರು ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಎಸ್.ನಿಜಲಿಂಗಪ್ಪನವರ ಮತ್ತು ವೀರೇಂದ್ರ ಪಾಟೀಲರ ನಿಕಟವರ್ತಿಗಳಾಗಿದ್ದರು. ಈ ಇಬ್ಬರನ್ನು ಪರಿಚಯಿಸಿ ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳಲು ತುದಿಗಾಲ ಮೇಲೆ ನಿಂತಿದ್ದರು.

ಪರಿಶುದ್ಧ ಹೃದಯದ ಸಾಹಿತಿಗಳು, ಕವಿಗಳು, ಸಮಾಜ ಸುಧಾರಕರು ಧಾರ್ಮಿಕ ಚಿಂತಕರು ಆಗಿದ್ದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ರಾಜಕೀಯದಿಂದ ಬಹುದೂರವಿದ್ದವರು ಅವರ ಭಾವ-ಮೈದುನ, ಕಾಂಗ್ರೆಸ್ಸಿನ ಧುರಿಣ ಶರ್ಮಾಜಿ ಅವರು ಎಷ್ಟು ಹೇಳಿದರು ತಾವು ಬಾಲ್ಯದಲ್ಲಿ ಸುತ್ತಿದ್ದ ರುಮಾಲು ತೆಗೆದು ರಾಜಕೀಯ ರಂಗಕ್ಕೆ ಧುಮಿಕಿ ಗಾಂಧಿ ಟೋಪಿ ಹಾಕಿ ಕೊಳ್ಳಲು ಮನಸ್ಸು ಕೊಡಲಿಲ್ಲ ನಿಂತರೆ "ಹೈದರಾಬಾದ ಕನ್ನಡಿಗ" ಪತ್ರಿಕೆ ನಿಲ್ಲಲಿ ನಾನು ಮಾತ್ರ ರಾಜಕೀಯ ಧುರಿಣರ ಮುಂದೆ ಕೈ ಕಟ್ಟಿ ನಿಲ್ಲುವುದಿಲ್ಲ ಎಂದು ಗಟ್ಟಿಯಾಗಿ ಹೇಳಿದರು. ಇಷ್ಟು ಅಚಲ ನಿರ್ಧಾರ, ಗಟ್ಟಿ ಮನಸ್ಸು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳದಾಗಿತ್ತು.

ಕರ್ನಾಟಕ ಏಕೀಕರಣವಾಗುತ್ತಲೇ ಕರ್ನಾಟಕ ಏಕೀಕರಣ ಚಳುವಳಿಯ ಬಿಸಿ ಆರತೊಡಗಿತು ಕರ್ನಾಟಕ ಏಕೀಕರಣವಾದ ಮೇಲೆ "ಹೈದರಾಬಾದ ಕನ್ನಡಿಗ" ಪತ್ರಿಕೆ ಓದುವವರ ಸಂಖ್ಯೆ ಹೆಚ್ಚಾಗಬಹುದೆಂದು ಬಗೆದಿದ್ದ ಶಾಸ್ತ್ರಿಗಳ ಊಹೆ ಮೆಲ್ಲನೆ ಮರೆಯಾಗತೊಡಗಿತು. ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಕೆಲಸದ ಹೊರೆಯೂ ಹೆಚ್ಚಾಗ ತೊಡಗಿತು. ರಾಮಗಿರಿ ಕಟ್ಟೀಮನಿ ಹಿರೇಮಠದ ಚಟುವಟಿಕೆಗಳು ಚುರುಕುಗೊಳಿಸಲು ಭಕ್ತಾದಿಗಳ ಅಪೇಕ್ಷೆಯೂ ಬಲವಾಗಿತ್ತು. ಅದರಿಂದ ೧೯೫೭ಜನವರಿಯಿಂದ "ಹೈದರಾಬಾದ ಕನ್ನಡಿಗ" ಪತ್ರಿಕೆಯನ್ನು ನಿಲ್ಲಿಸಿ ಬಿಟ್ಟರು.

■

# ನನಗಾದ ಅನುಭವ ನಿಮಗೂ ಆದೀತು

ಎಂತಹ ಸಂಕಟ ಬಂದರೂ 'ಹೈದರಾಬಾದ ಕನ್ನಡಿಗ" ವಾರ ಪತ್ರಿಕೆಯನ್ನು ನಿಲ್ಲಿಸಬಾರದೆಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಅವಿಶ್ರಾಂತ ಹೋರಾಟಮಾಡಿದರು. ಹೇಗೂ ಶ್ರೀ ಶಂಕರಾನಂದ ಮುದ್ರಣಾಲಯ ನಮ್ಮದೆ ಅದಕ್ಕೆ ಹಣ ತೆತ್ತ ಬೇಕಾಗಿಲ್ಲ. ಮುದ್ರಣಾಲಯದಲ್ಲಿ ಪತ್ರಿಕೆ ಕೆಲಸ ಮಾಡುವ ನುರಿತ, ನಿಷ್ಠಾವಂತ ನಮ್ಮ ಕೆಲಸಗಾರರೇ ಇದ್ದಾರೆ ಚಂದಾದರರು ಇನ್ನು ಪತ್ರಿಕೆ ಕೊಂಡು ಓದುವವರು ಜಾಹೀರಾತುದಾರರು ಮಾತ್ರ ನಿರೀಕ್ಷಿಸಿದಷ್ಟು ಸಿಗದಂತಾಗಿದೆ. ಯಾರ ಸಲುವಾಗಿ ಈ ಪತ್ರಿಕೆ ಹೊರ ಬರುತ್ತದೆಯೋ ಅವರೇ ಕಣ್ಣೆತ್ತಿ ನೋಡದಿರುವಾಗ ಪತ್ರಿಕೆ ಹೊರೆ ಇನ್ನೇಕೆ ಈ ಪತ್ರಿಕೆ ಎಂದು "ಹೈದರಾಬಾದ ಕನ್ನಡಿಗ" ಪತ್ರಿಕೆನಿಲ್ಲಿಸಿಬಿಟ್ಟೆ ಅಂದು ನನಗಾದ ಅನುಭವ ನಿಮಗೂ ಆದೀತು! ಎಂದು "ವಿಶ್ವಕಲ್ಯಾಣ" ವಾರ ಪತ್ರಿಕೆ ಮುದ್ರಿಸಲು ಶ್ರೀ ಶಂಕರಾನಂದ ಮುದ್ರಣಾಲಯಕ್ಕೆ ಬಂದ ಲೋಕ ಸೇವಕ ಸಂಘದ ಧುರಿಣರು, ನಿಷ್ಠಾವಂತ ಸಮಾಜ ಸೇವಕರು, ಆಗರ್ಭ ಶ್ರೀಮಂತರು, ಆದ ವಿಶ್ವನಾಥ ರೆಡ್ಡಿ ಮುದ್ನಾಳ ಪತ್ರಿಕೆಯ ಸಂಪಾದಕರೆಂದು ನೇಮಕಗೊಂಡಿದ್ದ ಬಿ.ಮಹಾದೇವಪ್ಪನವರೊಡನೆ ಬಂದಾಗ ಶಾಸ್ತ್ರಿಗಳು ತಮಗಾದ ಈ ಕಹಿ ಅನುಭವ ತೋಡಿಕೊಂಡರು.

'ಇಲ್ಲ ಶಾಸ್ತ್ರಿಗಳೇ, ಇಂದಿನ ಓದುಗರು ಮೆಚ್ಚಕೊಳ್ಳುವಂತೆ ಪತ್ರಿಕೆ ಹೊರತರಲು ಪ್ರಯತ್ನಿಸಲಾಗುತ್ತಿದೆ. ಅದಕ್ಕೆಂದೆ ಎಂ.ಎ ಪದವೀಧರರು "ಪ್ರಜಾವಾಣಿ"ದಿನ ಪತ್ರಿಕೆಯ ಉಪ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದ ಬಿ.ಮಹಾದೇವಪ್ಪನವರನ್ನು ಕರೆದುಕೊಂಡು ಬರಲಾಗಿದೆ. ಪ್ರಾರಂಭದ ದಿನಗಳಲ್ಲಿ ಆಗುವ ನಷ್ಟ ಅನುಭವಿಸಲು ನಾವು ಸಿದ್ಧರಿದ್ದೇವೆ. ಮುಂದೆ ಅದು ತನ್ನಷ್ಟಕ್ಕೆ ತಾನೇ ಸರಿಪಡಿಸಿಕೊಳ್ಳುತ್ತದೆ. ಎಂದು ನಾನು ಕಟ್ಟಿದ ಕನಸು. ನಮ್ಮ ಕನಸು ನನಸಾಗುವುದೆಂಬ ನಂಬಿಕೆಯೂ ನನ್ನದಾಗಿದೆ ಎಂದು ಒಳ್ಳೆಯ ಉತ್ಸಾಹ ಭರಿತವಾಗಿಯೇ ಹೇಳಿದರು.

ಇತ್ತೀಚೆಗೆ ನಮ್ಮ ಮುದ್ರಣಾಲಯದಲ್ಲಿ ವಿಪರೀತ ಕೆಲಸ ಕೆಲವು ಮಠದ ಸ್ವಾಮಿಗಳು ಪುರಾಣಗಳ ಮುದ್ರಣಕ್ಕಾಗಿ ನಮ್ಮ ರಾಮಗಿರಿ ಹಿರೇಮಠದಲ್ಲಿಯೇ ಬೀಡು ಬಿಟ್ಟಿದ್ದಾರೆ. 'ಪಂಚಾಂಗ' ಕ್ಯಾಲಂಡರ, ಅಡತಿ, ಅಂಗಡಿಗಳ ರಸೀದಿ

ಪುಸ್ತಕಗಳು, ಖಾತೆ–ಕೀರ್ದಿ ಪುಸ್ತಕ  ಮತದಾರರಯಾದಿ ಆಟ–ನಾಟಕಗಳ ಪ್ರಚಾರ ಪತ್ರಿಕೆ ಇತ್ಯಾದಿ ಕೆಲಸಗಳಲ್ಲಿ ನಮಗೆ ಬಿಡುವೇ ಇಲ್ಲ. 'ವಿಶ್ವ ಕಲ್ಯಾಣ' ಪ್ರತಿವಾರ ತಪ್ಪದೇ ಮುದ್ರಣಗೊಂಡು ಸಕಾಲಕ್ಕೆ ಓದುಗರ ಕೈ ಸೇರಬೇಕು. ಈ ಕೆಲಸ ನಮ್ಮಿಂದಾಗಲಿಕ್ಕಿಲ್ಲ ಪತ್ರಿಕೆಗೆ ಸ್ವತಂತ್ರ ಮುದ್ರಣವಿದ್ದರೆ ಚನ್ನ ಎಂದು ಶಾಸ್ತ್ರಿಗಳು ಹೇಳಿದ ಮಾತು ವಿಶ್ವನಾಥ ರೆಡ್ಡಿ ಅವರಿಗೆ ಅಷ್ಟು ಸರಿ ಬರಲಿಲ್ಲ. ಆ ಎಲ್ಲ ಕೆಲಸ ಮಾಡುವ ಉದ್ದೇಶ ಇಟ್ಟುಕೊಂಡು ಪ್ರಾರಂಭದ ಕೆಲವು ದಿವಸ ನಿಮ್ಮಲ್ಲಿಯೇ ನಡೆಯಲಿ ಎಂದು ನಿಮ್ಮ ಕಡೆ ಬಂದಿದ್ದೇವೆ. ತಾವು ಮುದ್ರಣದಲ್ಲಿ ರಿಯಾಯಿತಿ ತೋರಿಸಿ ಸಹ ಕರಿಸಬೇಕೆಂದು ಕೇಳಿಕೊಂಡಾಗ

"ರೆಡ್ಡಿಯವರೇ, ಯಾದಗಿರಿಯಲ್ಲಿ ಒಂದು ವೈಚಾರಿಕ ವಾರಪತ್ರಿಕೆ ಹೊರ ಬರುತ್ತದೆ ಎಂಬ ಹೆಮ್ಮೆ ನನಗೂ ಇದೆ. ನಾನೂ ಸಹ ಸಹಕರಿಸುತ್ತೇನೆ. ಇದು ಪತ್ರಿಕೆಯ ಕೆಲಸ ಏನು,  ಸಾವು–ನೋವು ಎಂಬುದು ನನಗೆ ಗೊತ್ತು. ಎಷ್ಟೇ ತೊಂದರೆ ಬಂದರೂ ಸ್ವಲ್ಪ ದಿವಸ ಸಹಕರಿಸುತ್ತೇನೆ. ವರ್ಷಾರು ತಿಂಗಳಲ್ಲಿ ನಿಮ್ಮದು ನೀವು ನೋಡಿಕೊಳ್ಳಬೇಕೆಂದು "ವಿಶ್ವಕಲ್ಯಾಣ" ವಾರ ಪತ್ರಿಕೆ ಮುದ್ರಿಸುವ ಕೆಸ ಕೈ ಕೊಂಡರು.

■

# "ವಿಶ್ವ ಕಲ್ಯಾಣ" ವಾರ ಪತ್ರಿಕೆ ಮುದ್ರಣ

೧೯೬೬ರ ಆಗಸ್ಟ್ ೧೫ರಂದು ಲೋಕ ಸೇವಾ ಸಂಘದ ಧುರೀಣರು, ಸಮಾಜ ಚಿಂತಕರು, ಆದ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಮುದ್ರಣದ ಹೊಣೆ ಗುರುಸಿದ್ಧ ಶಾಸ್ತ್ರಿಗಳಿಗೆ ಒಪ್ಪಿಸಿ, ಸಂಪಾದಕರಾದ ಶ್ರೀ.ಬಿ ಮಹಾದೇವಪ್ಪನವರ ಮೇಲೆ ಪತ್ರಿಕೆ ಹೊಣೆ ಹೊರಿಸಿ, ತಾವು ಪತ್ರಿಕೆಯ ಪ್ರಸಾರ ಪ್ರಚಾರ ಕಾರ್ಯದಲ್ಲಿ ತೊಡಗಿದರು. ಇವರೆಲ್ಲರೂ ಸೇರಿ ಮೊದಲು ಪತ್ರಿಕೆಯನ್ನು ಕೊಂಡು ಓದುವವರ ಸಂಖ್ಯೆಯನ್ನು ಬೆಳೆಸತೊಡಗಿದರು. ಹೊಸ ಹೊಸ ವಿಚಾರ, ರಾಜಕೀಯ ಪ್ರಜ್ಞೆ, ಸಾಮಾಜಿಕ ತಿಳುವಳಿಕೆ ಮೂಡಿಸುವ ನಿಟ್ಟಿನಲ್ಲಿ ಹೊರ ಬರುತ್ತಿದ್ದ 'ವಿಶ್ವಾ ಕಲ್ಯಾಣ' ವಾರ ಪತ್ರಿಕೆ ಪ್ರಾರಂಭದಲ್ಲಿ ತುಂಬ ಜನಪ್ರಿಯತೆಯನ್ನು ಪಡೆದುಕೊಂಡಿತು.

ಪ್ರತಿವಾರವೂ .'ವಿಶ್ವಕಲ್ಯಾಣ' ಪತ್ರಿಕೆಯು ಒಂದು ದಿವಸವೂ ತಡಮಾಡದಂತೆ ತುಂಬ ದಕ್ಷತೆ ವಹಿಸಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಮುದ್ರಿಸಕೊಡ ತೊಡಗಿದರು. ಮುದ್ರಣಾಲಯದಲ್ಲಿ ಕೆಲಸವೂ ಹೆಚ್ಚಾಗಿತ್ತು. ಶಾಸ್ತ್ರಿಗಳಿಗೆ ಒಂದು ನಿಮಿಷೂ ಬಿಡುವಿಲ್ಲದಂತಾಯಿತು. ವರ್ಷಾರು ತಿಂಗಳಲ್ಲಿ ಮುದ್ರಣದ ವ್ಯವಸ್ಥೆ ಮಾಡಿಕೊಳ್ಳಲು ಹೇಳಿದ ಅವದಿ ಮುಗಿಯಿತು. ಇನ್ನು ಮೇಲೆ "ವಿಶ್ವಕಲ್ಯಾಣ" ವಾರ ಪತ್ರಿಕೆ ಮುದ್ರಿಸಿ ಕೊಡುವುದು ಆಗುವುದಿಲ್ಲ ಎಂದು ಪತ್ರಿಕೆಯ ಸಂಪಾದಕ ಬಿ.ಮಹಾದೇವಪ್ಪನವರ ಮುಖಾಂತರ ಹೇಳಿ ಕಳಿಸಿದರು.

ಪತ್ರಿಕೆಯ ವ್ಯವಸ್ಥಾಪಕರಾದ ಶ್ರೀ ವಿಶ್ವನಾಥ ರೆಡ್ಡಿ ಅವರು ಈ ವಿಷಯ ಕೇಳಿ ತುಂಬಾ ಚಿಂತಾ ಕ್ರಾಂತರಾದರು. ಆದರೂ ಧೈರ್ಯಗೆಡಲಿಲ್ಲ. ವಿಶ್ವನಾಥ ರೆಡ್ಡಿ ಅವರ ಮನೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ವಾಸಿಸುವ ರಾಮಗಿರಿ ಹಿರೇಮಠದ ಹತ್ತಿರವೇ ಇತ್ತು ಗುರುಸಿದ್ಧ ಶಾಸ್ತ್ರಿಗಳಿಗೂ ವಿಶ್ವನಾಥ ರೆಡ್ಡಿ ಅವರಿಗೂ ಮಧುರ ಬಾಂಧವ್ಯ, ಅನ್ಯೋನ್ಯ ಸಂಬಂಧ ಇದ್ದೇ ಇತ್ತು. ವಿಶ್ವನಾಥ ರೆಡ್ಡಿ ಅವರ ತಂದೆ ಲಿಂಗೈಕ್ಯ ಮುದ್ನಾಳ ರಾಚನಗೌಡ ಕಾಲದಿಂದಲೂ ಶಾಸ್ತ್ರಿಗಳಿಗೆ ಮಾರ್ಗದರ್ಶಕರಾಗಿದ್ದರು ಕೌಟುಂಬಿಕವಾಗಿಯೂ ಹಿತಚಿಂತಕರಾಗಿದ್ದರು.

ಗುರುಸಿದ್ಧ ಶಾಸ್ತ್ರಿಗಳು ವಿದ್ವಾಂಸರು, ಪ್ರಜ್ಞಾವಂತರು, ಸಮಾಜ ಕಳಕಳಿಯುಳ್ಳವರು ಅಪ್ಪಟವಾಗಿ ಬಸವ ತತ್ವ ಅನುಯಾಯಿಗಳು ಎಂಬ ಅಪಾರವಾದ ಗೌರವ

ವಿಶ್ವನಾಥ ರೆಡ್ಡಿ ಮುದ್ನಾಳ ಅವರಲ್ಲಿಯೂ ಇತ್ತು. ವಿಶ್ವನಾಥ ರೆಡ್ಡಿ ಅವರದು ನೇರ ನುಡಿ-, ನೇರ ನಡೆಯುಳ್ಳವರು ಅದರಲ್ಲಿಯೂ ನಿಷ್ಠೂರ ಮಾತಿನವರು. ಎಂಬ ಅಭಿಮಾನ ಶಾಸ್ತ್ರಿಗಳಲ್ಲಿಯೂ ಇತ್ತು ಹೀಗಾಗಿ ಶಂಕರಾನಂದ ಮುದ್ರಣಾಲಯದಲ್ಲಿ "ವಿಶ್ವ ಕಲ್ಯಾಣ" ವಾರ ಪತ್ರಿಕೆ ಸುಂದರವಾಗಿ ಮುದ್ರಣಗೊಂಡು ಹೊರಬಂದು ಕನ್ನಡಿಗರ ಕೈ ಸೇರುತ್ತಿತ್ತು. ಇಷ್ಟು ಪ್ರೀತಿ, ವಿಶ್ವಾಸ ಬಾಂದವ್ಯವುಳ್ಳ ವಿಶ್ವನಾಥ ರೆಡ್ಡಿ ಅವರೇ ಗುರುಸಿದ್ಧ ಶಾಸ್ತ್ರಿಗಳನ್ನು ತಮ್ಮ ಕಾರ್ಯಾಲಯಕ್ಕೆ ಕರೆಯಿಸಿಕೊಂಡು "ನೋಡಿ ಶಾಸ್ತ್ರಿಗಳೇ ನಾವು-ನೀವು ಇದುವರೆಗೂ ಅಣ್ಣ-ತಮ್ಮಂದಿರಂತೆ ಬಂದಿದ್ದೇವೆ 'ವಿಶ್ವಕಲ್ಯಾಣ' ಪತ್ರಿಕೆಗೆ ಪರ್ಯಾಯ ಮುದ್ರಣದ ವ್ಯವಸ್ಥೆ ಮಾಡಿಕೊಳ್ಳರಿ" ಎಂದು ಹೇಳುವ ಅರ್ಥ. ನಿಮ್ಮದೇ ಒಂದು ಮುದ್ರಣಾಲಯ ಸ್ಥಾಪಿಸಿರಿ ಎಂದು ಹೇಳಿದಂತಾಗುತ್ತದೆ. ನಾವು ಮುದ್ರಣಾಲಯ ಸ್ಥಾಪಿಸಿದರೆ ನಮ್ಮ-ನಿಮ್ಮ ನಡುವೆ ಸ್ಪರ್ಧೆ ಏರ್ಪಡುತ್ತದೆ. ಇಲ್ಲಿಯವರೆಗೆ ಶಂಕರಾನಂದ ಮುದ್ರಣಾಲಯ ಒಂದೇ ಇದ್ದು ಎಲ್ಲರೂ ನಿಮ್ಮ ಕಡೆ ಆಗಮಿಸುತ್ತಿದ್ದಾರೆ. ಇನ್ನು ನಮ್ಮದೊಂದು ಮುದ್ರಣಾಲಯ ಬಂದರೆ ಗಿರಾಕಿಗಳು ಸಹಜವಾಗಿಯೇ ನಮ್ಮ ಕಡೆ ಬರುತ್ತಾರೆ. ಆಗ ನಿಮ್ಮ ಮುದ್ರಣಾಲಯ ಕೆಲಸವಿಲ್ಲದೆ ನೀವು ತೊಂದರೆ ಗೀಡಾಗುತ್ತೀರಿ ಯಾಕೆ ಸುಮ್ಮನೆ ಎದುರಾಳಿಗಳನ್ನು ಹುಟ್ಟು ಹಾಕಿಕೊಳ್ಳುತ್ತೀರಿ ಇನ್ನು ಕೆಲವು ದಿವಸ "ವಿಶ್ವ ಕಲ್ಯಾಣ" ಪತ್ರಿಕೆ ನಿಮ್ಮ ಮುದ್ರಣಾಲಯದಲ್ಲಿಯೇ ಮುದ್ರಣವಾಗಲಿ ನೀವು ವಿದಿಸಿದ ದರ ಕೊಡಲು ನಾವು ಸಿದ್ಧರಿದ್ದೇವೆ" ಎಂದು ಪ್ರೇಮಪೂರ್ವಕವಾಗಿಯೇ ಹೇಳಿದರು.

ಆಗ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮ್ಮ ನಿರ್ಧಾರದಲ್ಲಿ ಅವರು ಅಷ್ಟೇ ಅಚಲರಾಗಿದ್ದರು. "ರೆಡ್ಡಿಯವರೇ, ವ್ಯವಹಾರವೆಂದ ಬಳಿಕ ಸ್ಪರ್ಧಾಳುಗಳು ಬಂದೇ ಬರುತ್ತಾರೆ. ನೀವು ಮುದ್ರಣಾಲಯ ಸ್ಥಾಪಿಸದಿದ್ದರೆ ಮತ್ತೆ ಬೇರೆ ಯಾರಾದರೂ ಬಂದೇ ಬರುವರು. ಅಂಥವರನ್ನು ತಡೆಯುವುದು ನಮ್ಮಿಂದ ಸಾಧ್ಯವೇ? ದೇವರು ಅವರವರ ಅನ್ನ ಅವರವರ ಪದರಿನಲ್ಲಿ ಕಟ್ಟಿಕೊಟ್ಟಿದ್ದಾನೆ. ನಮ್ಮ ದುಡಿಮೆ, ನಮ್ಮ ಆಸ್ತಿ ನಮಗಿರುತ್ತದೆ. ನಿಮ್ಮ ದುಡಿಮೆ ನಿಮ್ಮ ಶ್ರಮ ನಿಮ್ಮ ಪ್ರೀತಿ ನಿಮಗಿರುತ್ತದೆ. ಯಾರ ಹಂಗೂ, ಗಿಂಗೂ ಇಲ್ಲದೆ "ವಿಶ್ವ ಕಲ್ಯಾಣ" ಪತ್ರಿಕೆ ತನ್ನದೇ ಆದ ಸ್ವತಂತ್ರ ಮುದ್ರಣ ಹೊಂದಿ ಇನ್ನೂ ಪತ್ರಿಕೆ ಹೆಚ್ಚು ಸುಂದರವಾಗಿಯು ಮುದ್ರಣಗೊಂಡು ಸಾರೋದ್ಧಾರವಾಗಿ ಹೊರಬರಲಿ. ಇದಕ್ಕೆ ನನ್ನ ಸಹಕಾರವೂ ಇರುತ್ತದೆ" ಎಂದು ತಮ್ಮ ಪ್ರಾಮಾಣಿಕ ಸಲಹೆ-ಸೂಚನೆ ನೀಡಿದರು ಶಾಸ್ತ್ರಿಗಳು.

ಶಾಸ್ತ್ರಿಗಳ ಮಾತು ಕೇಳಿ ಅವರ ಪ್ರಾಮಾಣಿಕ ಅನಿಸಿಕೆಗೆ ಬೆಲೆ ಕೊಟ್ಟು ವಿಶ್ವನಾಥ ರೆಡ್ಡಿ ಅವರು ಯಾದಗಿರಿಯಲ್ಲಿ "ವಿಶ್ವ ಕಲ್ಯಾಣ' ಮುದ್ರಣ ಪ್ರಾರಂಭಿಸಿಯೇ

ಬಿಟ್ಟರು. ಮುದ್ರಣದ ಪ್ರಾರಂಭದ ಪೂಜೆಗೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳೇ ಬಂದಿದ್ದರು. ವಿಶ್ವಕಲ್ಯಾಣ ಮುದ್ರಣಾಲಯ ಚೆನ್ನಾಗಿಯೇ ನಡೆಯಿತು. ರೆಡ್ಡಿ-ಶಾಸ್ತ್ರಿಗಳ ಮಧ್ಯ ಸ್ಪರ್ಧೆ ಏರ್ಪಡಲಿಲ್ಲ. ಶಾಸ್ತ್ರಿಗಳು ರೆಡ್ಡಿ ಅವರಿಗೆ ತುಂಬಾ ಸಹಕಾರಿಯಾಗಿಯೇ ಇದ್ದರು. ಕಾರಣಾಂತರದಿಂದ ಮುದ್ರಣಾಲಯ "ಬಸವ ಮುದ್ರಣಾಲಯ" ವೆಂದು ಗುಲಬರ್ಗಕ್ಕೆ ವರ್ಗಾಯಿಸಲ್ಪಟ್ಟಿತು. ರೆಡ್ಡಿ ಅವರು ವಿಶ್ವ ಕಲ್ಯಾಣ ವಾರಪತ್ರಿಕೆ ಹೊರಡಿಸಿ ಕನಿಷ್ಠ ಎರಡು ದಶಕಗಳವರೆಗೂ ನಡೆಯಿತು ಅಪಾರವಾದ ಕಷ್ಟ-ನಷ್ಟ ಅನುಭವಿಸಿದರು ಕೊನೆಗೆ ಬಲಪಡದೆ ನಿಂತು ಬಿಟ್ಟಿತು. ಶಾಸ್ತ್ರಿಗಳು ಅನುಭವಿಸಿದ ನೋವು ರೆಡ್ಡಿಯವರೂ ಅನುಭವಿಸಿದ್ದನ್ನು ಇಲ್ಲಿ ನಾವು ನೆನೆಯಬಹುದು.

■

# ವಿವಿಧ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸಿದ ಶ್ರೀ ಶಾಸ್ತ್ರಿಗಳು

ಬಸವ ಜಯಂತೋತ್ಸವ: ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ೧೯೩೯-೧೯೪೦ ರ ಅವಧಿಯಲ್ಲಿ ಅಂದರೆ ವಿದ್ಯಾಭ್ಯಾಸ ಮುಗಿಸಿಕೊಂಡು ಸಿಕಂದರಾಬಾದಿನಿಂದ ಯಾದಗಿರಿಗೆ ಬಂದ ವರ್ಷವೇ ಬಸವಜಯಂತಿಯನ್ನು ಆಚರಿಸಲು ನಿರ್ಧರಿಸಿದರು.

ಅದು ನಿಜಾಮರ ಆಳ್ವಿಕೆಯ ಕಾಲ. ಮುಸಲ್ಮಾನ ಅರಸರ ದಬ್ಬಾಳಿಕೆಯ ವಿರುದ್ಧ ಹಿಂದುಗಳ ಸಂಘಟನೆಯ ದ್ಯೋತಕವಾಗಿಯೂ ಪ್ರತಿ ವರ್ಷವೂ ಜಯಂತೋತ್ಸವ ತುಂಬ ವೈಶಿಷ್ಟ್ಯ ಪೂರ್ಣವಾಗಿ ಜರಗುತ್ತಿತ್ತು. ಬಸವೇಶ್ವರ ಭಾವಚಿತ್ರ ಇರುವ ಎತ್ತಿನ ಬಂಡಿಯನ್ನು ಅಲಂಕರಿಸಿ ನೂರಾ ಒಂದು ಎತ್ತುಗಳನ್ನು ಬಂಡಿಗೆ ಹೂಡಿ ಸಕಲ ವಾದ್ಯ ವೃಂದಗಳೊಂದಿಗೆ ಮೆರವಣಿಗೆ ಹೊರಡುತ್ತಿತ್ತು. ಈ ಬಂಡಿಗೆ ಊರಿನ ಎಲ್ಲಾ ಜಾತಿ ಮತ ಪಂತ ಪಂಗಡಗಳ ಜನರು ತಮ್ಮ ಮನೆಯ ಎತ್ತುಗಳನ್ನು ಅಲಂಕರಿಸಿ ಬಂಡಿಗೆ ತಂದು ಹೂಡಿ ತಾವೂ ಮೆರವಣಿಗೆಯಲ್ಲಿ ಪಾಲುಗೊಳ್ಳುತ್ತಿದ್ದರು. ಸಾಯಂಕಾಲ ಬಸವೇಶ್ವರರ ತತ್ವ ಕುರಿತು ಉಪನ್ಯಾಸಗಳು ಇರುತ್ತಿದ್ದವು. ಹೀಗೆ ಆಚರಿಸುವುದು ಒಂದು 'ಕನ್ನಡದ ಹಬ್ಬ' ಅರ್ಥಾತ್ 'ಬಸವನ ಹಬ್ಬ' ವೆಂದು ಜನರು ಭಾವಿಸಿಕೊಳ್ಳುತ್ತಿದ್ದರು. ಈ ಹಬ್ಬದ ಆಚರಣೆಗೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳೇ ನಾಯಕತ್ವ ವಹಿಸಿಕೊಳ್ಳುತ್ತಿದ್ದರು. ವರ್ಷ ವರ್ಷಕ್ಕೆ ಈ ಬಸವ ಜಯಂತೋತ್ಸವ ತನ್ನದೇ ಆದ ಒಂದು ಮೆರಗು ರೂಪು, ವೈಶಿಷ್ಟ್ಯ ಪಡೆಯುತ್ತಲೇ ಬಂದಿತು.

ಕ್ರಿ. ಶ.೧೯೪೫-೧೯೪೬ ಇರಬಹುದು. ಮೇ ತಿಂಗಳಲ್ಲಿ ಬಸವ ಜಯಂತ್ಯೋತ್ಸವ ಪ್ರತಿವರ್ಷದಂತೆ ವಿಜೃಂಬಣೆಯಿಂದ ಜರುಗಿತು. ಬಸವೇಶ್ವರ ಭಾವ ಚಿತ್ರದ ಪಲ್ಲಕ್ಕಿಯ ಹಿಂದೆ ಅಸಂಖ್ಯಾತ ಸುಮಂಗಲೆಯರು ಕಳಸ-ಕನ್ನಡಿ ಹಿಡಿದುಕೊಂಡು ಹೊರಟಿದ್ದರು. ಪಲ್ಲಕ್ಕಿ ಗಾಂಧೀ ಚೌಕಿಗೆ ಬಂದಾಗ ತೆಂಗಿನಕಾಯಿ ಕರ್ಪೂರ ಅರ್ಪಿಸಲು ಜನರು ಅವಸರ ಮಾಡತೊಡಗಿದರು. ಇದರಿಂದ ನೂಕು ನುಗ್ಗಲು ಹೆಚ್ಚಾಯಿತು. ಅದು ರಜಾಕಾರದ ಪ್ರಾಭಲ್ಯದ ಕಾಲ. ಎಂತಹ ಸಂಭಾವಿತ

ಮುಸಲ್ಮಾನರೂ ತಲೆ ಕೆಡಿಸಿಕೊಳ್ಳುವಂತಹ ಕಾಲ ಅದಾಗಿತ್ತು. ಆ ಪ್ರಕಾರ ಯಾದಗಿರಿ ಮುಸಲ್ಮಾನರಲ್ಲಿಯೂ ಅಂತಹ ಕೆಟ್ಟ ರೋಷ ತುಂಬಿಕೊಂಡಿತ್ತು ಹೊಟ್ಟೆ ಕಿಚ್ಚೊ ಬಿದ್ದತ್ತು. ಹೊರಗೆ ತೋರಗೊಡದಿದ್ದರೂ ಒಳಗೆ ಬೂದಿ ಮುಚ್ಚಿದ ಕೆಂಡದಂತೆ ನಿಗಿನಿಗಿಸುತ್ತಿತ್ತು. ಮೆರವಣಿಗೆ ಆಯ ಕಟ್ಟಿನ ಸ್ಥಳಕ್ಕೆ ಬರುತ್ತಲೆ ರಸ್ತೆಯ ನಿರ್ಮಾಣಕ್ಕಾಗಿ ಹಾಕಿದ ಕಾಂಕ್ರಿಟ್ ಕಲ್ಲುಗಳನ್ನು ತೆಗೆದುಕೊಂಡು ಪಲ್ಲಕ್ಕಿ ಇದ್ದಕಡೆ ಬೀಸತೊಡಗಿದರು. ಕವಣೆಯಲ್ಲಿ ಕಲ್ಲು ಇಟ್ಟು ಹೊಡೆದಂತೆ ಕಲ್ಲುಗಳು ಒಂದೇ ಸಮನೆ ಬರತೊಡಗಿದವು. ರಭಸದಿಂದ ಬರುತ್ತಿರುವ ಕಲ್ಲಿನ ಹೊಡೆತಕ್ಕೆ ನೆರೆದ ಜನರೆಲ್ಲರೂ ಚೆಲ್ಲಾಪಿಲ್ಲಿಯಾಗಿ ಅಲ್ಲಲ್ಲಿ ಮರೆಯಾದರು. ಕೆಲವರಿಗೆ ತೂರಿಬಂದ ಕಲ್ಲುಗಳು ರಭಸದಿಂದ ತೂರಿಬಂದರೂ ಯಾವ ಅಪಾಯಗಳು ಸಂಭವಿಸಲಿಲ್ಲ. ಪಲ್ಲಕ್ಕಿ ಬಂದು ನಿಂತಲ್ಲಿ ಪೋಲಿಸ್ ಠಾಣೆಯಿತ್ತು. ಅಲ್ಲಿಯೇ ಪಲ್ಲಕ್ಕಿ ಇಳಿಸಿದ್ದರು ಈ ಮೆರವಣಿಗಯಲ್ಲಿ ವಿಶ್ವನಾಥ ರೆಡ್ಡಿ ಮುದ್ನಾಳ, ಡಾ.ಎಸ್.ಆರ್.ಕಂಠಿ, ಎನ್. ರುದ್ರಪ್ಪ ವಕೀಲರು, ಸಜ್ಜನ ಶೆಟ್ಟಿ, ಹಂಪಣ್ಣ, ವೀರಣ್ಣ ಚಟ್ನಳ್ಳಿ ,ವಿರೂಪಕ್ಷಪ್ಪ ಯಕ್ಕಳ್ಳಿ ಮೊದಲಾದ ಗಣ್ಯ ವ್ಯಕ್ತಿಗಳು ಮೆರವಣಿಗೆಯಲ್ಲಿ ಪಾಲುಗೊಂಡಿದ್ದರು. ವಡಿ ಮನೆತನದವರೂ ಮೆರವಣಿಗೆಯಲ್ಲಿ ಪಾಲುಗೊಂಡಿದ್ದರು. ಮೆರವಣಿಗೆ ನೇತೃತ್ವ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳೇ ವಹಿಸಿಕೊಂಡಿದ್ದರು. ಶಾಸ್ತ್ರಿಗಳು ಅಚಲರಾಗಲಿಲ್ಲ. ಮೆರವಣಿಗೆಯಲ್ಲಿ ಅಸ್ತವ್ಯಸ್ತ ಆದವರನ್ನು ಒಂದುಕಡೆ ಇಳಿಸಿ ಅವರಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಿಕೊಟ್ಟು ಉಪಚರಿಸಿದರು.

ಮರುದಿವಸ ಶಾಂತಿ ಸಮಿತಿ ಸಭೆ ಕರೆದು ಜನರಿಗೆ ತಿಳಿಹೇಳಿ ಊರ ಪ್ರಮುಖರಾದ ಕರನಗೌಡ ಮಾನಸಗಲ್ಲ, ಚೆಟ್ನಳ್ಳಿ ವೀರಣ್ಣ ಮುಂತಾದ ಪುರ ಪ್ರಮುಖರನ್ನೊಳಗೊಂಡ ಮೆರವಣಿಗೆ ಹೊರಟು ಮತ್ತೆ ಮೆರವಣಿಗೆ ಜನಾಕರ್ಷಣೆ ಪಡೆಯಿತು. ಈ ಸಂದರ್ಭದಲ್ಲಿ ಶಾಸ್ತ್ರಿಗಳು ತಳೆದ ಧೈರ್ಯ ಮಾಡಿದ ಸಾಹಸಕ್ಕೆ ಜನರು ಬೆರಗಾಗಿ ಬೆರಳು ಕಚ್ಚಿಕೊಂಡರು. ವಿಶ್ವ ಹಿಂದೂಪರಿಷತ್ತು, ಧಾರ್ಮಿಕ ಚಿಂತನೆಯಲ್ಲಿ ಸಮನ್ವಯ ದೃಷ್ಟಿಕೋನವುಳ್ಳವರಾಗಿದ್ದ ಗುರುಸಿದ್ಧ ಶಾಸ್ತ್ರಿಗಳು ಹೊಸದಾಗಿ ಅಸ್ತಿತ್ವಕ್ಕೆ ಬಂದ ವಿಶ್ವಹಿಂದು ಪರಿಷತ್ತಿನೊಂದಿಗೆ ಮಧುರ ಸಂಬಂಧವನ್ನು ಇಟ್ಟು ಕೊಂಡಿದ್ದರು.

ಶ್ರೀ ಬಸವರಾಜ ಪಾಟೀಲ ಸೇಡಂ ಅವರ ಅಭಿಪ್ರಾಯದಂತೆ ವಿಶ್ವ ಹಿಂದೂಪರಿಷತ್ತಿನ ಯಾದಗಿರಿ ಶಾಖೆಯ ಉಪಾಧ್ಯಕ್ಷರಾಗಿಯೂ, ಗುಲಬರ್ಗಾ ಜಿಲ್ಲಾ ಶಾಖೆಯ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು.

ಬೇರ ಬೇರೆ ಧರ್ಮಗಳು ಆಕ್ರಮಣ ಮನೋಧರ್ಮ ತಳೆಯುತ್ತಿದ್ದ ಈ .ಕಾಲದಲ್ಲಿ ಭಾರತೀಯ ಸನಾತನ ಧರ್ಮ ಸಂರಕ್ಷಣೆ ಮಾಡಿಕೊಳ್ಳುವುದು ಅತ್ಯಂತ

ಅವಶ್ಯ ಇರುವ ದಿನಮಾನದಲ್ಲಿ ಭಾರತೀಯ ಸಂಸ್ಕೃತಿಯ ಮೇಲ್ಮೆಗೋಸ್ಕರ ಹೋರಾಡುವ ಸಂಘ-ಸಂಸ್ಥೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಅಷ್ಟೇನು ದೊಡ್ಡ ತಪ್ಪಾಗಲಿಕ್ಕಿಲ್ಲವೆಂದು ಶಾಸ್ತ್ರಿಗಳ ಅಂತರಂಗದ ಅನಿಸಿಕೆಯಾಗಿತ್ತು.

ಅದರಲ್ಲಿ ಹೈದರಾಬಾದ ನಿಜಾಮ ಸಂಸ್ಥಾನದಲ್ಲಿ ಅನೇಕ ಜಾತಿ, ಮತ ಪಂಥ ಪಂಗಡಗಳ ಜನರಿದ್ದರೂ ಅವರೆಲ್ಲರು ಹಿಂದುಗಳು ಎಂಬ ಭಾವನೆಯಿಂದ ಬೆಸಗೊಂಡಿದ್ದರು. ಈ ಒಬ್ಬ ಮನುಷ್ಯನಿಗೆ ಅನ್ಯ ಧರ್ಮಿಯರಿಂದ ಅನ್ಯಾಯವಾದರೆ ಇಡೀ ಹಿಂದು ಸಮಾಜವೇ ಸಿಡಿದೇಳುತ್ತಿತ್ತು. ಅಷ್ಟು ಸುಭದ್ರ ಜಾಳಿಗೆಯಂತೆ ಹೆಣೆದುಕೊಂಡು ನಾವೆಲ್ಲರೂ ಒಂದೆಂಬ ಭಾವನೆಯಿಂದ ಬಾಳುತ್ತಿದ್ದ ಸಮಾಜದ ರಕ್ಷಣೆಗೆ ವಿಶ್ವ ಹಿಂದೂ ಪರಿಷತ್ತು ಸಹಕರಿಸಬಹುದೆಂಬ ಮನೋಧರ್ಮ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳದ್ದಾಗಿತ್ತು. ಯಾವುದೇ ಸಮಾಜದ ಓರ್ವ ವ್ಯಕ್ತಿಗೂ ನೋವಾಗುತ್ತಿದ್ದರೆ ಅವನ ರಕ್ಷಣೆಗೆ ಇಡೀ ಸಮಾಜ ಸಿಡಿದೇಳುತ್ತಿತ್ತು.

ವೀರಶೈವ ಧರ್ಮ ವಿಶಿಷ್ಟ ಸಂಸ್ಕೃತಿಯುಳ್ಳ ವಿಶ್ವ ಧರ್ಮವೆಂಬ ಅಭಿಮಾನವಿತ್ತು. ಪ್ರತಿಯೊಬ್ಬರ ಮಾತೃಭಾಷೆ ಕನ್ನಡ, ಪ್ರತಿಯೊಬ್ಬರ ಮನೆಗೆಲಸ ಒಕ್ಕಲುತನ, ಕೈಗಾರಿಕೆ, ಪ್ರತಿಯೊಬ್ಬರ ಇರುವಿಕೆ ಒಂದೇ ಬಗೆ. ಆಚಾರ, ವಿಚಾರ ಯಾವುದರಲ್ಲಿಯೂ ಭಿನ್ನವೆ ಇಲ್ಲ. ಹೀಗೆ ಜಾಳಿಗೆಯಂತೆ ಹೆಣೆದುಕೊಂಡ ಸಮಾಜ ಬಲಪಡಿಸುವ ಬದಲು ಅದು ಒಡೆಯದಂತಹ ಕೆಲಸ ವಿಶ್ವ ಹಿಂದು ಪರಿಷತ್ತು ಮಾಡುತ್ತದೆ ಎಂಬ ನಂಬಿಕೆ ಶಾಸ್ತ್ರಿಗಳದಾಗಿತ್ತು.

ವಿಶ್ವ ಹಿಂದೂಪರಿಷತ್ತಿನ ಜಿಲ್ಲಾ ಸಮ್ಮೇಳನ ಸ್ವಾಗತಾಧ್ಯಕ್ಷರಾಗಿದ್ದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಯಾದಗಿರಿ ನ್ಯೂ ಕನ್ನಡ ಪ್ರೌಢ ಶಾಲೆಯಲ್ಲಿಯೂ ದ್ವಿತೀಯ ಸಮ್ಮೇಳನ ಗುಲಬರ್ಗಾದಲ್ಲಯೂ ಏರ್ಪಡಿಸಿ ತುಂಬ ಅಚ್ಚು ಕಟ್ಟಾಗಿನಡೆಸಿ ಎಲ್ಲರಿಂದಲೂ ಸೈ ಎನಿಸಿಕೊಂಡರು, ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು.

ವಿಶ್ವಹಿಂದೂ ಪರಿಷತ್ತಿನ ಆಶ್ರಯದಲ್ಲಿ 'ಗೀತಾಂಜಲಿ' ಕಾರ್ಯಕ್ರಮ ತುಂಬ ಅದ್ದೂರಿಯಿಂದ ಆಚರಿಸಲು ನಿರ್ಧರಿಸಲಾಗಿತ್ತು. ಈ ಕಾರ್ಯಕ್ರಮದ ಸಿದ್ಧತೆಗೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಬಹಳಷ್ಟು ಹೆಣಗಾಡಿ ಯಶಸ್ವಿಗೊಳಿಸಿದರು.

ಯಾದಗಿರಿ ನ್ಯೂ ಕನ್ನಡ ಪ್ರೌಢಶಾಲೆಯಲ್ಲಿ ಪ್ರಥಮ ಸಮ್ಮೇಳನ, ಮತ್ತು ದ್ವಿತೀಯ ಸಮ್ಮೇಳನ ಮತ್ತು 'ಗೀತಾಂಜಲಿ' ಕಾರ್ಯಕ್ರಮ ಗಮನಿಸಿದ "ವಿಶ್ವ ಕಲ್ಯಾಣ" ವಾರ ಪತ್ರಿಕೆಯ ಸಂಪಾದಕರಾದ ಬಿ.ಮಹಾದೇವಪ್ಪನವರು "ಶಾಸ್ತ್ರಿಗಳೇ, ವಿಶ್ವ ಹಿಂದು ಪರಿಷತ್ತು 'ಗೀತಾಂಜಲಿ' ಕಾರ್ಯಕ್ರಮದಂತೆ 'ಬಸವಜಯಂತಿ' ಕಾರ್ಯಕ್ರಮ ಏಕೆ ಏರ್ಪಡಿಸಬಾರದು? ಎಂದು ಕೇಳಿದರು" ಆಗ ಗುರುಸಿದ್ಧ

ಶಾಸ್ತ್ರಿಗಳು "ಮಹಾದೇಪ್ಪನವರೇ ನಿಮ್ಮ ಭಾವನೆ ನನಗೆ ಅರ್ಥವಾಗುತ್ತದೆ. ವಿಶ್ವ ಹಿಂದು ಪರಿಷತ್ತಿನ ರೂವಾರಿಗಳು ಸುತ್ತಿ ಬಳಸಿ ರಾಮಾಯಣ, ಮಹಾಭಾರತ ಬಿಟ್ಟು ಹೊರಗೆ ಬರುವುದಿಲ್ಲ. ವಿಶಾಲ ದೃಷ್ಟಿಕೋನದಿಂದ ಆಲೋಚಿಸುವುದೇ ಇಲ್ಲ. ಒಬ್ಬೊಬ್ಬರು ಒಂದೊಂದು ತರ ಎಲ್ಲರೊಡನೆ ನಾವು ಹೊಂದಿಕೊಂಡು ಹೋಗಬೇಕಷ್ಟೆ!" ಎಂದು ಹೇಳಿದರು. ಈಗ ನಾನು ಮೂಲ ಪಂಚಾಚಾರ್ಯಾ ಪೀಠದಿಂದ ಬಂದವನು ಪಂಚಾಚಾರ್ಯರು "ಬಸವ ಜಯಂತಿ" ಆಚರಿಸುವುದಿಲ್ಲ. ನಾನು ತುಂಬ ಅದ್ದೂರಿಯಿಂದ ಕಳಕಳಿಯಿಂದ ಆ ಕಾರ್ಯಕ್ರಮ ಏರ್ಪಡಿಸುತ್ತೇನೆ. ಜನರ ಬೆಂಬಲ ದೊರಕುತ್ತದೆ. ಕಾರ್ಯಕ್ರಮ ಯಶಸ್ವಿಯಾಗುತ್ತದೆ. ನನಗೂ ಅಷ್ಟೇ ಸಂತೋಷ. ನನ್ನೊಡನೆ ಇದ್ದವರಿಗೂ ಸಂತೋಷ. ಕಾರಣ ಬಸವ ತತ್ವದಲ್ಲಿ ಸಮಾನತೆ, ಇದೆ ಸೌಹಾರ್ದತೆ ಇದೆ. ಸಮಾನತೆ ಇದೆ ಸಾಮಾಜಿಕ ಕಳಕಳಿ ಇದೆ ಬಸವಣ್ಣನವರು ಶೋಷಿತ ಜನಾಂಗದ ನಾಲಿಗೆಯಾಗಿದ್ದರು. ಸಮಾಜದ ಕಟ್ಟಕಡೆಯ ಮನುಷ್ಯನ ಹಿತೈಷಿಯಾಗಿದ್ದರು. ಅಂತಹ ದಾರ್ಶನಿಕರನ್ನು ನಾವು ಮುಕ್ತ ಕಂಠದಿಂದ ಹೊಗಳಬೇಕಲ್ಲವೇ? ಎಂದು ಪ್ರಶ್ನೆ ಹಾಕಿದರು.

ಒಟ್ಟಿನಲ್ಲಿ ಶಾಸ್ತ್ರಿಗಳ ದೂರ ದೃಷ್ಟಿ, ವಿಶಾಲ ಹೃದಯ, ಎಲ್ಲರಿಗೂ ಗೊತ್ತಾಗಿತ್ತು. ಅವರು ಹೆಜ್ಜೆ ಹೆಜ್ಜೆಗೂ ತಾತ್ವಿಕ ಘರ್ಷಣೆಗೆ ವೈಚಾರಿಕ ಪಾಂಡಿತ್ಯ ಪ್ರದರ್ಶನಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಒಳ್ಳೆಯ ಕಾರ್ಯ ನಡೆಯುವಲ್ಲಿ ತಮ್ಮ ಕೈಲಾದಷ್ಟು ಸಹಕಾರ ನೀಡಿ ಸೇವೆ ಸಲ್ಲಿಸಿ ಸಮಾಜಕ್ಕೆ ಹಿತವನ್ನು ಬಯಸುತ್ತಿದ್ದರು.

ಹೀಗೆಂದ ಮಾತ್ರಕ್ಕೆ ಅವರು ಅನ್ಯಾಯಕ್ಕೆ ಆಸ್ಪದ ನೀಡುತ್ತಾರೆಂದು ಅರ್ಥವಲ್ಲ. ನಿಜಾಮರ ಕಾಲದಲ್ಲಿ ದೀನದಾರ ಚನ್ನಬಸವೇಶ್ವರರ ಹೆಸರು ಹೇಳಿಕೊಂಡು ಕೆಲವು ಮುಸಲ್ಮಾನರು ದೊಡ್ಡ ಪ್ರಮಾಣದಲ್ಲಿ ಬಂದು ಯಾದಗಿರಿಯಲ್ಲಿ ಒಂದು ಸಭೆಯನ್ನು ಏರ್ಪಡಿಸಿದ್ದರು. ಆಗ ಇನ್ನೂ ಏರು ಜವ್ವನದ ತರುಣ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು "ಶಿವನು ಒಂಟೆ, ಕುರಿ ಬಲಿ ಕೊಟ್ಟು ಪ್ರಾಣಿ ಹಿಂಸೆ ಮಾಡುವ ಇಸ್ಲಾಂ ಧರ್ಮದಲ್ಲಿ ಹುಟ್ಟುವುದು ಸಾಧ್ಯವೇ ಇಲ್ಲ. ಶರಣ ಧರ್ಮದಲ್ಲಿ ಪೂರ್ಣ ಜನ್ಮವುಂಟು ಪುನರ್ ಜನ್ಮವಿಲ್ಲ ಎಂದು ಬಲವಾಗಿ ಖಂಡಿಸಿದರು ಸಂಘಟಿಕರು ಕಕ್ಕಾಬಿಕ್ಕಿಯಾದರು. ಸಭೆ ಅಲ್ಲೋಲ ಕಲ್ಲೋಲವಾಯಿತು. ಯಾದಗಿರಿ ರಾಮಗಿರಿ ಕಟ್ಟಿಮನಿ ಹಿರೇಮಠ ಶಿವ ಶಂಕರ ಸ್ವಾಮಿಗಳು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಬೆಂಬಲ ಸೂಚಿಸಿದರು ಶಾಸ್ತ್ರಿಗಳು ಜಯ ಪ್ರಥರಾದರು.

ಆಗಿನ ಕಾಲದಲ್ಲಿ ಶ್ರೀ ಜಯರಾಮಾಚಾರ್ಯ "ಹರಿಕೀರ್ತನಾಚಾರ್ಯ"ರೆಂದು ತುಂಬ ಪ್ರಸಿದ್ಧಿ ಪಡೆದಿದ್ದರು. ಒಮ್ಮೆ ಯಾದಗಿರಿಯಲ್ಲಿ ಅವರು ಹರಿಕೀರ್ತನ ಮಾಡುತ್ತಿದ್ದರು. ಪ್ರವಚನದ ಅರ್ಧದಲ್ಲಿ "ಹರಿ ಸರ್ವೋತ್ತಮ,. ಶಿವ ವಿಷ್ಣುವಿನ ಸೇವಕ" ಎಂದು ಪ್ರತಿಪಾದಿಸುತ್ತಿರುವಾಗ ಗುರುಸಿದ್ಧ ಶಾಸ್ತ್ರಿಗಳು ಸಭೆಯಲ್ಲಿಯೇ

ಎದ್ದು ನಿಂತು ನನಗೆ ಮಾತನಾಡಲು ತುಸು ಅವಕಾಶ ಕೊಡಿ ಎಂದು ಹೇಳಿದರು.

"ಶ್ರೀ ರಾಮಚಂದ್ರ, ಶ್ರೀಕೃಷ್ಣರು ಅರ್ಚನೆಯ ವೇಳೆಯಲ್ಲಿ ಒಂದು ಕಮಲ ಕಡಿಮೆ ಬೀಳಲು ತಮ್ಮ ನಯನವನ್ನೇ ಅರ್ಪಿಸಿದ ವಿಷ್ಣು ಸಹ ಶಿವನ ಆರಾಧಕರಲ್ಲವೆ?" ಎಂದು ರಾಮಾಯಣ ಮಹಾಭಾರತಗಳ ಉದಾಹರಣೆ ನೀಡಿ ಶಿವ ಪಾರಮ್ಯವನ್ನು ಮೆರೆದದ್ದೂ ನಾವು ಎಂದೂ ಮರೆಯುವುದಿಲ್ಲ. ■

## ಕಾಯಕದಲ್ಲಿ ನಿಷ್ಠೆ–ಆದಾಯದಲ್ಲಿ ಮಿತಿ

ಸಮಯಕ್ಕೆ ಸರಿಯಾಗಿ ಸತ್ಯ ಶುದ್ಧ ಮನಸ್ಸಿನಿಂದ ಕಾಯಕದಲ್ಲಿ ತೊಡಗುವುದು. ಆ ಕಾರ್ಯದಿಂದ ಬರುವ ಆದಾಯಕ್ಕೂ ಮಿತಿ ಹಾಕಿಕೊಂಡು ಮಾಡುವ ಕೆಲಸವೇ ನಿಜವಾದ 'ಕಾಯಕ' ಇಂತಹ ಕಾಯಕದಲ್ಲಿ ತೊಡಗಿದ ಮನುಷ್ಯನಿಗೆ ಹಮ್ಮುಬಿಮ್ಮುಗಳಿರುವುದಿಲ್ಲ. ಸ್ವಾರ್ಥ ಪರಾರ್ಥಕ್ಕೂ ಇಂಬಿರುವುದಿಲ್ಲ. ತಾನು ಸಮರ್ಥ್ಯ ಸಾಧಕನೆಂಬ ಭ್ರಮೆಯೂ ಇರುವುದಿಲ್ಲ. ಗ್ರಹಸ್ಥ–ಸನ್ಯಾಸಿ ಎಂಬ ತಾರತಮ್ಯ ಇರುವುದಿಲ್ಲ. ಸಹಜ ಬದುಕಿನ ಸಮನ್ವಯವೇ 'ಕಾಯಕ' ಇಂತಹ ಕಾಯಕ ತತ್ವ ಜೀವನದಲ್ಲಿ ಅಳವಡಿಸಿಕೊಂಡು ಜಾತಿ, ಮತ, ಪಂಗಡಗಳೆನ್ನದೆ ದೇಶ ಭಾಷೆ ಕಾಲವೆನ್ನದೇ ಎಲ್ಲರೊಡನೆ ಸಮರಸಗೊಂಡು ಮುನ್ನಡೆದ ಗುರುಸಿದ್ಧ ಶಾಸ್ತ್ರಿಗಳು ಶ್ರೀ ಶಂಕರಾನಂದ ಮುದ್ರಣಾಲಯ ನಡೆಸಿಕೊಂಡು ಹೊರಟಿದ್ದರು.

ಅಂದಿನ ನಿಜಾಂ ಪ್ರಾಂತದಲ್ಲಿ ಶ್ರೀ ಶಂಕರಾನಂದ ಏಕೈಕ ಮುದ್ರಣಾಲಯ ಅದು ಇರುವುದು 'ಯಾದಗಿರಿಯಲ್ಲಿ ಮಾತ್ರ ಈ ಮುದ್ರಣಾಲಯದ ಮಾಲಿಕರು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮ್ಮದೊಂದೇ ಮುದ್ರಣಾಲಯ ಇಲ್ಲಿ ಬರುವವರು ತಮ್ಮ ಶಿಷ್ಯರು, ಭಕ್ತ ವೃಂದ. ಈ ಶಿಷ್ಯರ ಬಳಗಕ್ಕಾಗಲಿ, ಸದ್ಭಕ್ತ ವೃಂದಕ್ಕಾಗಲಿ ಅವರು ಎಂದೂ ಮನ ನೋಯಿಸುತ್ತಿರಲಿಲ್ಲ. ಅವರ ಕೆಲಸಕ್ಕೆ ತಕ್ಕ ದರ ಹಚ್ಚಿ ಹಣ ಪಡೆದುಕೊಳ್ಳುತ್ತಿದ್ದರು. ಒಬ್ಬೊಬ್ಬರು ಕೆಲಸಕ್ಕೆ ಮೆಚ್ಚಿ ಹಣ ಕೊಟ್ಟರೂ ತೆಗೆದುಕೊಳ್ಳುತ್ತಿರಲಿಲ್ಲ. ಕೆಲಸವಿದೆ ಎಂದೂ ಹಗಲೂ–ರಾತ್ರಿ ದುಡಿಯುವವರೂ ಅಲ್ಲ. ಮುಂಜಾನೆ ೮ ಗಂಟೆಗೆ ಕೆಲಸ ಪ್ರಾರಂಭವಾದರೆ ಸಂಜೆ ೮ಗಂಟೆಗೆ ಕೆಲಸ ನಿಲ್ಲಿಸಿ ಬಿಡುತ್ತಿದ್ದರು "ಇದು ಕೂಡಲ ಸಂಗಮ ದೇವನೊಲಿಸಲು ಬಂದ ಪ್ರಸಾದ ಕಾಯ" ಎಂದು ಮನಸ್ಸಿನೊಡನೆ ದೇಹದಂಡನೆಗೂ ಅವಕಾಶ ಕೊಡುತ್ತಿರಲಿಲ್ಲ. ಅಂತೆಯೇ ಮುದ್ರಣಾಲಯದಲ್ಲಿ ಶಾಂತಮೂರ್ತಿ ಪರಿಸಿ ಮಠದ ಚನ್ನಬಸವ ಶಾಸ್ತ್ರಿ, ಅಮರನಾಥಸ್ವಾಮಿ ಹಯ್ಯಾಳ ಕೆಲಸ ಮಾಡುವ ಸಿಬ್ಬಂದಿ, ಇವರೆಲ್ಲರೂ ಇದು ನಮ್ಮ ಮುದ್ರಣಾಲಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ನೆಮ್ಮದಿಯಿಂದ ಕೆಲಸ ಮಾಡುತ್ತಿದ್ದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮ್ಮ ಶಿಷ್ಯರ, ಭಕ್ತರ ಮಕ್ಕಳ ವರ–ಕನ್ಯಾ ನೋಡುವಲ್ಲಿ ಇವರೇ ಮುಂದಾಗಬೇಕು ನಿಶ್ಚಯ ಕಾರಣಕ್ಕೆ ಇವರೇ

ಮುಂದಿರುತ್ತಿದ್ದರು. ಅಚ್ಚು ಕಟ್ಟಾಗಿ ಲಗ್ನ ಪತ್ರಿಕೆಗಳನ್ನು ಮುದ್ರಣಗೊಳಿಸುವ ಕೆಲಸ ಇವರ ಪಾಲಿಗೆ ಇರುತಿತ್ತು. ಭೂಮಿ ಪೂಜೆ ಮಾಡಲು ಹೋಗುತ್ತಿದ್ದರು. ಬಾಗಿಲು ಚೌಕಟ್ಟು ಕೂಡಿಸಲು ಇವರನ್ನೇ ಕರೆಯುತ್ತಿದ್ದರು. ಗೃಹಪ್ರವೇಶ, ಅಂಗಡಿ ಪ್ರಾರಂಭೋತ್ಸವ ದೀಪಾವಳಿ ಲಕ್ಷ್ಮೀ, ಸರಸ್ವತಿ ಪೂಜೆ ಇವರಿಲ್ಲದೆ ಆಗುತ್ತಿರಲಿಲ್ಲ. ಕೂರಿಗೆ ಪೂಜೆ, ರಾಶಿ ಪೂಜೆಗೆ ಶಾಸ್ತ್ರಿಗಳೇ ಬರಬೇಕು. ಹುಟ್ಟಿದ ಕೂಸಿಗೆ ಅಯ್ಯಾಚಾರ ಇವರಿಂದಲೇ ನಡೆಯಬೇಕು. "ವರದ ಶಂಕರ ಕಥೆ" ಹೇಳುವುದೇ ಇರಲಿ, ಅಂಗಡಿಗಳ ಪ್ರಾರಂಭೋತ್ಸವೇ, ಇರಲಿ ಗುದ್ದಲಿಯ ಪೂಜೆ ಇರಲಿ, ಗೃಹ ನಿರ್ಮಾಣ ಬಾಗಿಲು ಚೌಕಟ್ಟು ಕೂಡಿಸುವುದೇ ಇರಲಿ, ಇತ್ಯಾದಿ ಕಾರ್ಯಕ್ರಮಗಳಿಗೆ ಯಾರೆ ಕರೆಯಲಿ ಅವರಲ್ಲಿ ಜಾತಿ, ಭೇದವೆಣಿಸದೆ ಆ ಎಲ್ಲ ಕಾರ್ಯಕ್ರಮಗಳಿಗೆ ಹಸನ್ಮುಖದಿಂದ ಹೋಗಿ ಬರುತ್ತಿದ್ದರು. ಅದರಲ್ಲಿ ಬಡವರ ಮನೆಗೆ ಮೊದಲು ಹೋಗಿ ಬರುತ್ತಿದ್ದರು. ಅವರ ಶಿಷ್ಯ ಸಮುದಾಯ ಭಕ್ತವೃಂದ ಹೇಳ ತೀರದಷ್ಟು ದೊಡ್ಡದು ಇಡೀ ಸಮಾಜವೇ ಅವರ ಅಭಿಮಾನಿಗಳ ಬಳಗವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಎಲ್ಲಾ ಶುಭ ಕಾರ್ಯಗಳಿಗೆ ಶಾಸ್ತ್ರಿಗಳು ಹೋಗಿ ಬರುತ್ತಿದ್ದರು ಬಾಯಿ ಬಿಚ್ಚಿ ಎಂದೂ ಯಾರಿಗೂ ಏನನ್ನು ಕೇಳುತ್ತಿರಲಿಲ್ಲ ಕೊಟ್ಟದ್ದನ್ನು ಕೈ ಮುಚ್ಚಿ ತೆಗೆದುಕೊಂಡು ಬರುತ್ತಿದ್ದರು. ಯಾವದಕ್ಕೂ ಎಂದು ಆಸೆಪಡುತ್ತಿದ್ದಿದಿಲ್ಲ. ಈ "ಸಮಾಜಕ್ಕೆ ನಾನೇ ಏನಾದರೂ ಕೊಡಬೇಕು ಸಮಾಜದಿಂದ ನಾನು ಏನನ್ನು ಬಯಸಬಾರದು" ಎಂದು ಶಾಸ್ತ್ರಿಗಳು ಸದಾ ತೃಪ್ತಿಯ ಜೀವನ ಸಾಗಿಸುತ್ತಿದ್ದರು. ಸದಾ ನಗು ಮುಖದಿಂದ ಈ ಪ್ರಪಂಚವನ್ನು ಗೆದ್ದು ಕೊಂಡು ಬಾಳಿದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಪಂಚ ಪೀಠದ ಮೂಲದಿಂದ ಬಂದಿದ್ದರೂ ಬಸವಾದಿ ಶಿವ ಶರಣರ ದ್ವೇಷಿಗಳಾಗಲಿ, ವಿರಕ್ತ ಸಂಪ್ರದಾಯದವರ ಶತ್ರುಗಳಾಗಿರಲಿಲ್ಲ. ಮುಖ್ಯವಾಗಿ ಶಾಸ್ತ್ರಿಗಳ ದೃಷ್ಟಿ ಸಮನ್ವಯ ದೃಷ್ಟಿಯಾಗಿತ್ತು. ತಾರುಣ್ಯದಲ್ಲಿಯೇ ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ ಮಹಾನುಭಾವಿ ಬಸವಣ್ಣನವರ ಆದ್ಯ ಪ್ರಶಂಸಕರಾಗಿದ್ದರು ಹೀಗೆಂದ ಮಾತ್ರಕ್ಕೆ ಪಂಚಾಚಾರ್ಯರನ್ನು ಕಡೆಗಣಿಸಿದವರಲ್ಲ. ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ವೀರಶೈವ ಸಮಾಜದ ಮೇಲೆ ತಮ್ಮ ಯಜಮಾನಿಕೆಯನ್ನು ಹೇರಿದವರೂ ಅಲ್ಲ. ಯಾದಗಿರಿಯಲ್ಲಿ ವೀರಶೈವ ಸಮಾಜ ಬಹಳ ಹಿಂದಿನ ಕಾಲದಿಂದಲೂ ಒಂದು ಸಂಘಟಿತ ಸಂಸ್ಥೆಯಾಗಿ ಕೆಲಸಮಾಡುತ್ತಿದ್ದರೂ ಒಮ್ಮೆಯೂ ವೀರಶೈವ ಸಮಾಜದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದವರಲ್ಲ. ನಿಸ್ವಾರ್ಥದಿಂದ ಸೇವೆ ಸಲ್ಲಿಸುವವರಿಗೆ ಪದಾಧಿಕಾರದಹಂಗು ತಮಗೇಕೆಂದು ಕೇವಲ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸಮಾಜದ ಒಳಿತಿಗಾಗಿ ಸೇವೆ ಸಲ್ಲಿಸುತ್ತ ಬಂದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಇದ್ದಲ್ಲಿ ಇವರು ಪಂಚಾಚಾರ್ಯರು ಇವರು ವಿರಕ್ತರು ಎಂಬ ಭೇದ ಭಾವ ಇರುತ್ತಿರಲಿಲ್ಲ. ಎಲ್ಲರೂ ಒಂದೆಂಬ ಭಾವ ಬೇರೂರಿತ್ತು. ಪಂಚಾಚಾರ್ಯ ಮಹಾ ಸನ್ನಿದಿಯುವರ ಸಮಕ್ಷಮದಲ್ಲಿ ಬಸವಣ್ಣನವರ ಮಹಾನುಭಾವತೆಯನ್ನು ಮತ್ತು ಮಹಾಮಾನವೀಯತೆಯನ್ನು ಬಣ್ಣಿಸಿ ಜನರನ್ನುಸನ್ಮಾರ್ಗಕ್ಕೆ ತರುತ್ತಿದ್ದರು. ಗುರುವರ್ಗದವರು ಮತ್ತು ವಿರಕ್ತರು ಕೂಡಿಕೊಂಡು ಹೋಗವುದರಲಿಯೇ ವೀರಶೈವ ಧರ್ಮದ ಶ್ರೇಯಸ್ಸಿದೆಯೆಂದು ಬಲವಾಗಿ ಪ್ರತಿಪಾದಿಸುತ್ತಿದ್ದರು. ತಾವು ರಾಮಗಿರಿ ಕಟ್ಟಿಮನಿ ಹಿರೇಮಠದ ಶಿಷ್ಯರಾಗಿದ್ದರೂ ಗುರುಮಠಕಲ್ಲ ವಿರಕ್ತ ಮಠದ ಶ್ರೀ ಮ.ನಿ.ತ್ವ.ಪ್ರ. ಶಾಂತವೀರ ಮಹಾಸ್ವಾಮಿಗಳೊಂದಿಗೆ ನಿಕಟ ಸಂಪರ್ಕ ಉಳ್ಳವರಾಗಿದ್ದರು. ಆ ಕಾಲದಲ್ಲಿ ಶ್ರೀ ಗುರುಮಠಕಲ್ಲ ಶಾಂತವೀರ ಮಹಾ ಸ್ವಾಮಿಗಳು ಬಸವ ತತ್ವದ ಅಗ್ರಗಣ್ಯ ಪ್ರಚಾರಕರಾಗಿದ್ದರು. ಇಂತಹ ಕಟ್ಟಾಭಿಮಾನಿಗಳಾದ ಶಾಂತವೀರ ಮಹಾಸ್ವಾಮಿಗಳು ಯಾದಗಿರಿಗೆ ಬಂದಾಗ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಬರಮಾಡಿಕೊಂಡು ಅನೇಕ ವಿಷಯಗಳನ್ನು ಕುರಿತು ಸಮಾಲೋಚಿಸುತ್ತಿದ್ದರು.

ಯಾನಗುಂದಿಯ ಮಾತೆ ಮಾಣಿಕೇಶ್ವರಿ ಅವರು ತಮ್ಮ ಆಧ್ಯಾತ್ಮ ಜೀವನದ ಆರಂಭದ ದಿನಗಳಲ್ಲಿ ಯಾನಾಗುಂದಿಯ ಬೆಟ್ಟದ ಮೇಲಿ ಬಸವ ಪುರಾಣ ಆಯೋಜಿಸಿದಾಗ ಗುರುಮಠಕಲ್ಲ ಶಾಂತವೀರ ಮಹಾಸ್ವಾಮಿಗಳು ಮತ್ತು ಗುರುಸಿದ್ಧ ಶಾಸ್ತ್ರಿಗಳು ಹೆಗಲಿಗೆ ಹೆಗಲು ಕೊಟ್ಟು ದುಡಿದು "ಪುರಾಣ" ಕಾರ್ಯ ಅರ್ಥ ಪೂರ್ಣವಾಗಿ ನಡೆಯಲು ಅನುಕೂಲಮಾಡಿಕೊಟ್ಟರು. ಈ ವಿಷಯ ಕುರಿತು ಜನರು ಇಂದಿಗೂ ಮಾತಾಡುತ್ತಾರೆ. ಆಧ್ಯಾತ್ಮ ಜೀವಿ "ಮಾತೆ ಮಾಣಿಕೇಶ್ವರಿ" ಕುರಿತು ಒಂದು ಚಿಕ್ಕ ಪುಸ್ತಕ ಬರೆದು ಅದನ್ನು ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಮುದ್ರಿಸಿ ಜನರಿಗೆ ಪುಕ್ಕಟೆಯಾಗಿ ಹಂಚಿ ತಮ್ಮ ಭಕ್ತಿ ಪಾರಮ್ಯವನ್ನು ಮೆರೆದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ರಂಭಾಪುರಿ ಜಗದ್ಗುರು ಮಹಾಸನ್ನಿಧಿಯವರನ್ನು ಯಾದಗಿರಿಗೆ ಬರಮಾಡಿಕೊಂಡು ಅಡ್ಡಪಲ್ಲಕ್ಕಿ ಉತ್ಸವ ಏರ್ಪಡಿಸಬೇಕೆಂಬ ಬಯಕೆ ಬಹುದಿನಗಳಿಂದಲೂ ಇತ್ತು ಆದರೂ ಕಾಲ ಕೂಡಿ ಬರುವವರೆಗೂ ಕಾಯಬೇಕಿತ್ತು. ಶಾಸ್ತ್ರಿಗಳು ಕಾಯ್ದು ನೋಡಿದರು. ಒಮ್ಮೆ ಶಾಸ್ತ್ರಿಗಳಿಗೆ ಅವರ ಹಿತೈಷಿಗಳಲ್ಲೊಬ್ಬರು "ಮಹಾಸನ್ನಿಧಿಯವರು ಬೀಡು ಬಿಟ್ಟಲ್ಲಿಗೆ ಬಂದು ದರ್ಶನ ಪಡೆದುಕೊಂಡು ಹೋಗುತ್ತೀರಿ ನಿಮ್ಮ ಊರು ಯಾದಗಿರಿಗೆ ಮಹಾಸನ್ನಿಧಿಯವರನ್ನು ಬರಮಾಡಿಕೊಳ್ಳುವುದು ಯಾವಾಗ?" ಎಂದು ಕೇಳಿದರಂತೆ ಆಗ ಶಾಸ್ತ್ರಿಗಳು "ಅದಕ್ಕೂ ಕಾಲ ಬರುತ್ತದೆ ಕಾಲ ಬರುವವರೆಗೂ ಕಾಯಬೇಕಾಗುತ್ತದೆ" ಎಂದು ನಗು ನಗುತ್ತಲೇ ಹೇಳಿದರಂತೆ.

ನಿಜವಾಗಿ ಯಾದಗಿರಿಯು ರಾಜಕೀಯ ಕುಸ್ತಿಯ ಕಣ ಈ ಊರಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಕೆಸರಿನಲ್ಲಿದ್ದ ಕಮಲದಂತೆ ಇದ್ದರು. ಅದು ೧೯೬೭ನೆ ಇಸವಿ ನಾಲ್ಕನೆಯ ಮಹಾ ಚುನಾವಣೆಯ ಸಮರ. ವಿಶ್ವನಾಥ ರೆಡ್ಡಿ ಅವರ ಎದುರಾಳಿ ಲಿಂಗೇರಿ ಕೋನಪ್ಪನವರು. ಚುನಾವಣೆಯ ಹಣಾಹಣಿ ಅದು ನಿಜವಾಗಿಯೂ ದೇಶಭಕ್ತರ ಕುಸ್ತಿಯ ಕಣ. ತುರುಸಿನ ಈ ಹೋರಾಟ, ಜಿದ್ದಾಜಿದ್ದಿ ನಿಂತು ನೋಡುವಂತಿತ್ತು. ಚುನಾವಣೆಯಲ್ಲಿ ವಿಶ್ವನಾಥ ರೆಡ್ಡಿ ಅವರು ಜಯಗಳಿಸಿದರು. ಆದರೆ ನ್ಯಾಯಾಲಯದ ಮೂಲಕ ೧೯೬೮ರಲ್ಲಿ ತಮ್ಮ ಎಂ.ಎಲ್.ಎ ಪದವಿ ಕಳೆದುಕೊಂಡು ಲಿಂಗೇರಿ ಕೋನಪ್ಪನವರು ಎಂ.ಎಲ್.ಎ ಎಂದು ಘೋಷಿಸಲ್ಪಟ್ಟರು. ಯಾದಗಿರಿಯ ರಾಜಕೀಯದಲ್ಲಿ ಜೋಳದ ಕಾಳು ಒಗೆದರೂ ಅರಳಾಗುವ ಬಿಸಿ ಅಲ್ಲಿತ್ತು. ಅದು ೧೯೬೯ನೇ ಇಸವಿ ಇಂತಹ ಸಂದರ್ಭದಲ್ಲಿ ವಿಶ್ವನಾಥ ರೆಡ್ಡಿ ಅವರ ೪೩ ನೇ ವರ್ಷದ ಜನ್ಮ ದಿನಾಚರಣೆ ಆಚರಿಸಲು ನಿರ್ಧರಿಸಲಾಯಿತು. ಉತ್ಸವ ಸಮಿತಿಯ ಅಧ್ಯಕ್ಷರೆಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಆಯ್ಕೆ ಮಾಡಲಾಯಿತು. ಸಮಾರಂಭ ಅದ್ದೂರಿಯಿಂದ ನಡೆಯಿತು ಈ ಸಂದರ್ಭದಲ್ಲಿ ಎಂ.ಎಲ್.ಎ ಆಗಿದ್ದ ಲಿಂಗೇರಿ ಕೋನಪ್ಪನವರು ಶಾಸ್ತ್ರಿಗಳನ್ನು ತಪ್ಪಾಗಿ ಭಾವಿಸಲಿಲ್ಲ. ಇದಕ್ಕೆ ನಿರ್ಲಿಪ್ತ ನಿರ್ಮಲ ಮನಸ್ಸಿನ ಮನೋಭಾವನೆಯೇ ಕಾರಣ.

ಇಂತಹ ರಾಜಕೀಯ ಸ್ಪರ್ಧೆಯ ದಿನಮಾನಗಳಲ್ಲಿ ಪೂಜ್ಯ ಜಗದ್ಗುರುಗಳನ್ನು ಆಮಂತ್ರಿಸಿ ಅವರ ಅಡ್ಡಪಲ್ಲಕ್ಕಿ ಉತ್ಸವ ಧಾರ್ಮಿಕ ಸಮಾರಂಭ" ಆಚಾರ್ಯರ ಯುಗಮಾನೋತ್ಸವ ತುಂಬ ಅದ್ದೂರಿಯಿಂದ ಏರ್ಪಡಿಸಲಾಗಿತ್ತು. ಈ ಉತ್ಸವ ಸಮಿತಿಯ ಅಧ್ಯಕ್ಷರೆಂದು ವಿಧಾನ ಪರಿಷತ್ತು ಸದಸ್ಯ ವೀರಣ್ಣ ಚಟ್ನಳ್ಳಿ ಅವರನ್ನು ಆಯ್ಕೆ ಮಾಡಲಾಗಿತ್ತು. ಅವರ ನೇತೃತ್ವದಲ್ಲಿ ಅಡ್ಡ ಪಲ್ಲಕ್ಕಿ ವರ್ಣರಂಜಿತ ಮೆರವಣಿಗೆ ತುಂಬ ವಿಜೃಂಭಣೆಯಿಂದ ಜರುಗಿತು. ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಧನಲಕ್ಷ್ಮಿ ಟಾಕೀಜಿನಲ್ಲಿ ಪೂಜ್ಯ ಜಗದ್ಗುರು ಮಹಾಸನ್ನಿಧಿಯಲ್ಲಿ ಬಹಿರಂಗ ಮಹಾ ಪೂಜೆಯನ್ನು ಏರ್ಪಡಿಸಲಾಗಿತ್ತು. ಆಸಕ್ತರೆಲ್ಲರೂ ಅದರಲ್ಲಿ ಭಾಗವಹಿಸುವಂತೆ ಮಾಡಿಸಿದ್ದರು. ಈ ಸಮಯದಲ್ಲಿ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಸುಮಾರು ಎರಡು ಸಾವಿರ ಜನರಿಗೆ ಸ್ವಂತ ಖರ್ಚಿನಿಂದ ಪ್ರಸಾದ ವ್ಯವಸ್ಥೆ ಮಾಡಿದ್ದರು. ಅಂದಿನ ಶಾಸಕರಾದ ಲಿಂಗೇರಿ ಕೋನಪ್ಪನರ ತಮ್ಮ ಮನೆಯಲ್ಲಿ ಸಾಯಂಕಾಲ ಪೂಜೆಯನ್ನು ಏರ್ಪಡಿಸಲಾಗಿತ್ತು. ಅವರದೇ ಆದ ನ್ಯೂ ಕನ್ನಡ ಪ್ರೌಢ ಶಾಲೆಯಲ್ಲಿ ಸನ್ನಿಧಿ ಅವರ ಯುಗಮಾನೋತ್ಸವವನ್ನು ಏರ್ಪಡಿಸಿ ಶಾಸಕರಾದ ಲಿಂಗೇರಿ ಕೋನಪ್ಪನವರಿಂದಲೇ ಅರ್ಪಣೆ ಯಾಗುವಂತೆ ನೋಡಿಕೊಂಡ ಶಾಸ್ತ್ರಿಗಳ ಚಾಣಾಕ್ಷತನಕ್ಕೆ ಎಲ್ಲರೂ ಮರುಳಾದರು.

ಹೀಗೆ ಗುರುಸಿದ್ಧ ಶಾಸ್ತ್ರಿಗಳು ಪೂಜ್ಯ ಜಗದ್ಗುರುಗಳ ಕಾರ್ಯಕ್ರಮವನ್ನು ಧರ್ಮ ಸಂಘಟನಾತ್ಮಕವಾಗಿ ಮಾಡಿದುದಲ್ಲದೆ ರಾಜಕೀಯ ಭಿನ್ನ ವಿಚಾರವನ್ನೆಲ್ಲ ಸಮಾಜದ ಸಮಾನವೇದಿಕೆಯ ಮೇಲೆ ಬರುವಂತೆ ಮಾಡಿ ಪರಸ್ಪರ ದ್ವೇಷ ಅಸೂಯೆಗಳನ್ನು ಶಮನಗೊಳಿಸುವ ಪ್ರಯತ್ನ ಮಾಡಿದರು. ಈ ಕಾರ್ಯಕ್ರಮದ ಮೊದಲೇ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಜನಪ್ರಿಯತೆಯನ್ನು ಗಳಿಸಿದ್ದರು. ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವದ ನಂತರ ಯಾದಗಿರಿ ವೀರಶೈವ ಸಮಾಜದ ಚಿತ್ ಶಕ್ತಿ, ರಕ್ಷಣಾ ಮೂರ್ತಿಯಾಗಿ ಪರಿಣಮಿಸಿದರು.

■

# ವಿವಿಧ ದೇವಾಲಯ, ಮಂದಿರ ಗುಡಿಗಳ ಜೀರ್ಣೋದ್ಧಾರ

ಕಾಳಬೆಳಗುಂದಿಯ ಬನದೇಶ್ವರ: ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಯಾದಗಿರಿ ತಾಲೂಕಿನ ಕಾಳ ಬೆಳ ಗುಂದಿಯ ಬನದೇಶ್ವರನ ಪರಮ ಭಕ್ತರು ಅಂತೆಯೇ ಅವರು ಅತ್ಯಂತ ಭಕ್ತಿ ಶ್ರದ್ಧೆಯಿಂದ "ಬನದೇಶ್ವರ ಸುಪ್ರ ಭಾತ" ಬರೆದು ಆ ಪರಿಸರದಲ್ಲಿ ತುಂಬಾ ಪ್ರಸಿದ್ಧರಾದರು. ಕಾಳ ಬೆಳಗುಂದಿಯ ಬನದೇಶ್ವರ ಭಕ್ತರು ಲಿಂಗಾಯತರಾಗಿದ್ದರು. ಅದರಂತೆ ಪಾಂಚಾಳ ಕುಲದವರಿಗೂ ಬನದೇಶ್ವರ ಮನೆಯ ದೇವರಾಗಿದ್ದ. ಈ ದೇವಾಲಯದ ಅಭಿವೃದ್ಧಿಗಾಗಿ ನಿಸ್ವಾರ್ಥ ಸೇವೆ ಸಲ್ಲಿಸುವ ಸಮರ್ಥ ಧುರಿಣರೊಬ್ಬರ ಅವಶ್ಯಕತೆ ಇತ್ತು. ಆ ಸ್ಥಾನವನ್ನು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಪಡೆದುಕೊಂಡರು, ಕಾಳ ಬೆಳಗುಂದಿಯ ಬನದೇಶ್ವರನ ಭಕ್ತರೆಲ್ಲರನ್ನು ಗುರುತಿಸಿ ಪರಿಚಯ ಮಾಡಿಕೊಂಡು ಒಂದೆಡೆ ಕೂಡಿಸಿ ದೇವಾಲಯದ ಅಭಿವೃದ್ಧಿಯ ಪ್ರಸ್ತಾಪಿಸಿದರು. ಅಲ್ಲಿಯ ಭಕ್ತರು ಶಾಸ್ತ್ರಿಗಳಿಗೆ ತುಂಬ ಸಹಕಾರ ನೀಡಿದರು. ಅದರಿಂದ ದೇವಸ್ಥಾನ ರೂಪು-ರೇಷೆಯೇ ಬದಲಾಯಿತು. ದೇವಸ್ಥಾನದ ಸುತ್ತಲು ಪೌಳಿಯನ್ನು ಸುಭದ್ರವಾಗಿ ನಿರ್ಮಿಸಲಾಯಿತು. ದೇವಸ್ಥಾನದಲ್ಲಿ ನಿತ್ಯ ಪೂಜೆ, ಪಠಣ ರುದ್ರಾಭಿಷೇಕ ಮತ್ತು ನಿತ್ಯ ದಾಸೋಹದ ವ್ಯವಸ್ಥೆಯಾಯಿತು. ದೇವಸ್ಥಾನದಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿ ಶಾಸ್ತ್ರಿಗಳ ಮಾರ್ಗದಲ್ಲಿ ಶ್ರೀಮಂತ ಭಕ್ತರ ತಮ್ಮ ಭಕ್ತಿಯ ಕಾಣಿಕೆಯಾಗಿ ಅತ್ಯಂತ ಸುಂದರವೂ, ಭವ್ಯವೂ, ಆದ ಕಲ್ಯಾಣ ಮಂಟಪವನ್ನು ನಿರ್ಮಿಸಿದರು. ಈ "ಕಲ್ಯಾಣ ಮಂಟಪ" ಶುಭ ಕಾರ್ಯಗಳಿಗೆ ಆಯ ಕಟ್ಟಿನ ಸ್ಥಳವಾಗಿ ಪರಿಣಮಿಸಿದೆ. ಇದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಮಾಡಿದ ಅತ್ಯಂತ ಪುಣ್ಯದ ಕೆಲಸ.

ಅಂಗಡಿ ವೀರಣ್ಣನಗುಡಿ: ಈ ಗುಡಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ವಾಸಿಸುತ್ತಿದ್ದ ರಾಮಗಿರಿ ಹಿರೇಮಠದ ಸಮೀಪದಲ್ಲಿಯೇ ಇದೆ. ಅಂಗಡಿ ವೀರಣ್ಣನ ಗುಡಿಯೆಂದು ಕರೆಯಲ್ಪಡುವ ಭವ್ಯವಾದ ವೀರಭದ್ರೇಶ್ವರ ದೇವಾಲಯವಿದೆ. ಈ ದೇವಾಲಯ ಯಾದಗಿರಿ ವ್ಯಾಪಾರದ ಮುಖ್ಯ ಸ್ಥಳದಲ್ಲಿರುವ ಅಂಗಡಿಗಳ ಮಧ್ಯದಲ್ಲಿದೆ ಅರಿಂದ ಈ ಗುಡಿಗೆ ಅಂಗಡಿ ವೀರಣ್ಣನ ಗುಡಿಯೆಂದು ಜನರು ಕರೆಯುತ್ತಾರೆ. ಪುರಾತನವಾದ ಈ ದೇವಾಲಯ ಆವರಣ ತುಂಬ ವಿಶಾಲವಾಗಿದೆ. ಈ

ದೇವಾಲಯದ ಸುತ್ತ ಮುತ್ತಲೂ ಮುಸಲ್ಮಾನ ಬಾಂಧವರು ಅಂದರೆ ಕಟುಕರ ಮನೆಗಳೇ ಇವೆ. ಈ ದೇವಸ್ಥಾನದ ಬಗ್ಗೆ ಇನ್ನಷ್ಟು ದಿವಸ ಕಾಳಜಿ ವಹಿಸದಿದ್ದರೆ ಆ ದೇವಸ್ಥಾನ ಅಲ್ಲಿಯೇ ಕರಗಿ ಹೋಗುತ್ತಿತ್ತು. ಸಕಾಲಕ್ಕೆ ಶಾಸ್ತ್ರಿಗಳ ಗಮನ ಹರಿಸದರು ದೇವಾಲಯದ ಭಕ್ತರು ಕೂಡಲೇ ಶಾಸ್ತ್ರಿಗಳಿಗೆ ಬಂದು ಮೊರೆ ಹೊಕ್ಕರು ಶಾಸ್ತ್ರಿಗಳು ಜನರ ಬೆಂಬಲ ಪಡೆದು ಒಂದು ವಿಶ್ವಸ್ಥ ಮಂಡಳಿ ರಚಿಸಿ ಅದರ ಅಧ್ಯಕ್ಷರಾದರು. ನಂತರ ವಿಶಾಲವೂ ಭವ್ಯವೂ ಆದ ಆ ದೇವಾಲಯವನ್ನು ಸಂರಕ್ಷಣೆ ಮಾಡಿದರು. ಅಲ್ಲಿ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ತಾವೇ ಪುರಾಣ ಪ್ರವಚನ ಕಾರ್ಯವನ್ನು ಹಮ್ಮಿಕೊಂಡು ಭಕ್ತ ಸಮೂಹವನ್ನು ಜಾಗೃತಗೊಳಿಸಿದರು. ಈಗ ಈ ದೇವಾಲಯದ ಸುತ್ತ ಸಣ್ಣ ಸಣ್ಣ ಅಂಗಡಿಗಳ ಬಾಡಿಗೆ ದೇವಸ್ಥಾನ ಕಮಿಟಿಗೆ ಬಂದು ಸೇರುತ್ತದೆ.

ಚಟ್ನಳ್ಳಿಯವರ ಬಸವಣ್ಣ ದೇವಾಲಯ: ಯಾದಗಿರಿ ಪಟ್ಟಣದ ಮುಖ್ಯ ಪೇಟೆಯ ಕೊನೆಯಲ್ಲಿ, ಮೈಲಾರ ಅಗಸಿಯ ಸಮೀಪದಲ್ಲಿ ಚಟ್ನಳ್ಳಿಯವರ ಮನೆತನದವರು ಬಸವಣ್ಣನ ದೇವಾಲಯ ನಿರ್ಮಿಸಿದಂತೆ ಕಾಣುತ್ತದೆ. ಅದಕ್ಕಾಗಿ ಈ ದೇವಾಲಯಕ್ಕೆ ಚಟ್ನಳ್ಳಿಯವರ ಬಸವಣ್ಣ ದೇವಾಲಯವೆಂದು ಕರೆಯುತ್ತಾರೆ. ಮುಂದೆ ಈ ದೇವಾಲಯ ಸಾರ್ವಜನಿಕರ ಸ್ವತ್ತಾದಾಗ ಈ ಮನೆತನದವರ ಲಕ್ಷ್ಯ ಆ ಕಡೆ ಹೋದಂತೆ ಕಾಣುವುದಿಲ್ಲ. ೧೯೪೦ರ ದಶಕದಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಬಸವ ಜಯಂತ್ಯೋತ್ಸವ ಪ್ರಾರಂಭಿಸಿದಾಗ ಬಸವ ಜಯಂತಿಯ ಮೆರವಣಿಗೆ ಮೈಲಾಪುರ ಅಗಸಿಯ ಹತ್ತಿರದ ಈ ದೇವಾಲಯದಿಂದ ಪ್ರಾರಂಬಿಸಿ ಹಿರೇ ಅಗಸಿ ಸಮೀಪ ಬಸವಣ್ಣನ ಬಳಿ ಮುಕ್ತಾಯಗೊಳಿಸಬೇಕೆಂದು ನಿರ್ಧರಿಸಲಾಯಿತು. ಆಗ ಗುರುಸಿದ್ಧ ಶಾಸ್ತ್ರಿಗಳಿಗೆ ಈ ದೇವಾಲಯದ ಸ್ಥಳದ ತಗಡುಗಳ ಛತ್ತು ಹಾಕಿ ನೆರಳು ಮಾಡಿದರು. ಈ ದೇವಾಲಯದ ಸ್ಥಳ ಇನ್ನೊಬ್ಬರು ಕಬಳಿಸದಂತೆ ರಕ್ಷಿಸಿ ಸುತ್ತಲೂ ಪೌಳಿಯನ್ನು ಕಟ್ಟಿಸಿ ಒಂದು ಧಾರ್ಮಿಕ ಆಕರ್ಷಕ ಸ್ಥಳವನ್ನಾಗಿ ಮಾಡಿದರು.

ಲಚ್ಯಾಣ ಸಿದ್ದಪ್ಪ ಮಹಾರಾಜರ ಮಠ: ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಲಚ್ಯಾಣ ಸುಕ್ಷೇತ್ರದ ಶ್ರೀ ಸಿದ್ದಪ್ಪ ಮಹಾರಾಜರು ಪರಮ ವೈರಾಗ್ಯ ಮೂರ್ತಿಗಳು ಮತ್ತು ಆಧ್ಯಾತ್ಮದ ಮೇರು ಪರ್ವತದ ಪುಣ್ಯ ಪುರಷರು ಸಿದ್ಧ ಪುರಷರಾದ ಇವರ ಜೀವನವೇ ಒಂದು ಪವಾಡವೆಂದು ಹೇಳಬಹುದು. 'ಕೃಷ್ಣ' ದಲ್ಲಿ ಇವರ ಮಠವಿದ್ಧಂತೆ ಯಾದಗಿರಿಯಲ್ಲಿ ಇವರ ಮಠವಿದೆ. ಸಿದ್ಧಿ ಪುರುಷರಾದ ಇವರಮಠ ಒಂಬತ್ತು ಎಕರೆಯಷ್ಟು ದೊಡ್ಡದು. ದೊಡ್ಡ ಕೆರೆಯ ಒಡ್ಡಿನ ಕೆಳಗಡೆಯೇ ಇರುವ ಈ ಮಠದ ಭೂಮಿ ಮಾಡಿದರೆ ನೀರಾವರಿಯೂ ಆಗುತ್ತದೆ. ಈ

ಮಠವೂ ತುಂಬಾ ಪ್ರಶಾಂತವಾದ, ಪವಿತ್ರವಾದ ಸ್ಥಳ ಆಧ್ಯಾತ್ಮ ಜೀವಿಗಳಾದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಈ ಮಠದ ಏಳಿಗೆ ಮತ್ತು ಪುನರುತ್ಥಾನಕ್ಕೂ ತಮ್ಮ ಶಿಷ್ಯರನ್ನೊಳಗೊಂಡು ಶ್ರಮಿಸುತ್ತಿದ್ದರು.

ಭರತೇಶ್ವರ ದೇವಾಲಯ: ಯಾದಗಿರಿ ಪಟ್ಟಣಕ್ಕೆ ಹೊಂದಿಕೊಂಡು ಹರಿಯುವ ಒಂದು ಚಿಕ್ಕ ತೊರೆ "ಹತ್ತಿ ಕುಣಿ ಹಳ್ಳ" ಈ ಹತ್ತಿ ಕುಣಿಯ ಆಚೆಯ ದಂಡೆಯ ಮೇಲೆ ಮುದ್ನಾಳ ದಾರಿಗೆ ಹೊಂದಿಕೊಂಡು ಈ ಭರತೇಶ್ವರ ದೇವಾಲಯವಿದೆ. ರಾಮಾಯಣ ಕಾಲದಲ್ಲಿ ಭರತ ಚಕ್ರವರ್ತಿಯು ಈ ಲಿಂಗವನ್ನು ಸ್ಥಾಪಿಸಿದರೆಂದು ಕೆಲವರು ಹೇಳುತ್ತಾರೆ. ಸೇಡಂ ತಾಲೂಕಿನ ಏಕಾಂಬರಿಯಲ್ಲಿ ಶ್ರೀ ರಾಮಲಿಂಗೇಶ್ವರ ಲಿಂಗವನ್ನು ಸ್ಥಾಪಿಸಿ ದಕ್ಷಿಣಕ್ಕೆ ಹೊರಟ ಶ್ರೀ ರಾಮಚಂದ್ರ, ಸೀತಾ ಲಕ್ಷ್ಮಣರು ಭರತನ ಪ್ರೀತ್ಯಾರ್ಥವಾಗಿ ಆತನ ಹೆಸರಿನಿಂದಲೇ ಯಾದಗಿರಿ ಸಮೀಪದಲ್ಲಿ ಲಿಂಗವನ್ನು ಸ್ಥಾಪಿಸಿ ಹೊರಟು ಹೋದರು ಎಂದು ಇಲ್ಲಿ ಕೆಲವರು ಹೇಳುತ್ತಾರೆ ಈ ಭರತೇಶ್ವರ ಲಿಂಗ ಬಹಳ ದೊಡ್ಡದು. ಮತ್ತು ಆಕರ್ಷಕವಾಗಿದೆ ಅಷ್ಟೇ ಅಲ್ಲ ಈ ಭರತೇಶ್ವರ ಲಿಂಗ ಬಹಳ ಜಾಗ್ರತ ಲಿಂಗವೆಂದು ಖ್ಯಾತಿಯನ್ನೂ ಪಡೆದಿದೆ.

ಈ ಭರತೇಶ ಲಿಂಗವು ಅರ್ಚನೆ, ಅರ್ಪಣೆ, ಅನುಭವಗಳಿಲ್ಲದೆ ಹಾಳಾದ ಸ್ಥಿತಿಯಲ್ಲಿಯೇ ಇತ್ತು ನಿತ್ಯವ್ಯವಹಾರದಲ್ಲಿ ಮನಸ್ಸಿಗೆ ತುಸು ಶಾಂತಿ, ಜೀವಕ್ಕೆ ತುಸು ನೆಮ್ಮದಿ ಸಿಗಲಿ ಎಂದು ಬಯಸಿ ಶ್ರೀ ದೇವಿ ರೆಸನ್‌ಜಿ ರಾಠಿ ಎಂಬ ಶ್ರೀಮಂತ ಮಾರವಾಡಿ ದಿನಾಲು ಸಾಯಂಕಾಲ ಭರತೇಶ್ವರ ದೇವಾಲಯಕ್ಕೆ ಬಂದು ಲಿಂಗದರ್ಶನ ಪಡೆದು ತುಸು ಹೊತ್ತು ಅಲ್ಲಿಯೇ ಕುಳಿತು ವಿಶ್ರಾಂತಿ ಪಡೆದು ಹೋಗುತ್ತಿದ್ದರು. ಈ ಹಾಳಾದ ದೇವಾಲಯವನ್ನು ಸರಿಪಡಿಸಿ ಆಗಮಿಸಿದ ಭಕ್ತಾದಿಗಳಿಗೆ ಅನುಕೂಲವಾಗಲೆಂದು ಈ ಶ್ರೀಮಂತ ಮಾರವಾಡಿ ವಿಶಾಲವಾದ ಒಂದು ಕಟ್ಟೆಯನ್ನು ಕಟ್ಟಿಸಿದ್ದ. ಹಳ್ಳದ ದಂಡೆಯ ಮೇಲೆ ಬಹು ಪ್ರಶಾಂತವೂ, ರಮ್ಯವೂ ಆದ ಈ ಸ್ಥಳ ಗುರುಸಿದ್ಧ ಶಾಸ್ತ್ರಿಗಳ ಗಮನವನ್ನು ಸೆಳೆಯಿತು. ಗುರುಸಿದ್ಧ ಶಾಸ್ತ್ರಿಗಳು ಈ ಕಡೆಗೆ ಲಕ್ಷ ಹರಿಸಿ ಆಗಮಿಸಿವ ಭಕ್ತಾದಿಗಳಿಗೆ ಅನುಕೂಲವಾಗಲಿ ಎಂದು ಸಾರ್ವಜನಿಕ ವಂತಿಗೆಯಿಂದ ಅಡುಗೆ ಕೋಣೆ ಹೊರಗಿನವರು ಬಂದರೆ ಇಳಿಕೊಳ್ಳವ ಕೋಣೆಗಳನ್ನು ನಿರ್ಮಿಸಿ ತುಂಬ ಅಲಕ್ಷಕ್ಕೀಡಾಗಿದ್ದ ಈ ಪ್ರಶಾಂತ ರಮ್ಯಸ್ಥಳದಲ್ಲಿ ಪ್ರತಿ ವರ್ಷ ಜಾತ್ರೆ ನಡೆಯುವಂತೆ ಮಾಡಿದರು. ಹಾಗೆಯೇ ಈ ದೇವಸ್ಥಾನದಲ್ಲಿ ಮದುವೆ ಮುಂಜಿಗೆ ಇತ್ಯಾದಿ ಶುಭ ಕಾರ್ಯಗಳೂ ಜರಗುತ್ತವೆ. ಇಂದು ಇದು ಒಂದು ಯಾತ್ರಾ ಸ್ಥಳವಾಗಿ ಪರಿಣಮಿಸಿದೆ.

■

# ವೀರ ಶೈವ ಕಲ್ಯಾಣ ಮಂಟಪ

ಯಾವುದೇ ಒಂದು ಸಮಾಜದ ಕೆಲಸ ಮಾಡಿ ಮುಗಿಸುವುದು ತುಂಬ ದುಸ್ತರವಾದ ಕೆಲಸವೇ ಸರಿ. ಊರಲ್ಲಿ ಯಾವುದೋ ಒಂದು ಮಹತ್ವದ ಕೆಲಸ ಎಲ್ಲರಿಗೂ ಬೇಕಾಗಿರುತ್ತದೆ. ಆದರೆ ಅದು ಬೇಗನೆ ಕೈ ಗೂಡುವುದಿಲ್ಲ. ಎಲ್ಲದಕ್ಕೂ ಕಾಲ ಕೂಡಿಬರಬೇಕು ಕಾಲ ಕೂಡಿ ಬರುವವರೆಗೂ ಕಾಯಬೇಕು" ಆ ಪರಿಸ್ಥಿತಿ ಯಾದಗಿರಿಯ "ವೀರ ಶೈವ ಕಲ್ಯಾಣ ಮಂಟಪ"ಕ್ಕೆ ಒದಗಿ ಬಂದಿತು.

ಅದು ೧೯೬೨-೬೩ರ ಅವಧಿ. ಯಾದಗಿರಿಯ ಒಂದು ಶ್ರೀಮಂತ ಮನೆತನದಲ್ಲಿ ಒಬ್ಬ ಹೆಣ್ಣು ಮಗಳು ಅವಳ ಹೆಸರು ಸಿದ್ಧಮ್ಮ. ಗಂಡ ಪಳ್ಳಿ ಕಡಲೆಪ್ಪ ಸಿದ್ಧಮ್ಮನಿಗೆ ಮಕ್ಕಳಿರಲಿಲ್ಲ. ಗಂಡ ಅವಳಿಗಿಂತ ಮುನ್ನವೇ ತೀರಿಕೊಂಡಿದ್ದು. ಈ ಮನೆತನಕ್ಕೆ ಸಂತಾನ ಸಂಪತ್ತು ಇರಲಿಲ್ಲ. ಈ ಮನೆತನದ ಯಜಮಾನಿ ಸಿದ್ಧಮ ತೀರಿಕೊಂಡಾಗ ಮನೆ ಬಟ್ಟ ಬಯಲಾಯಿತು. ಜಿ.ಎಂ.ಗುರುಸಿದ್ಧ ಶಾಸ್ತ್ರಿ ವಿಶ್ವನಾಥ ರೆಡ್ಡಿಮುದ್ನಾಳ ಚಟ್ನಳ್ಳಿ ವೀರಣ್ಣ ಕೂಡಿ ಮನೆಯ ಎಲ್ಲ ಕೋಣೆಗಳನ್ನು ಮುಚ್ಚಿ ಬೀಗ ಹಾಕಿಸಿದರು. ಅವಳ ಸಮೀಪದ ನೆನಗೆಯಣ್ಣೆ ಶೀಲವಂತೆಮ್ಮ ಶಹಾಪುರದಲ್ಲಿ ಇರುತ್ತಿದ್ದರು. ಅವಳಿಗೆ ಸಿದ್ಧಮ್ಮ ಸತ್ತ ಸುದ್ದಿ ಮುಟ್ಟಿಸಿ ಅವಳು ಬರುವ ದಾರಿ ಕಾಯತೊಡಗಿದರು. ಅವಳು ಬಂದ ನಂತರ ಊರ ಪ್ರಮುಖರೆಲ್ಲರೂ ಸೇರಿ ಅವಳ ಅಂತ್ಯ ಸಂಸ್ಕಾರ ಮುಗಿಸಿದರು.

ಮುಂದೆ ಒಂದೆರಡು ದಿವಸ ಕಳೆದ ಮೇಲೆ ಯಾದಗಿರಿಯ ಗಣ್ಯವ್ಯಕ್ತಿಗಳೆಲ್ಲರನ್ನು ಶ್ರೀ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸೇರಿಸಿ ನೆರೆದ ಗಣ್ಯರ ಸಮಕ್ಷಮದಲ್ಲಿ ಎಲ್ಲ ಆಲ್ಮರಿ, ತಿಜೋರಿಗಳನ್ನು ತೆರೆದು ನೋಡಲಾಗಿ ತಿಜೋರಿಯಲ್ಲಿ ಐವತ್ತು ಸಾವಿರ ರೂಪಾಯಿ ಬೆಳ್ಳಿ-ಬಂಗಾರ ದೊರಕಿತು. ಈ ಪುರಪ್ರಮುಖರು ಪಳ್ಳಿ ಕಡೆಲೆಪ್ಪ ಅವರಪ್ಪ ಇವರ ಹೆಸರು 'ಶಾಶ್ವತವಾಗಿ ಉಳಿಯಲು ಯಾದಗಿರಿಯಲ್ಲಿ ಒಂದು ಸ್ಮಾರಕ ಭವನ ನಿರ್ಮಿಸಲು ನೆರೆದ ಗಣ್ಯರೆಲ್ಲರೂ ಕೂಡಿ ತೀರ್ಮಾನಿಸಿದರು. ಅದಕ್ಕಾಗಿ ಒಂದು ವಿಶ್ವಸ್ಥಮಂಡಲಿ ರಚಿಸಿದರು. ಶ್ರೀ ಭೀಮರೆಡ್ಡಿ ಮುದ್ನಾಳ ಅವರನ್ನು ವಿಶ್ವಸ್ಥ ಮಂಡಳಿಯ ಅಧ್ಯಕ್ಷರೆಂದು ಆಯ್ಕೆ ಮಾಡಲಾಯಿತು ಈ ಮಂಡಳಿಯಲ್ಲಿ ಗುರುಸಿದ್ಧ ಶಾಸ್ತ್ರಿಗಳ ಪಾತ್ರ ತುಂಬ ಪ್ರಮುಖವಾಗಿತ್ತು.

ಇದೇ ಸಮಯಕ್ಕೆ ಅಂದರೆ ದಿನಾಂಕ ೧೫-೧೦-೧೯೬೪ ರಂದು ಈ ವಿಶ್ವಸ್ಥ ಮಂಡಳಿಯ ಕಾರ್ಯ ಕಲಾಪಗಳನ್ನು ಉದ್ಘಾಟಿಸಲು ಆಗಿನ ಕನಾಟಕ ಸರ್ಕಾರದ ಹಣಕಾಸು ಸಚಿವರು ಬಸವ ಸಮಿತಿಯ ಅಧ್ಯಕ್ಷರು ಆದ ಬಿ.ಡಿ.ಜತ್ತಿಯವರು ಆಗಮಿಸಿದ್ದರು. ಅವರು ಮುಂಡಳಿಯು ಮಾಡುವ ಕಾರ್ಯ ಕಲಾಪಗಳಿಗೆ ವಿದ್ಯುಕ್ತವಾಗಿ ಚಾಲನೆ ನೀಡಿದರು.

ಯಾದಗಿರಿ ಪಟ್ಟಣದ ಪ್ರಮುಖ ರಸ್ತೆಗೆ ಹೊಂದಿಕೊಂಡು ವಾರಸದಾರರಿಲ್ಲದ ಒಂದು ವಿರಕ್ತ ಮಠದ ವಿಶಾಲವಾದ ಬಯಲು ಜಾಗವಿತ್ತು. ಆ ಜಾಗದಲ್ಲಿಯೇ ವೀರಶೈವ ಕಲ್ಯಾಣ ಮಂಟಪವನ್ನು ನಿರ್ಮಿಸಲು ಮಂಡಳಿಯವರು ನಿರ್ಧರಿಸಿದರು.

"ಕಡಲೆಪ್ಪ ಅಮರಪ್ಪ ಪಳ್ಳಿ" ವಿಶ್ವಸ್ಥ ಮಂಡಳಿಗೆ ಸದಸ್ಯರಾಗಿದ್ದು. ವಿಶ್ವನಾಥ ರೆಡ್ಡಿ ಮುದ್ನಾಳ, ಮಾಜಿ ಮಂತ್ರಿಯಾದ ವಿರೂಪಾಕ್ಷಪ್ಪನವರು ಮಾಜಿಶಾಸಕ ವೀರಣ್ಣ ಚಟ್ನಳ್ಳಿ ಮುಂತಾದ ಘಟಾನು ಘಟಿಗಳು ಇರುವುದರಿಂದ ಖಾಲಿ ಬಿದ್ದ ವಿರಕ್ತಮಠದ ಬಗ್ಗೆ ಯಾರೂ ತಕರಾರು ಮಾಡಲಿಲ್ಲ. ದಿನಾಂಕ ೨-೯-೧೯೬೬ ರಂದು ಕಲಬುರ್ಗಿ ಶ್ರೀ ಶರಣ ಬಸವೇಶ್ವರ ಮಹಾದಾಸೋಹ ಪೀಠದ ಏಳನೆಯ ಪೀಠಾಧಿಪತಿಗಳಾದ ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪ ಅವರ ಅಮೃತ ಹಸ್ತದಿಂದ ಕಡಲೆಪ್ಪ ಅಮರಪ್ಪ ಪಳ್ಳಿ ಸ್ಮಾರಕ ಕಟ್ಟಡದ ಶಂಕು ಸ್ಥಾಪನೆಯಾಯಿತು. ವಿಶ್ವಸ್ಥ ಮಂಡಳಿಯಲ್ಲಿದ್ದ ಹಣ ಖರ್ಚು ಮಾಡಿ ಕಟ್ಟಡ ಕಟ್ಟಲು ಪ್ರಾರಂಭವಾಯಿತು ಈ ಕಟ್ಟಡ ಬೇಗನೆ ಮುಗಿಯಲಿ ಎಂದು ಕೆಲವರು ಹಣ ಕೊಡಲು ಮುಂದಾದರು. ಆ ಹಣ ಸಕಾಲಕ್ಕೆ ಬರಲಿಲ್ಲ. ಮಂಡಳಿಯಲ್ಲಿದ್ದ ಹಣ ಮುಗಿಯುತ್ತಲೇ ಕಟ್ಟಡ ಅರ್ಧಕ್ಕೆ ನಿಂತಿತು. ಖಾಲಿ ಬಿದ್ದ ಜಾಗ ವಿರಕ್ತ ಮಠಕ್ಕೆ ಸೇರಿದ್ದು ಬಾಳ ಕುಡಿಯಿಲ್ಲದ ಪಳ್ಳಿ ಮನೆತನ ಹಣ ಅದರಿಂದ ಆ ಕಡೆ ಯಾರ ಒಲವೂ ಹರಿಯಲಿಲ್ಲ. ಗುರುಸಿದ್ಧ ಶಾಸ್ತ್ರಿಗಳ ಮನಸ್ಸಿನಲ್ಲಿ ಈ ಕಟ್ಟಡ ಇಲ್ಲಿಗೆ ನಿಂತು ಬಿಟ್ಟಿತಲ್ಲ ಚಿಂತೆ ಒಂದೇ ಸವನೆ ಕಟೆಯತೊಡಗಿತು. ವಿಶ್ವಸ್ಥ ಮಂಡಳಿಯಲ್ಲಿದ್ದ ಅವರಿವರನ್ನು ಆಗಾಗ್ಗೆ ಭೇಟಿಮಾಡಿ ಕಟ್ಟಡ ಮುಂದುವರಿಸಲು ಪ್ರಯತ್ನಿಸಿದರು. ಆ ಪ್ರಯತ್ನ ಹಾಗೆ ಮುಂದುವರಿಸಿದರು ಏನು ಮಾಡಿದರು ಕಟ್ಟಡದ ಕೆಲಸ ಮುಂದುವರಿಯಲಿಲ್ಲ. ಗುರುಸಿದ್ಧ ಶಾಸ್ತ್ರಿಗಳು ನಿರಾಶರಾಗಲಿಲ್ಲ. ಕಾಲ ಕೂಡಿ ಬರುವವರೆಗೆ ಕಾಯ ಬೇಕು. ಎಂದು ಹೇಳುತ್ತಾರೆ ಆ ಪ್ರಕಾರ ನಾವು ಕಾಯಬೇಕು. ಎಂದು ಆ ಶುಭಗಳಿಗೆ ಬರುವ ದಾರಿ ಕಾಯತೊಡಗಿದರು.

■

## ಶಾಸ್ತ್ರಿಗಳ ಷಷ್ಟಬ್ದಿ ಸಮಾರಂಭ

ಹುಟ್ಟು ಹೋರಾಟಗಾರರು, ದಿಟ್ಟ ಹೃದಯದ, ಸ್ಪಷ್ಟ ಮಾತಿನ ಮಾಂತ್ರಿಕರು ನಿನ್ನೆ–ನಾಳೆ–ಇಂದಿನವರನ್ನು ಕುರಿತು ಚಿಂತನೆ ನಡೆಸುವ ಚಿಂತಕರು ಆದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಅರವತ್ತು ವರ್ಷಗಳು ತುಂಬಿದವು. ಅವರು ತಮ್ಮ ತಲೆಯ ಮೇಲೆ ಸುತ್ತಿದ ರುಮಾಲು ಅತ್ಯಂತ ಶೋಭಾಯಮಾನವಾಗಿ ಶೋಭಿಸುತ್ತಿತ್ತು. ಗುರುಸಿದ್ಧ ಶಾಸ್ತ್ರಿಗಳ ನಗೆ ಮುಖಕ್ಕೆ ಪುಷ್ಟಿ ನೀಡುತ್ತಿತ್ತು. ತೃಪ್ತಿ ತಂದುಕೊಡುತ್ತಿತ್ತು. ಎಲ್ಲಿಯೇ ಧಾರ್ಮಿಕ ಸಭೆ ನಡೆಯಲಿ ಅಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಪ್ರಾಸಾದಿಕ ವಾಣಿ ಪರಿಮಳದಂತೆ ಹರಿದು ಬರುತ್ತಿತ್ತು. ಎಲ್ಲಿಯೇ ಸಮಾಜ ಸೇವೆಯಲ್ಲಿ ತೊಡಗಿರಲಿ ಅಲ್ಲಿ ತಾರುಣ್ಯದ ಕಳೆ ಕಂಗೊಳಿಸುತ್ತಿತ್ತು. ಶಾಸ್ತ್ರಿಗಳಿಗೆ ಸಮಾಜದ ಬಗ್ಗೆ ತುಂಬ ಗೌರವವಿತ್ತು. ಸಮಾಜವೂ ಅವರನ್ನು ಅಷ್ಟೇ ಗೌರವದಿಂದ ಕಾಣುತ್ತಿತ್ತು.

ಶಾಸ್ತ್ರಿಗಳು ಕೈ ಕೊಂಡ ಧಾರ್ಮಿಕ. ಸಾಮಾಜಿಕ, ಸಾಂಸ್ಕೃತಿಕ ಸೇವೆಯನ್ನು ಗಮನಿಸಿ ಅವರ ಅರವತ್ತನೆ ವರ್ಷ ಹುಟ್ಟು ಹಬ್ಬ ಅಂದರೆ ಷಷ್ಟಬ್ದಿ ಸಮಾರಂಭ ಏರ್ಪಡಿಸಬೇಕೆಂದು ಕೆಲವರು ಆಲೋಚಿಸತೊಡಗಿದರು. ಶಾಸ್ತ್ರಿಗಳ ಹಿತೈಷಿಗಳು ಅವರ ಶಿಷ್ಯರು ಆದ ಶರಣಪ್ಪ ವಡಿ ಅವರ ಮಗ ತಿಪ್ಪಣ್ಣ ವಡಿ ಅವರು ಮುಂದಾಗಿ ನಿಂತರು. ಆಗ ತಿಪ್ಪಣ್ಣ ವಡಿಯವರು ಪುರಸಭೆಯ ಸದಸ್ಯರಾಗಿದ್ದರು. ವೀರಣ್ಣ ಚಟ್ನಳ್ಳಿ ಅವರು ಪುರಸಭೆಯ ಅಧ್ಯಕ್ಷರಾಗಿದ್ದರು.ಇವರಿಬ್ಬರೂ ಸಮಾಲೋಚಿಸಿ ಒಂದು ಚಿಕ್ಕ ಸಭೆಯನ್ನು ಕರೆದರು. ಈ ಸಭೆಗೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಹಿತೈಷಿಗಳೆಲ್ಲರೂ ಬಂದಿದ್ದರು. ಈ ಸಭೆಯಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಷಷ್ಟ್ಯಬ್ದಿ ಸಮಾರಂಭ ಏರ್ಪಡಿಸಲು ನಿರ್ಧರಿಸಿದರು. ವೀರಣ್ಣ ಚಟ್ನಳ್ಳಿ ಅವರನ್ನು ಆಚರಣಾ ಸಮಿತಿಯ ಅಧ್ಯಕ್ಷರೆಂದು ಆಯ್ಕೆ ಮಾಡಿದರು. ವಡಿ ತಿಪ್ಪಣ್ಣನವರನ್ನು ಪ್ರಧಾನ ಕಾರ್ಯದರ್ಶಿಗಳೆಂದು ಗೊತ್ತು ಮಾಡಿ ಒಂದು ಷಷ್ಟ್ಯಬ್ದಿ ಪೂರ್ತಿ ಆಚರಣಾ ಸಮಿತಿಯನ್ನು ರಚಿಸಿದರು. ಈ ಕಾರ್ಯಕ್ಕೆ ಯಾದಗಿರಿಯ ನಾಗರೀಕರೆಲ್ಲರೂ ತನು, ಮನ,ಧನದಿಂದ ಸೇವೆ ಸಲ್ಲಿಸಲು ಸಿದ್ಧರಾದರು. 'ಮನವಿದ್ದಲ್ಲಿ ಮಾರ್ಗವಿರುತ್ತದೆ' ಎಂಬ ನಾಣ್ಣುಡಿಯಂತೆ ಎಲ್ಲರ ಮನಸ್ಸು

ಒಂದಾಯಿತು ದಿನಾಂಕ ೨೧-೫-೧೯೭೬ರಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಷಷ್ಟ್ಯಬ್ದಿ ಸಮಾರಂಭ ನೆರವೇರಿತು.

ಈ ಸಮಾರಂಭದ ಅಧ್ಯಕ್ಷತೆಯನ್ನು ಆ ಸಮಯದಲ್ಲಿ ಶಾಸಕರಾಗಿದ್ದ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ವಹಿಸಿಕೊಂಡಿದ್ದರು. ತುಮಕೂರು ಸಿದ್ಧ ಗಂಗಾ ಮಠದ ಶ್ರೀ.ಮ.ನಿ.ಪ್ರ.ಸ್ವ. ಪೂಜ್ಯ ಶಿವಕುಮಾರ ಮಹಾಸ್ವಾಮಿಗಳವರು ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಅಂದು ಸಿದ್ಧಗಂಗಾ ಮಠದ ಪೂಜ್ಯರು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಕುರಿತು ತುಂಬ ಆತ್ಮೀಯವಾಗಿ ಮಾತನಾಡಿಸಿದರು. "ಧರ್ಮ ಪ್ರಜ್ಞರಾದ, ಧರ್ಮ ನಿಷ್ಠರಾದ, ಧರ್ಮ ಪರಾಯಣರಾದ, ಧರ್ಮವೇ ಮೈದಳೆದು ಬಂದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಷಷ್ಟಪೂರ್ತಿ ಸಮಾರಂಭ ಏರ್ಪಡಿಸಿ ತಾವು ಧರ್ಮ ಪ್ರಿಯರೆಂದು ತೋರಿಸಿ ಕೊಟ್ಟಿರಿ. ಜಾತ್ಯಾತೀತತೆಯ ಸೋಗಿನಲ್ಲಿ ಭಾರತೀಯರು ಧರ್ಮಾತೀತರಾದುದುರಿಂದ ಇಂದಿನ ದುರಾವಸ್ಥೆಯನ್ನು ಅನುಭವಿಸುತ್ತಿದ್ದಾರೆ" ಎಂದು ಸಿದ್ಧಗಂಗಾ ಶ್ರೀಗಳು ತುಂಬ ಮಾರ್ಮಿಕವಾಗಿ ಮಾತನಾಡಿದರು.

ಷಷ್ಟಬ್ದಿ ಪೂರ್ತಿ ಸಮಾರಂಭದಲ್ಲಿ ಊರಿನ ಸಮಸ್ತ ಜನರು ಸಮಾವೇಶಗೊಂಡಿದ್ದರು. ಶಾಸ್ತ್ರಿಗಳ ಬೀಗರು, ಬಿಜ್ಜರು, ಸಂಬಂಧಿಕರು ಸಹೋದರರು, ಸಹೋದರಿಯರು ತುಂಬ ಸಂತೋಷದಿಂದ ಪಾಲುಗೊಂಡಿದ್ದರು. ಗುರುಸಿದ್ಧ ಶಾಸ್ತ್ರಿಗಳ ಪ್ರೀತಿ-ವಿಶ್ವಾಸ, ತ್ಯಾಗ-ನಿಷ್ಠೆ ಕಳಕಳಿ ಪ್ರಾಮಾಣಿಕತೆ ಮುಂತಾದ ಮಾನವೀಯ ವೈಪಲ್ಯಗಳನ್ನು ಕುರಿತು ಮಾತಾಡುತ್ತ ಇಂತಹ ಅಣ್ಣ, ಅಪ್ಪ, ಗಂಡ, ಮಾವ ನಮಗೆ ಸಿಕ್ಕಿರುವುದು ನಮ್ಮ ದೈವವೆಂದು ತಮ್ಮಂದಿರು ಹರುಷ ಪಟ್ಟರು, ಮಕ್ಕಳು ಆನಂದ ಪಟ್ಟರು, ಹೆಂಡತಿ ನನ್ನ ಪಾಲಿನ ದೇವರು ಅಭಿಮಾನದಿಂದ ಹೇಳಿದರು, ಅಳಿಯಂದಿರು ನಮಗೆ ನಮ್ಮ ಮಾವನವರು ತಂದೆಯ ಸ್ವರೂಪ ಎಂದು ಎದೆ ತುಂಬಿ ಹೇಳಿದರು. ಅಂದು ಗುರುಸಿದ್ಧ ಶಾಸ್ತ್ರಿಗಳನ್ನೂ, ಅವರ ಧರ್ಮ ಪತ್ನಿ ಸೋಮಲಿಂಗಮ್ಮನವರನ್ನು ಕೂಡ್ರಿಸಿ ಮೈ ತುಂಬ ಆಹೇರಿ ಮಾಡಿ ಹೂ ಹಣ್ಣು ಅರ್ಪಿಸಿ ಹೃದಯ ತುಂಬಿ ಸತ್ಕರಿಸಲಾಯಿತು. ಆಗ ಗುರುಸಿದ್ಧ ಶಾಸ್ತ್ರಿಗಳು ಅವರ ಧರ್ಮ ಪತ್ನಿ ಸೋಮಲಿಂಗಮ್ಮನವರ ಶಿವ-ಪಾರ್ವತಿಯರಂತೆ ಶೋಭಿಸುತ್ತಿದ್ದರು.

ಹೀಗೆ ತಮಗಾಗಿ ಸಿದ್ದಪಡಿಸಿದ್ಧ ಷಷ್ಟ್ಯಬ್ದಿ ಸಮಾರಂಭದ ವ್ಯವಸ್ಥೆ, ವೈಭವ ಕಣ್ಣಾರೆ ಕಂಡ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಆನಂದ ತುಂದಿಲರಾಗಿ ಸನ್ಮಾನಕ್ಕೆ ಉತ್ತರ ನೀಡುತ್ತ "ಯಾದಗಿರಿಯ ಮಹಾಜನಗಳು ತಮಗೆ ತೋರಿಸಿದ ಪ್ರೀತಿ,

ವಿಶ್ವಾಸ, ಅಂತಃಕರುಣಕ್ಕೆ ನಾನು ಋಣಿಯಾಗಿದ್ದೇನೆ. ಶ್ರೀ ಶಂಕರಾನಂದ ಮುದ್ರಣಾಲಯದ ಮಾಲಿಕನಾಗಿ ನನ್ನ ಕೆಲಸ ನಾನು ಮಾಡಿದ್ದೇನೆ ಈ ಕೆಲಸದಿಂದಲೇ ನನಗೆ ನಿಮ್ಮೆಲ್ಲರ ಪ್ರೀತಿ-ವಿಶ್ವಾಸಗಳಿಸಲು ಸಾಧ್ಯವಾಯಿತು. ಮುದ್ರಣಾಲಯಕ್ಕೆ ಬರುವ ನಾನಾ ಪ್ರಕಾರದ ಕೆಲಸಗಳಿಂದ ನನ್ನಲ್ಲಿ ಅನುಭವ ಹೆಚ್ಚಾಯಿತು. ಕರ್ತವ್ಯ ಪ್ರಜ್ಞೆ ಮೂಡಿತು. ಆ ಮೂಲಕ 'ಕನ್ನಡ ಕಟ್ಟುವ' 'ಕನ್ನಡ ನೆಲ ಗಟ್ಟಿಗೊಳಿಸುವ' ಭಾಗ್ಯ ನನ್ನದಾಯಿತು. ಇದು ಜನರು ನನಗೆ ಕೊಟ್ಟ ಸೌಭಾಗ್ಯವೆಂದು ಭಾವಿಸಿ ಕೊಂಡಿದ್ದೇನೆ. ಕನ್ನಡ ಕಟ್ಟಿಕೊಡುವ ಕಾರ್ಯ ಗೌರವದ ಮಧ್ಯದಲ್ಲಿ ಇನ್ನು ನನಗೆ ಉತ್ತಮ ಸಾಹಿತ್ಯ ಕೃತಿಗಳನ್ನು ರಚಿಸಿ ಮುದ್ರಿಸಿ ಕನ್ನಡಿಗರಿಗೆ ಕೊಡಲು ಸಾಧ್ಯವಾಗಲಿಲ್ಲ. ಕನ್ನಡ ಉಳಿಸಿ ಬೆಳೆಸುವಲ್ಲಿ ಮುದ್ರಣದ ಕೆಲಸವೇನೋ ಸಾಕಷ್ಟು ಆಯಿತು. ಅಷ್ಟು ಸಾಮಾಜಿಕ ಕೆಲಸಗಳಾಗಲಿಲ್ಲ. ಈಗ ತುಂಬಿದ ಈ ಅರವತ್ತು ವರ್ಷಗಳು ನನ್ನ ಕುಟುಂಬಕ್ಕಾಗಿ ಮೀಸಲಾಗಿದ್ದಂತೆ ಇನ್ನು ಉಳಿದ ಆಯುಷ್ಯ ಧಾರ್ಮಿಕ, ಸಾಮಾಜಿಕ, ಸಾಸಂಸ್ಕೃತಿಗ ಕಾರ್ಯಗಳಿಗೆ ಮೀಸಲಿಡುತ್ತೇನೆ ಅರ್ಧಕ್ಕೆ ನಿಂತು ಬಿಟ್ಟು "ವೀರಶೈವ ಕಲ್ಯಾಣ ಮಂಟಪ ಪೂರ್ತಿ ಮಾಡುವವರೆಗೂ ನಾನು ವಿಶ್ರಾಂತಿ ಪಡೆಯುವುದಿಲ್ಲ. ಎಂದು ಹೇಳುತ್ತಿರುವಾಗ ಅವರ ಹೃದಯ ತುಂಬಿ ಬಂದಿತ್ತು. ಅದೇ ಸಮಯಕ್ಕೆ ಸಭೆಯಲ್ಲಿ ಚಪ್ಪಾಳೆ, ಹರ್ಷೋದ್ಗಾರಗಳ ಸುರಿಮಳೆಯಾಯಿತು.

ಮುಂದೆ ಕಲವೇ ತಿಂಗಳುಗಳಲ್ಲಿ ಅರ್ಧಕ್ಕೆ ನಿಂತ ಕಟ್ಟಡದ ಕೆಲಸಕ್ಕೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಮುಂದಾದರು. ಶಾಸ್ತ್ರಿಗಳ ಪ್ರಾಮಾಣಿಕ ಸೇವೆಗೆ, ಸತತ ಪರಿಶ್ರಮಕ್ಕೆ, ಸಾರ್ವಜನಿಕರಿಂದಲೂ, ಸರಕಾರಿ ಅಧಿಕಾರಿಗಳಿಂದಲೂ, ಸಂಘ ಸಂಸ್ಥೆಗಳಿಂದಲೂ ಹಣ ನೀರಿನಂತೆ ಹರಿದು ಬಂದಿತು. ಬಟಾ ಬಯಲಲ್ಲಿ ಅರ್ಧಕ್ಕೆ ನಿಂತ ಕಟ್ಟಡ ಪಳ್ಳಿ ಕಡಲೆಪ್ಪ ಅಮರಪ್ಪ ಸ್ಮಾರಕ ಭವನ ಸಾರ್ವಜನಿಕರ ಅಭಿಪ್ರಾಯದಂತೆ "ವೀರಶೈವ ಕಲ್ಯಾಣ ಮಂಟಪ" ಎಂಬ ಶಿರೋನಾಮ ಪಡೆದು ಇಂದು ಊರಿನ ಮಧ್ಯದಲ್ಲಿ ಸಾರ್ವಜನಿಕರ ಮಂಗಳ ಕಾರ್ಯಕ್ಕೆ ನಾಂದಿ ಹಾಡುತ್ತಲಿದೆ. ಈ ಮಂದಿರ ನಿರ್ಮಾಣದಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಸುರಿಸಿದ ಬೆವರು, ಮಾಡಿದ ಪ್ರಯತ್ನ, ಪಟ್ಟ ಕಷ್ಟ, ಜನರ ಮನಸ್ಸಿನಿಂದ ಮರೆಯಾಗಿಲ್ಲ. ■

# ಸಂಸಾರದಲ್ಲಿದ್ದ ಸನ್ಯಾಸಿ

ತೀರ ಚಿಕ್ಕವಯಸ್ಸಿನಲ್ಲಿಯೇ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಾಯಿ-ತಂದೆಗಳನ್ನು ಅಗಲಿ ಯಾದಗಿರಿಗೆ ಬಂದು ಚಿಕ್ಕಮ್ಮ-ಚಿಕ್ಕಪ್ಪನವರ ಆಶ್ರಯಪಡೆದರು. ಚಿಕ್ಕಮ್ಮ ಸ್ವರ್ಗವಾಸಿಯಾದ ನಂತರ ಯಾದಗಿರಿ ಬಿಟ್ಟು ಹಯ್ಯಾಳ, ನಂತರ ಶಹಾಪುರಗಳಲ್ಲಿ ಸಂಚರಿಸಿ ತಮ್ಮ ಬಾಲ್ಯದ ಶಿಕ್ಷಣ ಮುಗಿಸಿದರು. ಮತ್ತೆ ಚಿಕ್ಕಪ್ಪನ ಸಲಹೆಯಂತೆ ಯಾದಗಿರಿಗೆ ಬಂದು ಶಂಕರ ಸಂಸ್ಕೃತ ಕಾಲೇಜಿಗೆ ಸೇರಿ ಅಭ್ಯಾಸ ಮಾಡತೊಡಗಿದರು. ಕೆಲವು ತಿಂಗಳು ಗತಿಸುತ್ತಲೇ ಕಾಲೇಜಿನ ಪ್ರಿನ್ಸಿಪಾಲರು ಕಾಲೇಜಿಗೆ ರಾಜಿನಾಮೆ ಕೊಟ್ಟು ಸಿಕಂದರಾಬಾದಕ್ಕೆ ಬಂದರು. ಅವರ ಆಗ್ರಹದ ಮೇರೆಗೆ ಅವರೊಡನೆ ಸಿಕಂದರಾಬಾದಕ್ಕೆ ಬಂದು ಅವರ ಆದೇಶದಂತೆ ಅವರೇ ಸ್ಥಾಪಿಸಿದ ಸಂಸ್ಕೃತ ಪಾಠ ಶಾಲೆಗೆ ಸೇರಿ ಅನಂತರ ಕಷ್ಟ ಪಟ್ಟು ಪೂನಾ ಪಟ್ಟಣಕ್ಕೆ ಹೋಗಿ ಕಾವ್ಯ ತೀರ್ಥ ಪರೀಕ್ಷೆ ಕೊಟ್ಟು 'ಕಾವ್ಯ ತೀರ್ಥ' ಪದವಿ ಪಡೆದು ಮತ್ತೆ ಯಾದಗಿರಿಗೆ ಬಂದು ಶಿಕ್ಷಕರಾಗಿ ಸೇವೆ ಸಲ್ಲಿಸತೊಡಗಿದರು.

ಚಿಕ್ಕಪ್ಪನವರ ಒತ್ತಾಯ ರಾಮಗಿರಿ ಹಿರೇಮಠದ ಶ್ರೀಗಳ ಆದೇಶದ ಮೇರೆಗೆ ಶಿಕ್ಷಕ ವೃತ್ತಿಗೆ ಶರಣು ಹೊಡೆದು ಶ್ರೀ ಶಂಕರಾನಂದ ಮುದ್ರಣಾಲಯದಲ್ಲಿ ಕೆಲಸ ಮಾಡತೊಡಗಿದರು. ಕನಿಷ್ಟ ೩೫-೪೦ ವರ್ಷಗಳವರೆಗೆ ಸೇವೆ ಸಲ್ಲಿಸುತ್ತ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯ ಕಲಾಪಗಳಲ್ಲಿ ಭಾಗಿಯಾಗಿ ತಮ್ಮ ಸೇವಾ ಕೈಂಕರ್ಯವನ್ನು ಮೆರೆದರು.

ರಾಮಗಿರಿ ಕಟ್ಟೀಮನಿ ಹಿರೇಮಠದ ಪಟ್ಟದ ಶಿಷ್ಯರಾಗಿ ಮಠದ ಜೀರ್ಣೋದ್ಧಾರ ಮಾಡಿ ತಮ್ಮ ಸಂಸಾರವನ್ನು ಅಲ್ಲಿಯೇ ಸಾಗಿಸಿ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಮಠದ ರೂಪು-ರೇಷೆಯನ್ನೇ ಬದಲಿಸಿದರು ಶ್ರೀಗಳ ದರ್ಶನಕ್ಕಾಗಿ ಮಠಕ್ಕೆ ಬರುತ್ತಿರುವ ಅತಿಥಿಗಳಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಯಿತು. ದಾಸೋಹದ ವ್ಯವಸ್ಥೆಯಿಂದ ಮಠಕ್ಕೆ ಹೆಚ್ಚಿನ ಮೆರಗು ಬಂದಿತು.

ಮಠದಲ್ಲಿ ಗುರುಸಿದ್ಧ ಶಾಸ್ತ್ರಿಗಳ ಧರ್ಮ ಪತ್ನಿ ಸೋಮಲಿಂಗಮ್ಮನವರು ದಾಸೋಹ ಕಾರ್ಯದಲ್ಲಿ ಸದಾನಿರತರಾಗಿರುತ್ತಿದ್ದರು. ನಿತ್ಯ ಮಠದಲ್ಲಿ ಅರ್ಚನೆ.

ಅರ್ಪಣೆ, ಅನುಭಾವ ಕಾರ್ಯಗಳು ನಡೆಯುತ್ತಿರುವುದರಿಂದ ಮಠದಲ್ಲಿ ಸದಾ ಸಂಭ್ರಮವಿದ್ಧಂತೆ ಕಾಣತೊಡಗಿತು. ಮುದ್ರಣಾ ಕಾರ್ಯಕ್ಕಾಗಿ ಬರುತ್ತಿರುವ ಪೂಜ್ಯ ಸ್ವಾಮಿಗಳ ವ್ಯವಸ್ಥೆ ಶಾಸ್ತ್ರಿಗಳು ತುಂಬ ಅಚ್ಚುಕಟ್ಟಾಗಿ ನೆರವೇರಿಸುತ್ತಿದ್ದರು. ಶ್ರೀಶಂಕರಾನಂದ ಮುದ್ರಣಾಲಯದಲ್ಲಿ 'ಕಾಯಕ' ಉತ್ತಮ ರೀತಿಯಲ್ಲಿ ನಡೆಸಿ ಮಠದಲ್ಲಿ 'ದಾಸೋಹ'ದ ವ್ಯವಸ್ಥೆಗೆ ಅವಕಾಶ ಕಲ್ಪಿಸಿ ಕೊಟ್ಟು ಶಾಸ್ತ್ರಿಗಳು ಸಂಸಾರದಲ್ಲಿದ್ದ ಸನ್ಯಾಸಿಗಳಂತೆ ಕಾಣುತ್ತಿದ್ದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಜ್ಯೇಷ್ಠಪುತ್ರಿ ಜಯಲಕ್ಷ್ಮಿ ಒಬ್ಬಳು ಮಗಳು ಇಬ್ಬರು ಗಂಡು ಮಕ್ಕಳು ಹಿರಿಯ ಮಗ ಡಾ.ಮಲ್ಲಿನಾಥ ಪಶು ವೈದ್ಯಕೀಯ ವೃತ್ತಿಯಲ್ಲಿದ್ದಾರೆ. ಚಿಕ್ಕ ಮಗ ಬಸವರಾಜಯ್ಯ ಶ್ರೀ ಶಂಕರಾನಂದ ಮುದ್ರಣಾಲಯ ನೋಡಿಕೊಳ್ಳುತ್ತಾರೆ. ಶಾಸ್ತ್ರಿಗಳದು ಚಿಕ್ಕ ಚೊಕ್ಕ ಸಂಸಾರ ಆದರೇ ಇವರದು ಅವಿಭಾಜ್ಯ ಕುಟುಂಬ. ಅದು ದೊಡ್ಡ ಕುಟುಂಬ ಗುರುಸಿದ್ಧ ಶಾಸ್ತ್ರಿಗಳೇ ಕುಟುಂಬದ ಆಲಗಂಬ; ಕೇಂದ್ರ ಬಿಂದು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತಮ್ಮ ಮಕ್ಕಳಿಗಾಗಿ ಏನನ್ನು ಮಾಡಲಿಲ್ಲ. ಮಕ್ಕಳೇ ತಮ್ಮ ಆಸ್ತಿಯೆಂದು ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಸಂಸ್ಕಾರ ಕೊಟ್ಟು ಚೆನ್ನಾಗಿ ಬೆಳೆಸಿದರು. ಇಂದು ಈ ಇಬ್ಬರು ಮಕ್ಕಳು ಮನೆಗೆ ಅಷ್ಟೇ ಆಸ್ತಿ ಅಲ್ಲ ಸಮಾಜದ ಆಸ್ತಿಯಾಗಿ ಬೆಳೆದಿದ್ದಾರೆ.

ಹಿರಿಯಮಗಳು ಜಯಲಕ್ಷ್ಮೀ ಅಳಿಯ ಮಹಾಂತ ಸ್ವಾಮಿಗಳು ಇವರಿಬ್ಬರ ಸಂಸಾರ ಹಾಲು–ಜೇನು ಬೆರೆಸಿದಂತೆ ಇತ್ತು. ಹತ್ತು ವರ್ಷದ ಮೇಲೆ ಶ್ರೀಮತಿ ಜಯಲಕ್ಷ್ಮೀ ಗಂಡು ಮಗುವಿಗೆ ಜನ್ಮ ನೀಡಿ ತಾನು ಹೆರಿಗೆ ಬೇನೆಯಲ್ಲಿ ಇಹ ಲೋಕ ಯಾತ್ರೆ ಮುಗಿಸಿದಳು. ಆಕಸ್ಮಿಕ ಈ ಆಘಾತದಿಂದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ತತ್ತರಿಸಿ ಹೋದರು. ಮೃದು ಮಧುರ ಹೃದಯದ ಶಾಸ್ತ್ರಿಗಳಿಗೆ ನೆಲ–ಮುಗಿಲು ಒಂದಾಗಿ ಕಂಡಿತು. ಒಂದು ಕಡೆ (ಚಿಕ್ಕಮೊಮ್ಮಗ) ಹಸುಗೂಸಿನ ಮುದ್ದು ಸುರಿಯುವ ಮುಖ ಇನ್ನೊಂದು ಕಡೆ ಮಗಳು ಜಯಲಕ್ಷ್ಮಿ ಇಹಲೋಕ ಯಾತ್ರೆ ಮುಗಿಸಿದ ದುಃಖದಲ್ಲಿ ಹೊಯ್ದಾಡುತ್ತ ಹಸುಗೂಸಿನ ಮುಖ ನೋಡಿ ಚೇತರಿಸಿಕೊಳ್ಳತೊಡಗಿದರು.ಇಷ್ಟುಮಾತ್ರ ನಿಜ ಶಾಸ್ತ್ರಿಗಳಿಗೆ ಮಗಳನ್ನು ಕಳೆದುಕೊಂಡ ವೇದನೆ ಕೊನೆಯವರೆಗೂ ಕಾಡಿತು.

ಶಾಸ್ತ್ರಿಗಳು ತಮ್ಮ ಷಷ್ಟ್ಯಬ್ದ ಪೂರ್ತಿ ಸಮಾರಂಭದಲ್ಲಿ ವ್ಯಕ್ತಪಡಿಸಿದಂತೆ ತಮ್ಮ ಮನೆತನದ ಜವಾಬ್ದಾರಿಯನ್ನು ತಮ್ಮ ಧರ್ಮ ಪತ್ನಿ ಸೋಮಲಿಂಗಮ್ಮನವರಿಗೂ ಶ್ರೀ ಶಂಕರಾನಂದ ಮುದ್ರಣಾಲಯದ ಹೊಣೆಯನ್ನು ಸಣ್ಣ ಮಗ

ಬಸವರಾಜಯ್ಯನವರಿಗೆ ಒಪ್ಪಿಸಿ ತಾವು ಧಾರ್ಮಿಕ ಸಾಮಾಜಿಕ ಸೇವೆಯಲ್ಲಿ ಕೈ ತೊಡಗಿಸಿಕೊಂಡರು.

ಶಾಸ್ತ್ರಿಗಳ ಕುಟುಂಬ ಪರಿವಾರದೊಡ್ಡದಿದ್ದಂತೆ ಅವರ ಹಿತೈಷಿಗಳ ಬಳಗವೂ ಬಹುದೊಡ್ಡದಿತ್ತು. ಅವರ ಶಿಷ್ಯ ಸಂಪತ್ತರು, ಭಕ್ತವೃಂದವೂ ಬೆಳೆದು ಬಂದಿತ್ತು. ಅದರಂತೆ ಶಾಸ್ತ್ರಿಗಳ ಅಭಿಮಾನಿ ಬಳಗಕ್ಕೂ ಲೆಕ್ಕವೇ ಇರಲಿಲ್ಲ.

ವಿಶೇಷವಾಗಿ ಉಭಯ ನಂದೂರು ತೋಪಕಟ್ಟಿ ಹಿರೇಮಠ ಷ.ಬ್ರ. ಸದಾಶಿವ ಶಿವಾಚಾರ್ಯರು ನಂದೂರು. ನಂದೂರು ಶ್ರೀಗಳೆಂದೇ ಪ್ರಸಿದ್ಧರಾಗಿದ್ದರು. ಪೂಜ್ಯರು ಹಿರೇನಂದೂರು ಗ್ರಾಮದಲ್ಲಿ ಪ್ರತಿವರ್ಷ ನಡೆಸುತ್ತಿದ್ದ ಶ್ರೀ ಮಲಯ ಮಹಾಂತೇಶ್ವರ ಜಾತ್ರೆಗೆ ತಪ್ಪದೇ ಬರುತ್ತಿದ್ದರು. ಜಾತ್ರೆಯ ಸಮಯದಲ್ಲಿ ನಂದೂರು ಮಠದಲ್ಲಿ ಹಮ್ಮಿಕೊಳ್ಳುತ್ತಿದ್ದ ಎಲ್ಲ ಧಾರ್ಮಿಕ ಕಾರ್ಯ ಕಲಾಪಗಳಿಗೆ ಶಾಸ್ತ್ರಿಗಳದೇ ಮಾರ್ಗ ದರ್ಶನ, ಅಗ್ರಪಾತ್ರ ಇರುತ್ತಿತ್ತು. ಅಷ್ಟು ಪ್ರೀತಿ ವಿಶ್ವಾಸ ಗುರುಸಿದ್ಧ ಶಾಸ್ತ್ರಿಗಳ ಮೇಲೆ.

ಅದರಂತೆ ಮಲ್ಲೂಡ ಕಟ್ಟಿಮನಿ ಹಿರೇಮಠದ ಷ.ಬ್ರ. ಶ್ರೀ ಸೋಮಶೇಖರ ಶಿವಾಚಾರ್ಯರು, ಬಳ್ಳಾರಿಯ ಶಿವ ಚನ್ನಬಸವಯ್ಯ ಹರನಳಾದ ಶ್ರೀ ಚಿದಾನಂದ ಶಿವಾಚಾರ್ಯರು, ಸಾವಳಗಿ ಹಿರೇಮಠದ ಷ.ಬ್ರ. ವೇದಾಂತಾಗಮ, ಸರ್ವ ದರ್ಶನಾಚಾರ್ಯರು ನೀಲಕಂಠ ಶಿವಾಚಾರ್ಯರು, ಆದವಾನಿಯ ಶ್ರೀ ಜಿ.ಎಂ.ಬಸವರಾಜ ಶಾಸ್ತ್ರಿಗಳು ಜೇವರ್ಗಿಯ ಷಣ್ಮುಖ ಸ್ವಾಮಿ ಮಠದ ಶ್ರೀ. ಮ.ನಿ.ಪ್ರ.ಸ್ವ ಶಾಂಡಲಿಂಗಸ್ವಾಮಿಗಳು ಸೋಲಾಪುರದ ಕಿರೀಟ ಮಠದ ದರ್ಶಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ.ಶಿವಮೂರ್ತಿ ಸ್ವಾಮಿಗಳು ಡಾ. ಸಿದ್ಧಯ್ಯ ಪುರಾಣಿಕರು ಮುಂತಾದ ಘಟಾನುಘಟಿಗಳ, ಘನ ವಿದ್ವಾಂಸರ ಸಂಪರ್ಕ ಆತ್ಮೀಯ ಸ್ನೇಹ ಸಂಪಾದಿಸಿದ್ದರು. ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು.

ರಾಯಚೂರು, ಕಲಬುರ್ಗಿಗಳ ಮಠಾಧೀಶರಷ್ಟೇ ಅಲ್ಲ ಇಡೀ ವೀರಶೈವ ಧರ್ಮದ ಪಂಚಾಚಾರ್ಯರೆಲ್ಲರೂ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ವೈಯಕ್ತಿಕ ಪ್ರೀತಿ-ವಿಶ್ವಾಸದಿಂದ ಕಾಣುತ್ತಿದ್ದರು ಶಾಸ್ತ್ರಿಗಳ ಪಾಂಡಿತ್ಯ, ಧರ್ಮದ ಬಗ್ಗೆ ಅವರಿಗಿದ್ದ ಕಳಕಳಿ ಶಾಸ್ತ್ರ ಜ್ಞಾನವನ್ನು ಅರಿತ ಶಾಸ್ತ್ರಿಗಳನ್ನು ತುಂಬ ಗೌರವದಿಂದ ಕಾಣುತ್ತಿದ್ದರು. ಕಲಬುರ್ಗಿ-ರಾಯಚೂರು ಜಿಲ್ಲೆಗಳಿಗೆ ಪಂಚ ಪೀಠದವರು ಆಗಮಿಸಿದರೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಆಯಾ ಊರುಗಳಿಗೆ ಅತಿಥಿಗಳೆಂದು ಕರೆಯಿಸಿಕೊಳ್ಳಲು ಮರೆಯುತ್ತಿರಲಿಲ್ಲ. ಚಿಣಮ್ಮಗೇರಿ-ಚೌಡಾಪುರ ಮಹಾಂತೇಶ್ವರ ಮಠಕ್ಕೆ ಪ್ರತಿವರ್ಷವೂ ಬಂದು ಪ್ರವಚನ ನೀಡುತಿದ್ದರು. ರಂಭಾಪುರಿ ಬಾಳಿ ಹಳ್ಳಿ ಪೀಠಾಧಿಪತಿಗಳಾದ ೧೦೦೮ವೀರ ಗಂಗಾಧರ ಶಿವಾಚಾರ್ಯರಂತೇ ತಮ್ಮ

ಆಸ್ಥಾನದ ಪ್ರತಿಯೊಂದು ಬೃಹತ್ ಧಾರ್ಮಿಕ ಕಾರ್ಯಕ್ರಮಗಳಿಗೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳನ್ನು ಮುಖ್ಯ ಅತಿಥಿಗಳೆಂದು ಬರಮಾಡಿಕೊಂಡು ಸಭೆ-ಸಮಾರಂಭಗಳಲ್ಲಿ ಹೃದಯ ತುಂಬಿ ಗೌರವಿಸುತ್ತಿದ್ದರು. ಇದಕ್ಕೆಲ್ಲ ಕಾರಣ ಗುರುಸಿದ್ಧ ಶಾಸ್ತ್ರಿಗಳು ಕೈಕೊಂಡ ಸತ್ಯ ಶುದ್ಧ ಕಾಯಕ. ಪರೋಪಕಾರ, ಮನೋಧರ್ಮ, ಪಾರಮಾರ್ಥ ಸಾಧನೆ ಎಂದು ಬೇರೆ ಹೇಳಬೇಕಾಗಿಲ್ಲ.

ಶಾಸ್ತ್ರಿಗಳು ಯಾವುದೇ ಸಭೆ-ಸಮಾರಂಭಗಳಲ್ಲಿ ಭಾಗವಹಿಸಲಿ ಅಲ್ಲಿ ಶಾಸ್ತ್ರಿಗಳು ಶ್ರೀಗಳ ಅನುಗ್ರಹಕ್ಕಾಗಲಿ, ಕಾಣಿಕೆಗಳಿಗಾಗಲಿ ಕೈ ಹೊಸೆಯುತ್ತ ನಿಂತವರಲ್ಲ. ಇಲ್ಲದನ್ನು ಅಪೇಕ್ಷಿಸುತ್ತ ಎಂದೂ ಕುಳಿತವರಲ್ಲ. ಎಲ್ಲದರಲ್ಲಿಯೂ ತಮ್ಮ ತ್ಯಾಗ, ನಿಷ್ಠೆ ಪ್ರಮಾಣಿಕತೆ, ನಿಸ್ಪೃಹತೆ, ಕರ್ಪೂರದಂತೆ ಹೊಳೆಯುತ್ತಿರಬೇಕು. ಇದು ಶಾಸ್ತ್ರಿಗಳ ಸ್ವಭಾವ, ಶಾಸ್ತ್ರಿಗಳು ಇವರು ಪಂಚಾಚಾರ್ಯರು, ಅವರು ವಿರಕ್ತರು ಎಂದು ಭೇದ-ಭಾವ ಮಾಡುತ್ತಿರಲಿಲ್ಲ. ಇವರಿಬ್ಬರೂ ವೀರ ಶೈವ ಸಮಾಜದ ಅಮೂಲ್ಯ ಆಸ್ತಿ. ಎರಡು ಭುಜಗಳು ಎಂದು ಭಾವಿಸಿಕೊಂಡಿದ್ದರು. ಅಂತೆಯೇ ಶಾಸ್ತ್ರಿಗಳು ಸಮಾನತೆ, ಸೌಹಾರ್ದತೆಯಿಂದ ನಡೆದುಕೊಳ್ಳುತ್ತಿದ್ದರು. ಬಸವಣ್ಣನವರ ತತ್ವಗಳನ್ನು ಕುರಿತು ನಿರರ್ಗಳವಾಗಿ ಮಾತನಾಡುತ್ತಿದ್ದರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಲ್ಲಿ ಸದಾ ಪಂಚಾಂಗ ಇರುತಿತ್ತು. ಯಾರೇ ತಮ್ಮ ಕೆಲಸಕ್ಕೆ ತಿಥಿ, ಮುಹೂರ್ತ ಕೇಳಿದರೆ ತಕ್ಷಣವೇ ಹೇಳಿ ಅವರ ಕಾರ್ಯ ಕಲಾಪಗಳಿಗೆ ಚಾಲನೆ ಕೊಡುತ್ತಿದ್ದರು. ಇದು ಅವರ ಕಾರ್ಯವಾಗಿರಲಿಲ್ಲ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಅವರ ಹವ್ಯಾಸವಾಗಿತ್ತು.

ಊರಲ್ಲಿ ಯಾರಾದರೂ ಸತ್ತರು ಅಲ್ಲಿ ಶಾಸ್ತ್ರಿಗಳು ಇರಲೇ ಬೇಕು. ಏನಾದರು ಕೆಡುಕಾದರು ಅಲ್ಲಿ ಶಾಸ್ತ್ರಿಗಳು ಇರಲೇ ಬೇಕು ಇದು ಜನರ ಬಲವಾದ ಅಪೇಕ್ಷೆಯಾಗಿತ್ತು. ಇವರನ್ನು ಅರ್ಥಮಾಡಿಕೊಂಡ ಎಲ್ಲರಿಗೂ ಗೊತ್ತಿತ್ತು. ಶಾಸ್ತ್ರಿಗಳು ಸಂಸಾರದಲ್ಲಿದ್ದ ಸನ್ಯಾಸಿಗಳು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಶರಣರು ಎಂದು".

■

# ಶಾಸ್ತ್ರಿಗಳಿಗೆ ದೊರೆತ ಪ್ರಶಸ್ತಿ, ಸಂದ ಗೌರವ

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಲ್ಲಿ ಅಗಾಧವಾದ ವಿದ್ವತ್ತು,ಅಪಾರವಾದ ಪಾಂಡಿತ್ಯ ಇದ್ದರೂ ಅವರಲ್ಲಿ ಎಳ್ಳು ಕಾಳಷ್ಟು ಗರ್ವ ಅಹಂಕಾರಗಳಿರಲಿಲ್ಲ. ಸತ್ಯ, ಶುದ್ಧ ಪ್ರಾಮಾಣಿಕ ವ್ಯಕ್ತಿಗಳಾಗಿದ್ದರೂ ತಾವು ಆದರ್ಶ ವ್ಯಕ್ತಿಗಳು ಎಂಬ ಅಹಮ್ಮಿಕೆ ಇರಲಿಲ್ಲ. ಸಂಘಟನಾ ಚತುರರಾಗಿದ್ದರೂ ಕುತಂತ್ರಿಗಳಾಗಿರಲಿಲ್ಲ. ಅತ್ಯಂತ ಜನಸಾಮಾನ್ಯರ ಮಧ್ಯದಲ್ಲಿದ್ದು, ನಾಡು-ನುಡಿ ಎತ್ತಿ ಹಿಡಿದು ತಮ್ಮ 'ಕಾಯಕ' ನಿಷ್ಠೆಯಿಂದ, ಪರೋಪಕಾರ ದೃಷ್ಟಿಯಿಂದ ಜನಸಾಮಾನ್ಯರ ಬಾಳಿಗೆ ಬೆಳಕು ನೀಡಿದರು. ಜನಾನುರಾಗಿಗಳಾಗಿ ಜನಪ್ರಿಯರಾಗಿ ಸಮಾಜದ ಕಟ್ಟ ಕಡೆಯ ಮನುಸ್ಯವನ್ನು ಸ್ಪಂದಿಸಿದರು. ಕರ್ನಾಟಕ ಸರಕಾರ ಇಂತಹ ವ್ಯಕ್ತಿಯನ್ನು ಗುರುತಿಸಿ 'ಸಂಸ್ಕೃತ ವಿದ್ವಾನ್' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ದಿನಾಂಕ ೨೩-೫-೧೯೮೫ ರಂದು ಬೆಂಗಳೂರಿನ ಸರ್. ಪುಟ್ಟಣ್ಣ ಚಟ್ಟಿ ಟೌನ್ ಹಾಲಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಅದ್ದೂರಿಯಿಂದ ನಡೆಯಿತು. ಈ ಸಮಾರಂಭದಲ್ಲಿ ಕನ್ನಡ ನಾಡಿನ ಹತ್ತು ಜನ ಮುತ್ತಿನಂತಹ "ಸಂಸ್ಕೃತ ವಿದ್ವಾಂಸರು" ವೇದಿಕೆಯ ಮೇಲೆ ವಿರಾಜ ಮಾನರಾಗಿ ವಿರಾಜಿಸುತ್ತಿದ್ದರು. ಅವರಲ್ಲಿ ಹೈದರಾಬಾದ ಕರ್ನಾಟಕ ಏಕೈಕ ವ್ಯಕ್ತಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು. ಶಾಸ್ತ್ರಿಗಳಿಗೆ ಶಾಲು ಹೊದಿಸಿ ಫಲ ತಾಂಬೂಲು ನೀಡಿ ಒಂದು ಸಾವಿರ ರೂಪಾಯಿ ಗೌರವಧನ ಅರ್ಪಿಸಿ ಗೌರವಿಸುತ್ತಿರುವುದನ್ನು ನೋಡಿ ಕನ್ನಡಿಗರೆಲ್ಲರೂ ಹೆಮ್ಮೆ ಪಟ್ಟು ಕೊಂಡರು.

ಅಮೃತಮಯವಾದ ಈ ಸುದ್ದಿಯನ್ನು ಯಾದಗಿರಿಯಿಂದ ಹೊರ ಬರುತ್ತಿದ್ದ "ವಿಶ್ವ ಕಲ್ಯಾಣ" ವಾರ ಪತ್ರಿಕೆಯಲ್ಲಿ ಸಂಪಾದಕರಾದ ಬಿ.ಮಹಾದೇವಪ್ಪನವರು "ಸುವರ್ಣ ಸಮನ್ವಯ ದೃಷ್ಟಿಕೋನದ ಶ್ರೀ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಎಂಬ ಶಿರೋನಾಮ ಕೊಟ್ಟು ಬರೆದ ಲೇಖನ ತುಂಬ ಮಾರ್ಮಿಕವಾಗಿದೆ".

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ವಿದ್ವತ್ತು, ಸಂಸ್ಕೃತ ಭಾಷಾ ಪ್ರೌಢಿಮೆ ಶಾಸ್ತ್ರಾಧ್ಯಯನ, ಪುರಾಣ ಪ್ರವಚನ, ವಾಗ್ವೈಖರಿ, ಕನ್ನಡ ಭಾಷಾಭಿಮಾನಗಳಿಗಾಗಿಯೇ ಈ ಹಿಂದೆಯೇ ರಾಜ್ಯಮಟ್ಟದ ಮನ್ನಣೆ ಗೌರವ ಆದರಗಳು ದೊರೆಯಬೇಕಿತ್ತು.

ತಡವಾದರೂ ಸರಿ ಅವರ ಈ ಎಪ್ಪತ್ತೊಂದರಷ್ಟು ಇಳಿ ವಯಸ್ಸಿನಲ್ಲಾದರೂ ಸರಕಾರ ತನ್ನ ೧೯೮೫ ನೆಯ ಸಾಲಿನ "ಸಂಸ್ಕೃತ ವಿದ್ವಾನ್" ಪ್ರಶಸ್ತಿ ನೀಡಿದುದು ಶಾಸ್ತ್ರಿಗಳ ವ್ಯಕ್ತಿತ್ವ ಅರಳಿದ ಹೂವು ಎಂದು ಬಣ್ಣಿಸಿ ಬರೆದು ಈ ಭಾಗದ ಜನಮನವನ್ನು ಸೆಳೆದರು.

ಶಾಸ್ತ್ರಿಗಳಿಗೆ "ಸಂಸ್ಕೃತ ವಿದ್ವಾನ್" ಪ್ರಶಸ್ತಿ ದೊರೆತ ಸುದ್ದಿ ಕೇಳಿದ ಈ ಭಾಗದ ರಾಜಕಾರಣಿಗಳು, ಮುತ್ಸದ್ದಿಗಳು ಮಠಾಧೀಶರು ಶಾಲಾ–ಕಾಲೇಜುಗಳ ಶಿಕ್ಷಕರು, ವ್ಯಾಪಾರಿಗಳು, ಸಾರ್ವಜನಿಕರು, ಆನಂದ ಸಾಗರದಲ್ಲಿ ತೇಲಿದರು. ಆಗ ಅವರ ಹತ್ತಿರದ ಬಂಧುಗಳು, ಸಮಾಜದ ಧುರಿಣರು ಆದ ವಿಶ್ವನಾಥರೆಡ್ಡಿ ಮುದ್ನಾಳ, ವಿದ್ಯಾಧರ ಗುರೂಜಿ ಇವರೆಲ್ಲರೂ ಕೂಡಿ ಆಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾಗಿದ್ದ ಜೀವರಾಜ ಆಳ್ವ ಅವರ ಗಮನಕ್ಕೆ ತಂದು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಮಾಸಾಶನ ಮಂಜೂರಿ ಮಾಡಿಸಿದರು. ಪ್ರತಿ ತಿಂಗಳೂ ಶಾಸ್ತ್ರಿಗಳು ತಮಗೆ ಬರುತ್ತಿದ್ದ ೨೫೦=೦೦ ರೂ.ಗಳನ್ನು ಸ್ವೀಕರಿಸಿ ಆ ಹಣವನ್ನು ಸಾರ್ವಜನಿಕ ಕೆಲಸಗಳಿಗೆ ಖರ್ಚು ಮಾಡುತ್ತಿದ್ದರು. ಸರ್ಕಾರ ಕೊಡುತ್ತಿರುವ ಈ ಗೌರವಧನ ಸಾರ್ವಜನಿಕ ಕೆಲಸಗಳಿಗೆ ಉಪಯೋಗಿಸಿದರೆ "ಶಿವನ ಸೊತ್ತು ಶಿವನಿಗೆ" ಅರ್ಪಿಸಿದಂತಾಗುತ್ತದೆ. ಎಂಬ ಉದಾತ್ತ ಭಾವನೆ ಶಾಸ್ತ್ರಿಗಳದ್ದು.

ಸಂಸ್ಕೃತ, ಕನ್ನಡ ಭಾಷಾ ಪಂಡಿತರಾದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳಿಗೆ ಈ ಸಮಯದಲ್ಲಿ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅವರನ್ನು ಕಲಬುರ್ಗಿಗೆ ಬರಮಾಡಿಕೊಂಡು ಅವರಿಗೆ ಆತ್ಮೀಯ ಸನ್ಮಾನ ನೀಡಿ ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಕನ್ನಡ ಭಾಷಾ ಅಭಿಮಾನ, ಕಾಯಕ ನಿಷ್ಠೆ, ಪರೋಪಕಾರ ದೃಷ್ಟಿ ಮುಂತಾದ ಮಾನವೀಯ ಮೌಲ್ಯಗಳನ್ನು ಕುರಿತು ಪ್ರಶಂಸೆ ಮಾಡಲಾಯಿತು. ಅದರಂತೆ ಅನೇಕ ಮಠಾಧೀಶರು ಅವರನ್ನು ತಮ್ಮ ಮಠಗಳಿಗೆ ಕರೆಸಿ ಆತ್ಮೀಯ ಸನ್ಮಾನ ಮಾಡಿ ಶಾಸ್ತ್ರಿಗಳು ಕೈ ಕೊಂಡ ಸೇವೆಯನ್ನು ಕುರಿತು ಮಾತನಾಡಿದರು. ಈ ಎಲ್ಲ ಸನ್ಮಾನಗಳಿಗೆ ಶಾಸ್ತ್ರಿಗಳು "ನನ್ನ ಕೆಲಸ ನಾನು ಮಾಡಿದ್ದೇನೆ ಅದು ಪರರ ಸೇವೆಯೆಂದು ಭಾವಿಸಿ ಬಣ್ಣಿಸುತ್ತಿರುವಿರಿ ಅದು ನಿಮ್ಮ ದೊಡ್ಡ ಮನಸಿನ ವಿಶಲ ಹೃದಯದ ಕುರುಹು" ಎಂದು ಹೇಳಿ " ಮಾಡಿದನೆಂದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂದು ಎಚ್ಚರಿಕೆಯ ಗಂಟೆ ಬಾರಿಸಿ ತಮ್ಮ ಮಾತುಮುಗಿಸುತ್ತಿದ್ದರು.

■

## ದುಡಿಯ ಬೇಕೆಂಬ ತುಡಿತ ನಿಲ್ಲಲಿಲ್ಲ

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು 'ಮನೆ' ಮತ್ತು 'ಮುದ್ರಣಾಲಯದ ಕೆಲಸದಿಂದ ಮುಕ್ತರಾಗಿದ್ದರೂ ಸಾರ್ವಜನಿಕ ಸೇವೆಯಿಂದ ಮುಕ್ತರಾಗಿರಲಿಲ್ಲ. ತಾವು ಕೈ ಕೊಂಡ "ವೀರಶೈವ ಕಲ್ಯಾಣ ಮಂಟಪ"ದ ಕೆಲಸ ಚುರುಕಾಗಿ ನಡೆದಿತ್ತು. ಕೂಡಲೇ ಅದನ್ನು ಮಾಡಿ ಮುಗಿಸುವ ಚಿಂತೆ ಒಂದು ಕಡೆಯಾದರೆ ಜ್ಯೇಷ್ಠ ಪುತ್ರಿ ಜಯಲಕ್ಷ್ಮಿ ಅಗಲಿ ಹೋದ ದುಃಖ ಇನ್ನೊಂದು ಕಡೆ ಹತ್ತಿಕುತ್ತಿದ್ದರೂ ಶಾಸ್ತ್ರಿಗಳು ಧೈರ್ಯಗೆಡಲಿಲ್ಲ. ನಿತ್ಯ ಸ್ನಾನ, ಪೂಜೆ, ಪಠಣ, ಪ್ರಸಾದ, ಮುಗಿಸಿಕೊಂಡು ಕಟ್ಟಡ ನಡೆದ "ವೀರಶೈವ ಕಲ್ಯಾಣ ಮಂಟಪ"ದ ಕಡೆಗೆ ಬರುತ್ತಿದ್ದರು. ಅವರ ಜೊತೆಗೆ 'ವಿಶ್ವ ಕಲ್ಯಾಣ' ವಾರ ಪತ್ರಿಕೆಯ ಸಂಪಾಕದರಾದ ಬಿ,ಮಹಾದೇವಪ್ಪನವರು ಸ್ವಾತಂತ್ರ್ಯ ಹೋರಾಟ ಗಾರ ಜಗದೇವಪ್ಪ ಹಾಲಬಾವಿ ,ಬಸವರಾಜ ಸ್ವಾಮಿ ಮುಂಡರಗಿ ಮಠ ಅವರು ಇರುತ್ತಿದ್ದರು. ಇವರಲ್ಲಿ ಯಾರಾದರೂ ಒಬ್ಬರನ್ನು ಕೂಡಿಕೊಂಡು 'ಕಲ್ಯಾಣ ಮಂಟಪ'ದ ಚಂದಾಪಟ್ಟಿ ವಸೂಲಿ ಮಾಡಲು ಹೋಗುತ್ತಿದ್ದರು. ಶಾಸ್ತ್ರಿಗಳ ಈ ಕಳಕಳಿ ಸೇವಾಭಾವನೆಯನ್ನು ಗಮನಿಸಿ ಸ್ವಯಂ ಪ್ರೇರಣೆಯಿಂದ ಶಾಸ್ತ್ರಿಗಳ ಕಡೆ ಬಂದು ಚಂದಾ ಪಟ್ಟಿ ಕೊಟ್ಟು ಹೋಗುತ್ತಿದ್ದರು.

ಅದು ೧೯೭೭ನೇ ಇಸವಿ ಶಾಸ್ತ್ರಿಗಳು ತಮ್ಮ ಸ್ವಂತ ಕೆಲಸಕ್ಕಾಗಿ ಕಲಬುರ್ಗಿಗೆ ಬಂದಿದ್ದರು. ಎಲ್ಲಿಯೇ ಹೋಗಲಿ, ಬರಲಿ ಮಗಳು ಜಯಲಕ್ಷ್ಮಿ ಸತ್ತು ಹೋದ ಸಂಕಟ ಶಾಸ್ತ್ರಿಗಳನ್ನು ಸದಾ ಕಾಡುತ್ತಿತ್ತು. ಅದರಿಂದ ಶಾಸ್ತ್ರಿಗಳು ಒಮ್ಮೊಮ್ಮೆ ದಿಜ್ಮೂಢರಾಗಿ ಬಿಡುತ್ತಿದ್ದರು. ಇದರಿಂದ ಶಾಸ್ತ್ರಿಗಳು ಕ್ರಮೇಣ ಅಶಕ್ತರಾಗುತ್ತ ಬಂದು. ಇದ್ದಕ್ಕಿದ್ದಂತೆ ಶಾಸ್ತ್ರಿಗಳು ಕಲಬುರ್ಗಿಗೆ ಬಂದಾಗ ಆಕಸ್ಮಿಕವಾಗಿ ಅವರ ಎದೆಯಲ್ಲಿ ನೋವು ಕಾಣಿಸಿಕೊಂಡಿತು. ಮೈಯಲ್ಲಿ ಬೆವರು ಬಂದು ಮೆಲ್ಲನೆ ನೆಲಕ್ಕೆ ಕುಸಿದರು ತತ್‌ಕ್ಷಣ ಜಿಲ್ಲಾ ಆಸ್ಪತ್ರೆಯ ಹೃದಯರೋಗ ತೀವ್ರಾ ನಿಗಾ ವಿಭಾಗದಲ್ಲಿ ಸೇರಿಸಲಾಯಿತು. ಈ ಕುತ್ತದಿಂದ ಶಾಸ್ತ್ರಿಗಳು ಪಾರಾದರು. ಮತ್ತೆ ಒಂದು ತಿಂಗಳಲ್ಲಿ ಶಾಸ್ತ್ರಿಗಳು ಚೇತರಿಸಿಕೊಂಡರು. ಮುಂದೆ ಡಾಕ್ಟರರ ಸಲಹೆಯಂತೆ ಗುಲಬರ್ಗದಿಂದ ಒಂದು ಕಾರು ಮಾಡಿಕೊಂಡು ಯಾದಗಿರಿಗೆ ಮರಳಿ ಬಂದರು. ತಾವು ವಾಸಿಸುವ ರಾಮಗಿರಿ ಮಠದಲ್ಲಿಯೇ ಕನಿಷ್ಠ ಒಂದು ತಿಂಗಳು ವಿಶ್ರಾಂತಿ

ಪಡೆಯಬೇಕೆಂದು ಡಾ. ಸೂಚಿಸಿದರು. ಶಾಸ್ತ್ರಿಗಳು ಗುಣಮುಖರಾಗಿ ಯಾದಗಿರಿಗೆ ಬಂದ ಮೇಲೆ ಅಲ್ಲಿಯ ಜನರು ತುಂಬ ಸಂತೋಷ ಪಟ್ಟು ಶಾಸ್ತ್ರಿಗಳಿಗೆ ದೇವರು ದೀರ್ಘಾಯುಷ್ಯ ಕೊಟ್ಟು ಕಾಪಾಡಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಒಂದು ತಿಂಗಳು ವಿಶ್ರಾಂತಿ ಪಡೆದು ಚೇತರಿಸಿಕೊಂಡು ಮತ್ತೆ ವೀರಶೈವ ಕಲ್ಯಾಣ ಮಂಟಪದ ಕೆಲಸಕ್ಕೆ ಕೈ ಹಾಕಿದರು ವರ್ಷಾನುಗಟ್ಟಲೆ ಕೆಲಸ ನಡೆಯುತ್ತಲೇ ಇತ್ತು.

೧೯೮೩ ರಲ್ಲಿ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಜನತಾ ಸರಕಾರ ಅಸ್ತಿತ್ವಕ್ಕೆ ಬಂದಿತು. ಜನತಾ ಸರಕಾರದಲ್ಲಿ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ ಸಚಿವರಾಗಿದ್ದರು. ಶ್ರೀ ಮುದ್ನಾಳ ಅವರು ಸರಕಾರದ ಮನ ಒಲಿಸಿ "ವೀರಶೈವ ಕಲ್ಯಾಣ ಮಂಟಪ"ಕ್ಕೆ ಒಂದು ಲಕ್ಷರೂ ಅನುದಾನ ಕೊಡಿಸಿದರು. ಅದರಂತೆ ಯಾದಗಿರಿ ವೀರ ಶೈವ ಸಮಾಜದ ಅಧ್ಯಕ್ಷರಾದ ಗುರಣ್ಣ ವಡಿ ಅವರು ತಮ್ಮ ಪ್ರಭಾವ ಬೀರಿ ಗುಲಬರ್ಗ ಎಚ್.ಕೆ.ಇ. ಸೊಸಾಯಿಟಿಯಿಂದ ಒಂದು ಲಕ್ಷ ರೂಪಾಯಿ ದೇಣಿಗೆ ಕೊಡಿಸಿದರು. ಹೀಗೆ ಬಂದ ಹಣಕ್ಕೆ ಸರಿಯಾಗಿ ಲೆಕ್ಕ ಪತ್ರ ಇಟ್ಟು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿಸತೊಡಗಿದರು.

೧೯೮೮ನೇ ಇಸವಿ. ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಕಲಬುರ್ಗಿ ತಾಲೂಕಿನ ಹಿರೇನಂದೂರು ಗ್ರಾಮದ ತೋಪಕಟ್ಟಿ ಹರೇಮಠದಲ್ಲಿ ಒಂದು ಧಾರ್ಮಿಕ ಕಾರ್ಯಕ್ರಮ ಏರ್ಪಟ್ಟಿತ್ತು. ಈ ಕಾರ್ಯ ಕ್ರಮದಲ್ಲಿ ಪಾಲುಗೊಂಡು ಶಾಸ್ತ್ರಿಗಳು ಮರಳಿ ರೈಲು ಮೂಲಕ ಯಾದಗಿರಿಗೆ ಹೊರಟಿದ್ದರು ಮತ್ತೆ ಶಾಸ್ತ್ರಿಗಳಿಗೆ ರೈಲಿನಲ್ಲಿಯೇ ಎದೆ ನೋವು ಕಾಣಿಸಿಕೊಂಡಿತು. ಆಗ ಅವರಲ್ಲಿ ಮಾತ್ರೆಗಳಿದ್ದವು. ತಕ್ಷಣ ಮಾತ್ರೆಗಳನ್ನು ನುಂಗಿದರು. ಸ್ವಲ್ಪ ಹೊತ್ತಿನಲ್ಲಿ ಹಾಯೆನಿಸಿತು ರೈಲಿನಲ್ಲಿ ಪರಿಚಯುದವರಿದ್ದರು. ಈ ಪರಿಚಯಸ್ಥರು ಶಾಸ್ತ್ರಿಗಳಿಗೆ ಎಳ್ಳಷ್ಟು ತೊಂದರೆಯಾಗದಂತೆ ಯಾದಗಿರಿಯ ರಾಮಗಿರಿ ಹಿರೇಮಠಕ್ಕೆ ಬಂದು ತಲುಪಿಸಿದರು.

ಎರಡನೆಯ ಸಲವೂ ಹೀಗಾಯಿತು ಎಂದು ಮಾತನಾಡಿಸಲು ಹೋದವರಿಗೆಲ್ಲ ಒಂದೇ ಮಾತು ಹೇಳುತ್ತಿದ್ದರು. "ಯಾರು ಗಾಬರಿಯಾಗುವ ಅವಶ್ಯಕತೆ ಇಲ್ಲ ಹೃದಯ ಬೇನೆ ಮತ್ತೆ ಮತ್ತೆ ಮರುಕಳಿಸಿದರೂ ನನಗೇನು ಆಗುವುದಿಲ್ಲ. ನಾನು ನನ್ನ ಜಾತಕವನ್ನು ನೋಡಿಕೊಂಡಿದ್ದೇನೆ. ನನ್ನ ಜನ್ಮ ಕುಂಡಲಿಯಲ್ಲಿ ನನ್ನ ಆಯುಷ್ಯ ಪ್ರಮಾಣ ೭೫ ವರ್ಷಗಳೆಂದು ಬರೆದಿದೆ. ೧೯೯೭ರವರೆಗೆ ನನಗೆ ಸಾವೇ ಬರುವುದಿಲ್ಲ. ನೀವು ನಿಶ್ಚಿಂತೆಯಿಂದ ಇರಿ" ಎಂದು ಹೇಳುತ್ತಿದ್ದರು.

ತಾವೂ ಗಾಬರಿಯಾಗುತ್ತಿರಲಿಲ್ಲ. ಮನೆಯ ಮಂದಿಗು ಗಾಬರಿಗೊಳಿಸುತ್ತಿರಲಿಲ್ಲ. ಮೆಲ್ಲಗೆ ತಾವೇ ಚೇತರಿಸಿಕೊಂಡು ಎದ್ದು ಮತ್ತೆ "ವೀರ ಶೈವ ಕಲ್ಯಾಣ ಮಂಟಪ" ಕಟ್ಟಡದ ಕೆಲಸದ ಕಡೆ ಬಂದು ಕೆಲಸ ಚುರುಕುಗೊಳಿಸಲು ಹೇಳುತ್ತಿದ್ದರು. ಹೀಗೆ ಹೃದಯದ ಬಡಿತ ನಿಂತರೂ ಇನ್ನು ದುಡಿಯಬೇಕೆಂಬ ಮನದ ತುಡಿತ ನಿಲ್ಲಲಿಲ್ಲ.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳವರ ಭಗಿರಥ ಪ್ರಯತ್ನದಿಂದ ಯಾದಗಿರಿಯ "ವೀರಶೈವ ಕಲ್ಯಾಣ ಮಂಟಪ" ಅತ್ಯಂತ ಭವ್ಯವಾಗಿ ರೂಪಗೊಂಡು ನೋಡುಗರ ಕಣ್ಮನ ಸೆಳೆಯ ತೊಡಗಿತು. ಕಲ್ಯಾಣ ಮಂಟಪದಲ್ಲಿ ನೀರಿನ ಸೌಕರ್ಯ, ಕೋಣೆಗಳ ಸೌಲಭ್ಯ, ಪಾಕಶಾಲೆ ಎಲ್ಲವೂ ಪೂರ್ಣಗೊಂಡವು ಮಂಗಲ ಕಾರ್ಯಗಳಿಗಾಗಿ ಮಂಟಪದ ಉದ್ಘಾಟನೆ ಮಾಡದೆ ಕೊಡುವುದೆಂತು? ಎಂದು ಒಬ್ಬರ ಮುಖ ಮತ್ತೊಬ್ಬರು ನೋಡುತ್ತ ಕುಳಿತು ಬಿಟ್ಟರು. ಮತ್ತೆ ಕಾಲ ಬರುವವರೆಗೆ ಕಾಯಬೇಕೆಂದು ಶಾಸ್ತ್ರಿಗಳು ಸುಮ್ಮನೆ ಕುಳಿತುಕೊಂಡರು.

■

## ತಾಲೂಕು ಮಟ್ಟದ ವೀರಶೈವ ಸಮ್ಮೇಳನ

ವೀರಶೈವರಲ್ಲಿ ಒಗ್ಗಟ್ಟು ಮೂಡಬೇಕು ವೀರ ಶೈವ ಧರ್ಮ ಬೆಳ್ಳನೇ ಬೆಳಗಬೇಕು. ಧರ್ಮಗುರುಗಳು 'ಸಕಲ ಜೀವಾತ್ಮರಿಗೆ ಲೇಸನ್ನು ಬಯಸಬೇಕೆಂದು' ಹಗಲಿರುಳು ಪ್ರಯತ್ನಿಸಿದ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಕೊನೆ, ಕೊನೆಗೆ ತುಸು ನಿರಾಶರಾಗುತ್ತ ಬಂದರು ಜನರ ನುಡಿಯೊಂದು ಪರಿ ನಡೆಯು ಇನ್ನೊಂದು ಪರಿ ಒಳಗೊಂದು ಹೊರಗೊಂದು ಇರುವ ಜನರನ್ನು ಕಂಡು ದಿಗಿಲುಗೊಂಡು "ನಗೆಯು ಬರುತ್ತಿದೆ" ಎಂದು ಹೇಳಿದ ಯೋಗಿಗಳ ಮಾತು ಮತ್ತೆ ಮತ್ತೆ ಮೆಲಕು ಹಾಕತೊಡಗಿದರು. ಯಾರೇನು ಮಾಡುವುದು "ಕಾಲಾಯ ತಸ್ಮೈನಮಃ" ಎಂದು ನಡೆದುದನ್ನು ನೋಡುತ್ತ ನಡೆದರು.

ತಾವು ಪ್ರಯತ್ನ ಮಾಡಿ ಕಟ್ಟಿಸಿದ "ವೀರಶೈವ ಕಲ್ಯಾಣ ಮಂಟಪ" ಉದ್ಘಾಟನೆ ಆಗಲಿಲ್ಲ ಎಂಬ ಹಳಹಳಿ ಮನಸ್ಸಿನಲ್ಲಿ ಕುದಿಯುತ್ತಿರುವಾಗ ಅದೇ ಕಲ್ಯಾಣ ಮಂಟಪದಲ್ಲಿ ದಿನಾಂಕ ೨೯.೩೦ ಸಪ್ಟಂಬರ್ ೧೯೮೪ ಎರಡು ದಿನ ಯಾದಗಿರಿ ತಾಲೂಕು ಮಟ್ಟದ "ವೀರ ಶೈವ ಸಮ್ಮೇಳನ" ಜರುಗಿತು. ಈ ಸಮ್ಮೇಳನದಲ್ಲಿ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳು ಎಲ್ಲರಂತೆ ಬಂದು ಭಾಗವಹಿಸಿದರೇ ವಿನಹ ಮೊದಲಿನಂತೆ ಉತ್ಸಾಹ ಇರಲಿಲ್ಲ. ಪ್ರಯತ್ನ ಮಾಡಿ ಉತ್ಸಾಹ ತೋರಿಸಲಿಕ್ಕೂ ಹೋಗಲಿಲ್ಲ.

'ನುಡಿದಂತೆ ನಡೆದರೆ ಇದೇ ಜನ ಕಡೆ' ಎಂದು ಮಹಾತ್ಮರು ಹೇಳುತ್ತಾರೆ. ಆದರೆ ನುಡಿದಂತೆ ನಡೆಯುವ ಜನರೇ ಇಲ್ಲ. ಎಲ್ಲಿನೋಡಿದರಲ್ಲಿ ಈರ್ಷೆ-ಅಸೂಯೆ; ಆಶೆ-ಆಮಿಷೆ; ದ್ವೇಷ-ದುರಹಂಕಾರ, ಲಂಚ-ವಂಚನೆ, ಕುಟಿಲ-ಕುತಂತ್ರಗಳು ಮನುಕುಲದ ಕತ್ತು ಹಿಡಿದು ಹಿಚುಕುತ್ತಲಿವೆ. ಕವಿ ಕಾವ್ಯಾನಂದರು ಹೇಳಿದಂತೆ "ಸ್ವಾತಂತ್ರ್ಯ ಬಂತು ಸೌಜನ್ಯ ಹೋಯಿತು" ವಿದ್ಯೆ ಬಂತು ವಿನಯ ಹೋಯಿತು." ತತ್ವ ಪದಕಾರ ಕಡಕೋಳ ಮಡಿವಾಳಪ್ಪ ಹೇಳಿದಂತೆ ಇನ್ನೇನಿನ್ನೇನು? ಅನ್ನುವಂತಾಯಿತು.

ಎರಡು ದಿನ ನಡೆದ ಈ ಸಮ್ಮೇಳನ ದೊಡ್ಡ ಪ್ರಮಾಣದಲ್ಲಿಯೇ ಸಮಾವೇಶಗೊಂಡಿತ್ತು. ಈ ಸಮ್ಮೇಳನದ ಉದ್ಘಾಟನಾ ಸಮಾರಂಭ ಹಾಗೂ ಮುಕ್ತಾಯ ಸಮಾರಂಭ ಅಧ್ಯಕ್ಷತೆಯನ್ನು ಸ್ಥಳೀಯ ಧುರೀಣ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ವಹಿಸಿ ಕೊಂಡಿದ್ದರು. ರಾಜಕೀಯ ಮುಖಂಡರಾದ ಜೆ.ಎಚ್.ಪಟೇಲ ಎಂ.ಪಿ.ಪ್ರಕಾಶ, ಈ ಸಮ್ಮೇಳನದಲ್ಲಿ ಪಾಲುಗೊಂಡಿದ್ದರು.

ಈ ಸಮ್ಮೇಳನದ ಉದ್ಘಾಟನೆಗಾಗಿ ಅಂದಿನ ಕರ್ನಾಟಕ ಸರಕಾರದ ಕೈಗಾರಿಕಾ ಸಚಿವರಾದ ಬಾಪೂ ಗೌಡ ದರ್ಶನಾಪುರ ಆಗಮಿಸಿದ್ದರೆ ಮುಖ್ಯ ಅತಿಥಿಗಳಾಗಿ ಆಗಿನ ಅಖಿಲ ಭಾರತದ ವೀರಶೈವ ಮಹಾಸಭಾಧ್ಯಕ್ಷರು ಐ.ಎಂ.ಮಗ್ದುಂ ಅವರು ಆಗಮಿಸಿದ್ದರು. ಬೆಂಗಳೂರು ಬೇಲಿಮಠದ ಶ್ರೀ ಶ್ರೀ ಶಿವರುದ್ರಸ್ವಾಮಿಗಳು ಸಮಾರೋಪ ಭಾಷಣ ಮಾಡಿ ಜನರ ಗಮನವನ್ನು ಸೆಳೆದರು. ಬಹಳ ಓಡಾಡ ಬಾರದು. ಹೆಚ್ಚು ಆಲೋಚನೆ ಮಾಡಬಾರದು ಎಂದು ಹೇಳಿದ ವೈದ್ಯರ ಆದೇಶದಂತೆ ಶಾಸ್ತ್ರಿಗಳು ಶಾಂತ ಚಿತ್ತರಾಗಿ ಎಲ್ಲರೊಡನೆ ಬೆರೆಯುತ್ತಿದ್ದರು.

■

## ಕರ್ತವ್ಯದ ಹಾದಿಯಲ್ಲಿ

ಮನುಷ್ಯನಿಗೆ ಆಯುಷ್ಯ ಅಲ್ಪ ವ್ಯವಧಾನ ಕಡಿಮೆ, ಮಾಡಬೇಕಾದ ಕೆಲಸ ಸಾಗರದಷ್ಟು. ಸಾದಿಸಿದ್ದು ಸಿಂಪಿಯಷ್ಟು. ಈ ಪ್ರಪಂಚಕ್ಕೆ ಎಷ್ಟು ಮಾಡಿದರೂ ಕಡಿಮೆಯೇ. ಮನುಷ್ಯ ದುಡಿಯುತ್ತ ಹೋಗಬೇಕು. ತನ್ನ ಕರ್ತವ್ಯದಲ್ಲಿ ತಾನು ನಿರನಾಗುವುದೇ ಶ್ರೇಷ್ಠ ಎಂದು ಶಾಸ್ತ್ರಿಗಳು ಮತ್ತಷ್ಟು ಪರೋಪಕಾರ ಕೆಲಸದಲ್ಲಿ ನಿರತರಾಗಲು ಸಂಕಲ್ಪ ಮಾಡಿಕೊಂಡರು ಆ ಕಡೆ ಜನರ ಒತ್ತಡವೂ ಬರತೊಡಗಿತ್ತು.

ಪರಸೇವೆಯಲ್ಲಿ ಪರಮಾತ್ಮನನ್ನು ಕಾಣುವ ಬಯಕೆ ಶಾಸ್ತ್ರಿಗಳಲ್ಲಿಯೂ ಇತ್ತು. ಅದಕ್ಕಾಗಿ ಯಾರು ಕರೆದರೂ ಒಲ್ಲೆನೆನುತ್ತಿರಲಿಲ್ಲ ಅಂಗಡಿ ಪೂಜೆ, ಗುದ್ದಲಿ ಪೂಜೆ, ಮನೆಯ ಚೌಕಟ್ಟು ಕೂಡಿಸುವ ಪೂಜೆ, ವಾಸ್ತು ಶಾಂತಿ, ವಿವಾಹಾದಿ ಮಂಗಲ ಕಾರ್ಯಗಳು ವರದಶಂಕರ ಕಥೆ ಸರಕಾರಿ ಕಟ್ಟಡಗಳ ಶಂಕುಸ್ಥಾಪನೆ, ಇತ್ಯಾದಿ ಕೆಲಸಗಳಿಗೆ ತಪ್ಪದೇ ಹೋಗುತ್ತಿದ್ದರು. ಅಣ್ಣ–ತಮ್ಮಂದಿರ ಜಗಳ, ಅತ್ತೆ–ಸೊಸೆಯ ತಂಟೆ ಹೊಲ–ಮನೆಗಳ ನ್ಯಾಯವನ್ನು ಬಗೆ ಹರಿಸಿ ಅವರನ್ನು ಸನ್ಮಾರ್ಗಕ್ಕೆ ತರುತ್ತಿದ್ದರು. ತಮ್ಮ ಹತ್ತಿರ ಬರುವ ಜನರನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದರು. ಜಾತಿ–ಮತಗಳನ್ನು ಎಣಿಸುತ್ತಿರಲಿಲ್ಲ. ಮೇಲು–ಕೀಳುತನ ಮಾಡುತ್ತಿರಲಿಲ್ಲ. ಎಲ್ಲರೂ ಆ ಪರಮಾತ್ಮನ ಮಕ್ಕಳು ಅವರ ಹೃದಯದಲ್ಲಿಯೇ ಪರಮಾತ್ಮನನ್ನು ಕಾಣಲು ಹಂಬಲಿಸುತ್ತಿದ್ದರು.

ಶಾಸ್ತ್ರಿಗಳು ನಿತ್ಯ "ಪ್ರಭುಲಿಂಗ ಲೀಲೆ" ಪಾರಾಯಣ ಮಾಡುತ್ತಿದ್ದರು. "ಪ್ರಭುಲಿಂಗಲೀಲೆ'ಯಲ್ಲಿ ಬರುವ ಈ ಸಾಲುಗಳನ್ನು ಮತ್ತೆ ಮತ್ತೆ ಓದಿ ಅರ್ಥ ಮಾಡಿಕೊಂಡು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದ್ದರು.

"ಕಾಲು, ಕೈ, ಕಣ್ಣುಗಳು, ತನುವಿಹ
ಕಾಲುದಲೆ ಕಾಲನ ನಿವಾರಿಸಿ
ಮೇಲುಗತಿಯನು ಸಾಧಿಸವವನೆ ಜಾಣ ನೋಡೆಂದ"

ಕೈ, ಕಾಲುಗಳು ಬಿದ್ದು ಹೋಗಿ ಕಣ್ಣುಗಳ ದೃಷ್ಟಿ ಕಳೆದು ಹೋಗಿ ಹಾಸಿಗೆ ಹಿಡಿದಾಗ ಪರೋಪಕಾರ ಮಾಡುವುದು ಸಾಧ್ಯವಿಲ್ಲ. ಬಹಳ ಸುದೈವದಿಂದ ಇನ್ನೂ ಕೈ ಕಾಲುಗಳಲ್ಲಿ ಶಕ್ತಿ ಇದೆ ಕಣ್ಣುಗಳಲ್ಲಿ ಬೆಳಕು ಇದೆ. ಸೇವೆ ಮಾಡುವ

ಮನಸ್ಸೂ ಇದೆ. ಓಡಾಡುವ ಸಾಮರ್ಥ್ಯವೂ ಇದೆ. ಅದೇಕೋ ಎದೆಯಲ್ಲಿ ನೋವು ಕಂಡು ಹೃದಯದ ಬಡಿತ ಕುಂಟಿತವಾಗ ತೊಡಗಿದೆ. ಮೃತ್ಯು ದೇವತೆ ಹತ್ತಿರ ಹತ್ತಿರ ಬರತೊಡಗಿದೆ. ಅದಕ್ಕೆ ನಾನೂ ಅಂಜುವುದಿಲ್ಲ. ಇದುವರೆಗೂ ನನ್ನ ಕೆಲಸ ನಾನು ಮನಸ್ಸುಗೊಟ್ಟು ಮಾಡಿದ್ದೇನೆ. ಅವನು ಕರೆದಾಗ ಹೋಗಲು ಸಿದ್ಧನಾಗಿದ್ದೇನೆ. ಎಂದು ಸ್ನೇಹಿತರ ಮುಂದೆ ಹೇಳುತ್ತಿದ್ದರು.

ಅದು ೧೯೮೮ನೇ ಇಸವಿ ಶಾಸ್ತ್ರಿಗಳ ಆತ್ಮೀಯ ಶಿಷ್ಯ ಶ್ರೀ ಶರಣಪ್ಪ ಮಾಸ್ತರ ಅರ್ಜುಣಗಿ ಅವರು ಮಾತಾಡುತ್ತ ಕುಳಿತಾಗ "ಶರಣಪ್ಪನವರೇ, ನನ್ನಿಂದ ಯಾವ ಕಾರ್ಯವಾಗಬೇಕಾಗಿದೆ ಹೇಳಿ ನಾನು ಮಾಡಿಕೊಡಲು ಸಿದ್ಧನಿದ್ದೇನೆ ಯಾಕೋ ಕಾಲ ಓಡುತ್ತಲಿದೆ ನನ್ನ ಕಾಲವೂ ಸಮೀಪಿಸುತ್ತಿದೆ ಎಂದು ನನಗನ್ನಿಸುತ್ತದೆ" ಎಂದು ತಮ್ಮ ಅಭಿಪ್ರಾಯ ಹೇಳಿದರು.

ಆಗ ಶರಣಪ್ಪ ಮಾಸ್ತರರು, "ಶಾಸ್ತ್ರಿಗಳೇ, ದಯವಿಟ್ಟು ಅಂತಹ ಮಾತನಾಡ ಬೇಡಿರಿ ತಾವು ಸಾಮಾನ್ಯ ಮಾನವರಲ್ಲ. ಮಹವನ್ನು ಗೆಲ್ಲವ ಮಹಾಂತರು ತಾವು. ತಮಗೇನೂ ಆಗುವುದಿಲ್ಲ. ಇನ್ನೂ ತಮ್ಮಿಂದ ಬಹಳ ಕೆಲಸಗಳು ಆಗ ಬೇಕಾಗಿದೆ. ತಾವು ಧೈರ್ಯ ಕಳೆದುಕೊಳ್ಳಬಾರದು" ಎಂದು ಶರಣಪ್ಪ ಮಾಸ್ತರರು ಶಾಸ್ತ್ರಿಗಳ ಎದೆಯಲ್ಲಿ ಧೈರ್ಯ ತುಂಬಿದರು. "ಶರಣಪ್ಪ 'ಆಯುಷ್ಯ ಇರಬಹುದು. ಆರೋಗ್ಯ ಯಾರ ಕೈಯಲ್ಲಿ, ಅರಹು ಇರಬಹುದು ಮರೆವು ಯಾರ ಕೈಯಲ್ಲಿ ಅರಹು-ಮರುವಾದರೆ ಯಾವ ಕೆಲಸವೂ ಕೈಗೂಡುವುದಿಲ್ಲ ಅಲ್ಲವೇ?" ಎಂದು ಶರಣಪ್ಪ ಮಾಸ್ತರರನ್ನೆ ಎಚ್ಚರಿಸಿದರು.

ಅದು ದಿನಾಂಕ ೨-೨-೧೯೯೦ರ ಬುಧವಾರ ಮಧ್ಯರಾತ್ರಿ ಜಾರುತ್ತಲಿತ್ತು. ಅವರು ನಿತ್ಯ ಕಾರ್ಯಕ್ರಮದ ದಿನಚರಿ ತೆಗೆದು ನೋಡಿದರು. ಏನು ಇಂದು ಒಂದೇ ದಿನ ಮೂರು ಕಾರ್ಯಕ್ರಮಗಳಿವೆಯಲ್ಲ. ಈ ಕಾರ್ಯಕ್ರಮ ಹೇಗೆ ಹೊಂದಿಸಿಕೊಳ್ಳಬೇಕೆಂದು ತಮ್ಮಷ್ಟಕ್ಕೆ ತಾವೇ ಆಲೋಚಿಸಿಕೊಳ್ಳುತ್ತ

೧)ಪತ್ನಿ ಶ್ರೀಮತಿ ಸೋಮಲಿಂಗಮ್ಮನವರನ್ನು ಗುರುವಾರ ದಿನಾಂಕ ೮-೨-೧೯೯೦ ಕಲಬುರ್ಗಿಗೆ ಕರೆದುಕೊಂಡು ಹೋಗಿ ಕೀಲುಗಳ ನೋವಿಗೆ ಚಿಕಿತ್ಸೆ ಮಾಡಿಸಬೇಕು.

೨) ಶಹಾಪುರದ ಭಕ್ತರೊಬ್ಬರು ಅದೇ ದಿನ ಗುರುವಾರ ತಮ್ಮ ಮನೆಯಲ್ಲಿ ವರದ ಶಂಕರ ಕಥೆ ನಡೆಸಿಕೊಡಲು ಭಿನ್ನವಿಸಿ ಕೊಂಡಿದ್ದರು.ಶಹಾಪುರ ಕಾರ್ಯಕ್ರಮಕ್ಕೂ ಹೋಗಬೇಕು.

೩)ಯಾದಗಿರಿ ಭಕ್ತರೊಬ್ಬರು ಬುಧವಾರ ರಾತ್ರಿಯೇ ಬಂದು-ನಮ್ಮ "ಶ್ರೀ

ಗುರು ಫೈನಾನ್ಸ ಕಾರ್ಪೋರಶನ್" ಎಂಬ ಸಂಸ್ಥೆಯನ್ನು ಪ್ರಾರಂಭಿಸುತ್ತೇವೆ. ಅದು ನಾಳೆ ಗುರುವಾರವೇ ತಮ್ಮ ಅಮೃತ ಹಸ್ತದಿಂದ ಮಹಾಲಕ್ಷ್ಮಿ, ಸರಸ್ವತಿ ಪೂಜೆಯೊಡನೆ ಉದ್ಘಾಟನೆಗೊಳ್ಳಬೇಕು. ದಯವಿಟ್ಟು ಆಗುವುದಿಲ್ಲವೆಂದು ಹೇಳ ಬೇಡಿರಿ ತಾವು ಹೇಳುವ ಸಮಯಕ್ಕೆ ನಾವು ಸಿದ್ಧತೆ ಮಾಡಿಕೊಳ್ಳುತ್ತೇವೆ. ಎಂದು ಪಾದ ಹಿಡಿದವರು ಹೂಂ ಅನ್ನುವವರೆಗೂ ಪಾದ ಬಿಡಲಿಲ್ಲ. ತಾವೇ ಇನ್ನೂ ಸ್ವಲ್ಪ ಬೇಗನೆ ಎದ್ದು ಶಹಾಪುರ ಕಾರ್ಯಕ್ರಮ ಮುಗಿಸಿಕೊಂಡು ಯಾದಗಿರಿಗೆ ಬಂದರಾಯಿತೆಂದು ಒಪ್ಪಿಕೊಂಡರು. ನೀವು ನಿಮ್ಮ ಈ ಕಾರ್ಯಕ್ರಮ ಮುಂಜಾನೆ ೧೦ಗಂಟೆಗೆ ಇಟ್ಟುಕೊಳ್ಳಿರಿ ನಾನು ನಿಮ್ಮ ಮನೆಗೆ ಬರುವುದುರಲ್ಲಿ ನಿಮ್ಮ ಮನೆಯ ಕಾರ್ಯಸಿದ್ದಪಡಿಸಿಕೊಂಡರೆ ನಿಮ್ಮ ಮನೆ ಕಾರ್ಯಕ್ರಮ ಮುಗಿಸಿ ಕಲಬುರ್ಗಿಗೆ ಹೋಗುತ್ತೇನೆ. ನಾನು ನಿಮ್ಮ ಮಾತು ಕೇಳಿದ್ದೇನೆ ಇನ್ನು ನೀವು ನನ್ನ ಮಾತನ್ನು ಕೇಳ ಬೇಕು. ಎಷ್ಟು ಹೊಂದಿಸಿಕೊಂಡರೂ ಸಮಯವೇ ಸಾಲುವುದಿಲ್ಲ, ಎಂದು ಹೇಳಿ ಬಂದ ಭಕ್ತರಿಗೆ ಹೇಳಿ ಕಳುಹಿಸಿದರು.

ದಿನಾಂಕ ೮-೩-೧೯೯೦ ಬೆಳಗಿನ ೫ ಗಂಟೆಗೆ ಎದ್ದು ಸ್ನಾನ, ಪೂಜೆ ಮುಗಿಸಿಕೊಂಡು ಅತ್ಯಂತ ಪ್ರಶಾಂತ ಮನಸ್ಸಿನಿಂದ ಇಂದಿನ ಈ ಮೂರು ಕಾರ್ಯಕ್ರಮಗಳನ್ನು ಹೊತ್ತಿಗೆ ಸರಿಯಾಗಿ ಮುಗಿಸಬೇಕೆಂದು ಶಹಾಪುರಕ್ಕೆ ಹೊರಟರು. ಹೊರಡುವಾಗ ನಾನು ಶಹಾಪುರದಿಂದ ಬೇಗನೆ ಬಂದು ಯಾದಗಿರಿಯ ಪೂಜಾ ಕಾರ್ಯಕ್ರಮ ಮುಗಿಸುವುದರೊಳಗೆ ನೀವು ಗುಲಬರ್ಗಾಕ್ಕೆ ಹೋಗುವ ಸಿದ್ಧತೆಯಲ್ಲಿರಬೇಕೆಂದು ಧರ್ಮಪತ್ನಿ ಸೋಮಲಿಂಗಮ್ಮನವರಿಗೆ ಹೇಳಿ ಶಹಾಪುರಕ್ಕೆ ಹೊರಟರು.

ಶಾಸ್ತ್ರಿಗಳು ತಾವು ಹೇಳಿದ ಪ್ರಕಾರ ಶಹಾಪುರಕ್ಕೆ ಮುಂಜಾನೆ ೮ ಗಂಟೆಗೆ ಬಂದು ತಲುಪಿದರು ಅತ್ಯಂತ ಉತ್ಸಾಹ ಭರಿತವಾಗಿ ಪೂಜೆ ಮುಗಿಸಿ "ವರದಶಂಕರ ಕಥೆ" ಹೇಳಿದರು. ಮನೆಯ-ನೆರೆಮನೆಯ ಜನಕ್ಕೆಲ್ಲ ಕಥೆ ಕೇಳಿ ಆನಂದ ಭರಿತರಾದರು ಶಾಸ್ತ್ರಿಗಳ ಪಾದಕಮಲಗಳಿಗೆ ಭಕ್ತಿಪೂರ್ವಕ ನಮಸ್ಕರಿಸಿ ಆಶೀರ್ವಾದ ಪಡೆದರು. ಅಂದು ಶಾಸ್ತ್ರಿಗಳು ಒಂದು ವಾಟಿ ಹಾಲು ಕುಡಿದು ಯಾದರಿಗೆ ಹೊರಟು ಹತ್ತುಗಂಟೆಗೆ ಬಂದು ಸೇರಿದು. ಮಠದಲ್ಲಿ ಸೌ॥ಸೋಮಲಿಂಗಮ್ಮನವರು ಕುಲಬುರ್ಗಿಗೆ ಹೋಗುವ ಸಿದ್ಧತೆಯಲ್ಲಿದ್ದದನ್ನು ನೋಡಿ ಹಾಗೆಯೇ "ಶ್ರೀ ಗುರುಫೈನಾನ್ಸ್ ಕಾರ್ಪೋರೇಶನ್"ನ್ನವರು ತಮ್ಮ ಪೂರ್ಣ ತಯಾರಿಯಲ್ಲಿರಬದುದೆಂದು ಅವರ ಮನೆಗೆ ಬಂದರು. ಅವರು ಎಷ್ಟೇ ವಿನಯದಿಂದ ಅರಕೆ ಮಾಡಿಕೊಂಡಿದ್ದರೂ ಅಷ್ಟು ಮಟ್ಟಿಗೆ ತಯಾರಿಯಾಗಿರಲಿಲ್ಲ. ಶಾಸ್ತ್ರಿಗಳೇ ತಮ್ಮ ಅವಸರವನ್ನು ತಿಳಿಸಿ ಬೇಗನೆ ಸಿದ್ಧಪಡಿಸಲು ಹೇಳಿದರೂ

ಪೂಜೆಗೆ ಹನ್ನೊಂದು ಗಂಟೆನೆ ಆಯಿತು. ಅಲ್ಲಿಯೂ ಶಾಸ್ತ್ರಿಗಳು ಲಕ್ಷ್ಮಿ, ಸರಸ್ವತಿ, ಗಣಪತಿ ವಿಗ್ರಹಗಳಿಗೆ ಪೂಜೆ ಸಲ್ಲಿಸಿ ಎಲ್ಲರಿಗೂ ಪ್ರಸಾದ ಹಂಚಿ ಏಳುವದರೊಳಗೆ ಸುಮಾರು ೧೨ಗಂಟೆ ಬಾರಿಸಿತು. ಶಾಸ್ತ್ರಿಗಳು ಮನೆಯವರ ಒತ್ತಾಯದ ಮೇರೆಗೆ ಒಂದು ಹಣ್ಣು ತಿಂದು ಒಂದು ವಾಟಿ ಹಾಲು ಕುಡಿದು ಬರುವುದರೊಳಗೆ ಕಲಬುರ್ಗಿಗೆ ಹೊರಡುವ ಮೇಲ್ ಗಾಡಿಯ ಸಮಯವಾಗಿತ್ತು.

ಸೌ॥ಸೋಮಲಿಂಗಮ್ಮನವರು ಶಾಸ್ತ್ರಿಗಳಿಗೆ ತುಸು ಊಟ ಮಾಡಿರೆಂದು ಎಷ್ಟು ಹೇಳಿದರು ಶಾಸ್ತ್ರಿಗಳು ರೈಲು ಸಮಯವಾಗಿದೆ ಅಲ್ಲಿ ಒಂದು ಹಣ್ಣು ತಿಂದು ಹಾಲು ಕುಡಿದಿದ್ದೇನೆ. ಎಂದು ಹೇಳಿ ಟಾಂಗಾ ಹಿಡಿದು ರೈಲು ನಿಲ್ದಾಣಕ್ಕೆ ಬಂದರು ಅಂದು ಆ ಮೆಲ್ ಗಾಡಿಯು ಎರಡು ಗಂಟೆ ತಡವಾಗಿ ಬರುತ್ತದೆ ಎಂಬ ಸುದ್ದಿ ಕೇಳಿ ಅದೇ ಟಾಂಗಾ ತಿರುವಿ ಬಸ್ ನಿಲ್ದಾಣಕ್ಕೆ ಬಂದರು. ಬಸ್ ಕಿಕ್ಕಿರಿದು ತುಂಬಿತ್ತು. ಮಾರ್ಚ್ ತಿಂಗಳು ಬೇಸಿಗೆಯ ಬಿಸಿಲು ಶಾಸ್ತ್ರಿಗಳು ಪತ್ನಿ ಸಮೇತ ಬಸ್ಸಿನಲ್ಲಿ ಏರಿ ಒಳಗೆ ಹೋಗುತ್ತಲೇ ಶಾಸ್ತ್ರಿಗಳನ್ನು ಕಂಡ ನಾಯಕಲ್ಲ ಗ್ರಾಮದ ಭಕ್ತರು ತಾವು ಕೂತ ಸ್ಥಳ ಬಿಟ್ಟು ಶಾಸ್ತ್ರಿಗಳಿಗೆ ಸ್ಥಳಕೊಟ್ಟರು. ಕಂಡಕ್ಟರ್ ಬಸ್ ತಿಕೀಟು ಕೊಟ್ಟು ಅರ್ಧ ತಾಸು ತಡಮಾಡಿ ಬಿಡುತ್ತದೆ ಎಂದು ಹೇಳಿ ಚಹಾ ಕುಡಿಯಲು ಹೊರಬಂದರು.

ಮುಂಜಾನೆ ೫ ಗಂಟೆಯಿಂದ ಓಡಾಡುತ್ತಿದ್ದ ೭೫ ವರ್ಷದ ಗುರುಸಿದ್ಧ ಶಾಸ್ತ್ರಿಗಳಿಗೆ ನಿಜವಾಗಿ ದಣಿವಾಗಿತ್ತು. ಬಸ್ಸಿನಲ್ಲಿಯೇ ಕುಳಿತು ವಿಶ್ರಾಂತಿ ಪಡೆಯುತ್ತಿರುವಾಗ ಅವರ ಕಣ್ಣು ಮುಚ್ಚಿದವು. ಅವರಿಗೆ ಯಾದಗಿರಿಯಿಂದ ಬಸ್ ಚಲಿಸಿದ್ದೇ ಗೊತ್ತಿರಲಿಲ್ಲ ಶಹಾಪುರಕ್ಕೆ ಬಸ್ ಬರುತ್ತಲೆ ಎಚ್ಚರವಾಯಿತು. ಆಗ ಅವರ ಹೊಟ್ಟೆಯಲ್ಲಿ ಒಂದ ತರ ಕಸಿವಿಸಿ ಎನಿಸುತ್ತಿತ್ತು. ಯಾವುದೋ ಒಂದು ಸಂಕಟ ಅವರನ್ನು ಕಾಡತೊಡಗಿತ್ತು ಆಗ ಸೋಮಲಿಗಮ್ಮನವರು ಶಾಸ್ತ್ರಿಗಳ ಮುಖದ ಮೇಲಿನ ಬೆವರು ಒರೆಸಿ ಸರಗಿನಿಂದ ಗಾಳಿ ಹಾಕಿ ಶಾಸ್ತ್ರಿಗಳಿಗೆ ಸಂತೈಸತೊಡಗಿದರು. ತಮ್ಮ ತೊಡೆಯ ಮೇಲೆ ಶಾಸ್ತ್ರಿಗಳ ತಲೆ ಇಟ್ಟುಕೊಂಡು ಗಾಳಿ ಹಾಕುತ್ತಿದ್ದರು ಬಸ್ಸು ಒಂದೇ ಸವನೆ ಚಲಿಸುತ್ತಿತ್ತು. ಶಾಸ್ತ್ರಿಗಳಿಗೆ ಎಳ್ಳಷ್ಟು ಸಮಾಧಾನವಿಲ್ಲ ಒಂದೆ ಸವನೆ ಹೊರಳಾಡ ತೊಡಗಿದರು ಕ್ರಮೇಣ ಎದೆ ನೋವು ಹೆಚ್ಚಿತು. "ಯಾಕೋ ಹೇಳಿಕೊಳ್ಳದಂತಹ ಸಂಕಟವಾಗುತ್ತಲಿದೆ" ಎಂದು ಹೇಳಿದರು. ಬಸ್ಸ್ ಶಹಾಪುರ, ಜೇವರ್ಗಿ, ಫರಹತಾಬಾದ ದಾಟಿ ಬಂದಿತು. ಇನ್ನೇನು ಹತ್ತು ಹದಿನೈದು ನಿಮಿಷದಲ್ಲಿ ಕಲಬುರ್ಗಿ ತಲುಪುತ್ತೇವೆ. ಮುಂದೆ ಹೇಗಾದರೂ ಆಗುತ್ತದೆ ಎಂದು ಪತಿ–ಪತ್ನಿಯರು ಮಾತಾಡುತ್ತಿರುವಾಗ "ಎಲ್ಲವೂ ಶಿವನ ಆಟ ನಾವು ಅವನ ಆಟದ ಗೊಂಬೆಗಳು ಅವನು ಆಡಿಸಿದಂತಾಗಲಿ" ಎಂದು ನಿಟ್ಟುಸಿರು

ಬಿಟ್ಟರು. ಆ ಉಸಿರಿನೊಂದಿಗೆ ಶಾಸ್ತ್ರಿಗಳ ಉಸಿರು ಶಿವನ ಸಾನಿಧ್ಯ ಸೇರಿತ್ತು. ಹೀಗೆ ಕರ್ತವ್ಯದ ಹಾದಿಯಲ್ಲಿ ಕಣ್ಣು ಮುಚ್ಚಿದ ಶಾಸ್ತ್ರಿಗಳು ಮತ್ತೊಮ್ಮೆ ಕಣ್ಣು ತೆರೆಯಲಿಲ್ಲ. ಶಾಸ್ತ್ರಿಗಳು ಶಿವನ ಸಾನಿಧ್ಯವನ್ನು ಸೇರಿದ್ದರು.

ಪತ್ನಿ ಸೋಮಲಿಂಗಮ್ಮನವರಿಗೆ ಮುಗಿಲು ಹರಿದು ಮೈಮೇಲೆ ಬಿದ್ದಂತಾಯಿತಯ. ಕಲಬುರ್ಗಿಯಲ್ಲಿದ್ದ ಶಾಸ್ತ್ರಿಗಳ ಸಂಬಂಧಿಕರು ಹಿತ್ತೈಷಿಗಳು ಕೂಡಿ ಶಾಸ್ತ್ರಿಗಳ ಪಾರ್ಥೀವ ಶರೀರವನ್ನು ಯಾದಗಿರಿಯ ರಾಮಗಿರಿ ಕಟ್ಟಿಮನಿ ಹಿರೇಮಠಕ್ಕೆ ತರಲಾಗುತ್ತದೆ ಎಂದು ಸುದ್ದಿ ಕಳಿಸಿ ಅವರ ಪಾರ್ಥೀವ ಶರೀರ ಯಾದಗಿರಿಗೆ ತರಲಾಯಿತು. ಆಗ ರಾತ್ರಿ ೬ ಗಂಟೆಯಾಗಿತ್ತು.

■

# ಅಂತ್ಯ ಯಾತ್ರೆ ದೊಡ್ಡ ಜಾತ್ರೆ

ಶಾಸ್ತ್ರಿಗಳ ಸಾವಿನ ಸುದ್ದಿ ಯಾದಗಿರಿಯಲ್ಲಿ ದಳ್ಳುರಿಯಂತೆ ಹರಡಿತು. ಸತ್ತ ಮುತ್ತಲಿನ ಹಳ್ಳಿಗಳಿಗೂ ಪಸರಿಸಿ ಜನರು ಶೋಕ ಸಾಗರದಲ್ಲಿ ಮುಳುಗಿ ಹೋದರು. ಶಾಸ್ತ್ರಿಗಳ ಪಾರ್ಥೀವ ಶರೀರ ರಾಮಗಿರಿ ಹಿರೇಮಠಕ್ಕೆ ತಲುಪುತ್ತಲೇ ಮಠದ ಆವರಣದಲ್ಲಿ ಜನರು ಕಿಕ್ಕಿರಿದು ಸೇರಿದ್ದರು. ಎಲ್ಲರ ಮುಖ ಒಣಗಿ ಅತ್ತು ಅತ್ತು, ಕಣ್ಣು ನಿಸ್ತೇಜವಾಗಿದ್ದವು. ರಾತ್ರಿ ಆಗಿದ್ದರಿಂದ ಬೆಳಗಾಗುವ ತನಕ ಅವರ ಅಂತಿಮ ದರ್ಶನ ಪಡೆದ ಜನರು ಅಲ್ಲಿಯೇ ಕುಳಿತ್ತಿದ್ದರು.

ಇಷ್ಟೊಂದು ಪ್ರಸಿದ್ಧರಾದ ಶಾಸ್ತ್ರಿಗಳಿಗೆ ಯಾದಗಿರಿಯಲ್ಲಿ ಅಂಗೈ ಅಗಲದಷ್ಟು ಹೊಲ ಇಲ್ಲ, ಗದ್ದೆ ಇಲ್ಲ, ತೋಟ–ಪಟ್ಟಿ ಇಲ್ಲ, ಅವರ ಅಂತ್ಯ ಸಂಸ್ಕಾರ ಎಲ್ಲಿ ಮಾಡಬೇಕು ಎಂಬ ಸಮಸ್ಯ ತಲೆದೋರಿತು. ಸಮೀಪದ ಶಹಾಪುರ ತಾಲೂಕು ನಾಯ್ಕಲ್ಲ ಸೀಮೆಯಲ್ಲಿರುವ ಅವರ ಜಮೀನಿಗೆ ಕೊಂಡೊಯ್ಯಬೇಕೆಂದು ಕೆಲಜನರ ಅಭಿಪ್ರಾಯವಿತ್ತು. ಅವರ ಮೂಲವಾದ ಗೋಡಿಹಾಳ ಸೀಮೆಯಲ್ಲಿರುವ ಅವರ ಹೊಲದಲ್ಲಿಯೇ ಮಾಡಿದರೆ ತಪ್ಪೇನಿಲ್ಲ ಎಂದು ಕೆಲವರ ವಾದ. ಯಾದಗಿರಿ ಶಾಸ್ತ್ರಿಗಳ ಕಾರ್ಯಕ್ಷೇತ್ರ, ಪುಣ್ಯಭೂಮಿ, ಹಗಲಿರುಳು ದುಡಿದು ಬೆವರು ಸುರಿಸದ ಯಾದಗಿರಿಯು ಅವರ ತಪೋ ಭೂಮಿ ಅವರ ಸಮಾಧಿ ಯಾದಗಿರಿಯಲ್ಲಿಯೇ ಆಗಬೇಕು ಎಂದು ಇನ್ನೊಂದು ಕಡೆ. ಅವರ ಸಮಾದಿ ಕಲ್ಯಾಣ ಮಂಟಪದ ಅಂಗಳದಲ್ಲಿಯೇ ಆದರೆ ಹೇಗೆ? ಎಂಬ ಚಿಂತನೆ ಇನ್ನೊಂದು ಕಡೆ ಶಾಸ್ತ್ರಿಗಳ ಸಹೋದರರು ನೆಂಟರು, ಇಷ್ಟರು ಅವರ ಅಭಿಪ್ರಾಯ ಏನು ಅದನ್ನು ಕೇಳುವ ವ್ಯವಧಾನ ಯಾರಲ್ಲಿಯೂ ಇರಲಿಲ್ಲ. ನಿಜವಾಗಿಯೂ ಗುರುಸಿದ್ಧ ಶಾಸ್ತ್ರಿಗಳು ಕೌಟುಂಬಿಕ ಪ್ರೀತಿ–ಒಲವನ್ನು ಮೀರಿ ಸಾರ್ವಜನಿಕರ ಸೊತ್ತಾಗಿ ಹೋಗಿದ್ದರು. ಅವರ ಅಂತ್ಯಕ್ರಿಯೆಗೆ ಬಂದ ಹಲಗೆ ಮೇಳ, ತಮಟೆ ವಾದ್ಯ, ಡೊಳ್ಳಿನ ಓಲಗ ಸನಾದಿ ಮೇಳ ಕರೆಸುವವರಾರೋ, ತಮ ತಮಗೆ ಬೇಕಾದವರಿಗೆ ಸುದ್ದಿ ತಿಳಿಸುವವರಾರೋ, ಹಾಗೆ ಬಂದವರಿಗೆ ಉಪಚರಿಸುವವರಾರೊ ಎಲ್ಲವೂ ನಮ್ಮದೆನ್ನುವಂತೆ ನೆರೆದು ಅಂತ್ಯ ಯಾತ್ರೆ ದೊಡ್ಡ ಜಾತ್ರೆಯಾಗಿ ಪರಿಣಮಿಸಿತು.

ಆ ಸಮಯದಲ್ಲಿ ಪುರ ಪ್ರಮುಖರಾದ ವಿಶ್ವನಾಥರೆಡ್ಡಿ ಮುದ್ನಾಳ, ಶಾಸಕರಾದ ಡಾ.ಎ.ಬಿ. ಮಲಕರೆಡ್ಡಿ ಊರಲ್ಲಿ ಇರಲಿಲ್ಲ. ವಿಶ್ವನಾಥರೆಡ್ಡಿ ಮುದ್ನಾಳ ಅವರ ಕಿರಿಯ ಸಹೋದರ ಭೀಮರೆಡ್ಡಿ ಅವರು ಮುದ್ನಾಳ ಅವರ ಅಧ್ಯಕ್ಷತೆಯಲ್ಲಿ 'ವೀರ ನಿಕೇತನ' ಯಾದಗಿರಿ ಪಟ್ಟಣದ ಗಣ್ಯವ್ಯಕ್ತಿಗಳ ಒಂದು ಸಭೆ ನಡೆಯಿತು. ಈ ಸಭೆಯಲ್ಲಿ ಜಿ,.ಎಂ.ಗುರುಸಿದ್ಧ ಶಾಸ್ತ್ರಿಗಳ ಪ್ರೀತಿಯ ಖಾಸ ಶಿಷ್ಯ ದಿವಂಗತ ಶರಣಪ್ಪ ವಡಿ ಅವರ ಹಿರಿಯ ಸುಪುತ್ರ ತಿಪ್ಪಣ್ಣ ಪಡಿಯವರು ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಸಮಾಧಿ ಕಾರ್ಯಕ್ಕೆ ನಮ್ಮ ತೋಟದಲ್ಲಿ ಒಂದು ಎಕರೆ ಜಮೀನು ಕೊಡುತ್ತೇನೆ. ಅಲ್ಲಿ ಅವರ ಸಮಾಧಿ ಮಾಡಬೇಕೆಂದು ಸಮಸ್ಯೆಗೆ ಇತ್ಯರ್ಥ ಹಾಡಿದರು.

ತಿಪ್ಪಣ್ಣ ವಡಿ ಅವರ ಮಾತು ಕೇಳಿ ಸಭೆಯಲ್ಲಿ ಪಾಲುಗೊಂಡ ಎಲ್ಲ ಜನರಿಗೂ ಸಂತೋಷವಾಯಿತು. ತಿಪ್ಪಣ್ಣ ವಡಿ ಅವರು ತಮ್ಮ ತಂದೆ ಕಾಲದಿಂದಲೂ ಶಾಸ್ತ್ರಿಗಳನ್ನು ಬಲ್ಲವರು. ಆ ಪ್ರೀತಿ–ವಿಶ್ವಾಸ ಉಳಿಸಿಕೊಂಡು ಬಂದವರು ಇಂದಿನ ಸಭೆಯಲ್ಲಿ ಅವರು ಕೈಕೊಂಡ ನಿರ್ಣಯಕ್ಕೆ ಶಿವನೂ ಮೆಚ್ಚಿಕೊಂಡಿರಬೇಕು.

ದಿನಾಂಕ ೯–೩–೧೯೯೦ ಸಾಯಂಕಾಲ ಸಕಲ ಗೌರವದೊಂದಿಗೆ ಅವರ ಅಂತ್ಯ ಕಾರ್ಯ ನಡೆಯಿತು. ಅವರ ಅಂತ್ಯ ಕ್ರಿಯೆಗೆ ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಜೈರಾಬಾದ, ತಾಂಡೂರು, ಆದವಾನಿ ಮುಂತಾದ ಕಡೆಗಳಿಂದ ಹರಿದು ಬಂದ ಜನಸಾಗರ ನೋಡುವವರ ಕಣ್ಣು ಕುಕ್ಕುತ್ತಿದ್ದವು. ಅಂದು ಯಾದಗಿರಿಯ ಇತಿಹಾಸದಲ್ಲಿ "ನ ಭೂತೋ ನ ಭವಿಷ್ಯ" ಎಂಬಂತಾಗಿತ್ತು.

■

## ಶ್ರದ್ಧಾಂಜಲಿ ಸಭೆ–ಸ್ಮಾರಕ ಭವನ

ಮರುದಿನ ಅಂದರೆ ದಿನಾಂಕ ೧೦–೩–೧೯೯೦ರಂದು ವಿಶ್ವನಾಥ ರೆಡ್ಡಿಮುದ್ನಾಳ ಅವರು, ಶಾಸಕರಾದ ಡಾ.ಎ.ಬಿ.ಮಲಕರೆಡ್ಡಿ ಭಾಗವಹಿಸಿದ ಶ್ರದ್ಧಾಂಜಲಿ ಕಾರ್ಯಕ್ರಮ ವೀರಶೈವ ಕಲ್ಯಾಣ ಮಂಟಪದಲ್ಲಿ ಜರುಗಿತ್ತು. ವಿಶ್ವನಾಥ ರೆಡ್ಡಿ ಅವರು ತಮ್ಮ ಅಂತಿಮ ನಮನ ಸಲ್ಲಿಸುತ್ತ "ಈಗಾಗಲೇ ಒಂದು ಎಕರೆ ಜಮೀನು ಕೊಟ್ಟಿರುವ ತಿಪ್ಪಣ್ಣ ವಡಿಯವರು ಇನ್ನೂ ಮೂರು ಎಕರೆ ಜಮೀನು ನೀಡಿದರೆ ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಸ್ಮಾರಕವಾಗಿ ವಿದ್ಯಾರ್ಥಿ ವಸತಿ ಗೃಹ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ, ನಿರ್ಮಿಸಲು ಸಾಧ್ಯವಾಗುತ್ತದೆ" ಎಂದು ತಮ್ಮ ಅಭಿಪ್ರಾಯ ಮಂಡಿಸುತ್ತ ಮಾತು ಮುಗಿಸಿದರು.

ಡಾ.ಎ.ಬಿ.ಮಲಕಡ್ಡಿ ಅವರು ಶಾಸ್ತ್ರಿಗಳ ಸೃಜನಾತ್ಮಕ ಸೇವೆಯನ್ನು ಕೊಂಡಾಡಿದರು. ಶಾಸ್ತ್ರಿಗಳ ಸೇವೆ ಸ್ಮಾರಕಾರ್ಥ ನಿರ್ಮಿಸುವ ಸ್ಮಾರಕ ಭವನ ಬೇಗನೆ ಕಾರ್ಯ ರೂಪಕ್ಕೆ ತರಲು ಮೂರುಜನ ಗಣ್ಯರನ್ನೊಳಗೊಂಡ ಒಂದು ಉಪ ಸಮಿತಿಯನ್ನು ರಚಿಸಲಾಯಿತು.

೧)ಶ್ರೀ ಭೀಮರೆಡ್ಡಿ ಮುದ್ನಾಳ ಮಾಜಿ ಪುರಸಭೆಯ ಸದಸ್ಯರು

೨)ಶ್ರೀ ಕಡ್ಲಯ್ಯ ಸ್ವಾಮಿ ಕೇಶ್ವಾರ ಮಠ ಮಾಜಿ ಪುರಸಭೆಯ ಸದಸ್ಯರು

೩)ಶ್ರೀ ತಿಪ್ಪಣ್ಣ ವಡಿ ಮಾಜಿ ಪುರಸಭೆಯ ಅಧ್ಯಕ್ಷರು

ಈ ಉಪ ಸಮಿತಿಯು ಕೈಕೊಳ್ಳುವ ನಿರ್ಧಾರಗಳಿಗೆ ಎಲ್ಲರೂ ಒಮ್ಮನಸ್ಸಿನಿಂದ ಒಪ್ಪಿಕೊಂಡರು.

ಜಿ.ಎಂ.ಗುರುಸಿದ್ಧ ಶಾಸ್ತ್ರಿಗಳ ಅಭಿಮಾನದ ಮಹಾಪೂರವೇ ಹರಿದು ಬರುತ್ತಿರುವಾಗ ಈ ಕಾರ್ಯ ಬಹು ಬೇಗನೆ ಕಾರ್ಯ ರೂಪಕ್ಕೆ ಬರಬಹುದೆಂದು ಸಮಾದಿಯ ಶಂಕು ಸ್ಥಾಪನೆಯ ದಿನಾಂಕ ೨೭–೩–೧೯೯೦ ರಂದು ನಾಲ್ವಾರದ ಸಿದ್ಧಿಪುರುಷ ಶ್ರೀ ಕೋರಿ ಸಿದ್ದೇಶ್ವರ ಸಂಸ್ಥಾನ ಮಠದ ಶ್ರೀ ಷ.ಬ್ರ.ಉಪಾಚಾರ್ಯ ರತ್ನ ತೋಟೇಂದ್ರ ಮಹಾಸ್ವಾಮಿಗಳ ಹಸ್ತದಿಂದ ನೆರವೇರಿತು. ಶ್ರದ್ಧಾಂಜಲಿ

ಸಭೆಯಲ್ಲಿ ನಿರ್ಣಯಿಸಿದಂತೆ ಯಾವ ಕಾರ್ಯವೂ ಕೈಗೂಡಲಿಲ್ಲ. ಉಪಸಮಿತಿಯ ಮೂವರು ಸದಸ್ಯರು ಶಾಸ್ತ್ರಿಗಳು ಹೋದ ದಾರಿಯಲ್ಲಿಯೇ ಹೋದರು.

ಸ್ಮಾರಕ ಸಮಿತಿಯ ಯಾವದೇ ನೆರವಿಗೆ ಕಾಯದೆ ಜಿ.ಎಂ. ಗುರುಸಿದ್ಧಶಾಸ್ತ್ರಿಗಳು ಸಮಾಧಿ ನೆಲಸಮನಾಗಿ ಇರಬಾರದೆಂದು ಅವರ ಶಿಷ್ಯರಲ್ಲಿ ಒಬ್ಬರಾದ ಲಿಂಗನಗೌಡ ಮಲ್ಹಾರ ಅವರು ಸುಮಾರು ೭೫ ಸಾವಿರ ರೂಪಾಯಿ ಖರ್ಚು ಮಾಡಿ ಶಾಸ್ತ್ರಿಗಳ ಸಮಾಧಿ ಮಂಟಪ ಪೂರ್ಣಗೊಳಿಸಿದರು. ಈ ಸ್ಮಾರಕ ಸಮಾಧಿ ಮಂಟಪ ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ ಅಭಿಮಾನಗಳ ಸಂದರ್ಶನದ ಪವಿತ್ರ, ಪುಣ್ಯ ಸ್ಥಳವಾಗಿ ಪರಿಣಮಿಸಿದೆ.